Minor
CANARESE POETICAL
ANTHOLOGY

SECOND EDITION

ಸಣ್ಣ ಕರ್ನಾಟಕ
ಕಾವ್ಯಮಾಲೆ

MANGALORE
PUBLISHED BY PFLEIDERER & RIEHM
BASEL MISSION BOOK & TRACT DEPOSITORY
1868

Minor
CANARESE POETICAL
Anthology

SECOND EDITION

ಸಣ್ಣ ಕರ್ನಾಟಕ

ಕಾವ್ಯಮಾಲೆ

MANGALORE
PRINTED BY PLEBST & STOLZ, BASEL MISSION PRESS
1868

ಕನ್ನಡ

ಛನ್ದೋವಿದ್ಯೆ.

ಛಂದಸ್ಸಿನ ವಿದ್ಯೆ ಅಂದರೆ ಗಣಗಳ ಮೇಲೆಯೂ
ಪ್ರಾಸದ ಮೇಲೆಯೂ ಇಷ್ಟ ಶ್ಲೋಕಗಳನ್ನು ಕಟ್ಟುವದು.

I. ಗಣಗಳ ವಿಷಯವು.

ಕನ್ನಡ ಭಾಷೆಯಲ್ಲಿ ಹ್ರಸ್ವ ಮತ್ತು ದೀರ್ಘ ಅಕ್ಷರಗಳು ಅವೆ. ಹ್ರಸ್ವ ಅಕ್ಷರಗಳನ್ನು ಉಚ್ಚರಿಸುವದಕ್ಕೆ ಸ್ವಲ್ಪ ಕಾಲ ಬೇಕು, ದೀರ್ಘ ಅಕ್ಷರಗಳನ್ನು ಉಚ್ಚರಿಸುವದಕ್ಕೆ ಮತ್ತಷ್ಟು ಕಾಲ ಬೇಕು. ಈ ಉಚ್ಚರಣೆಯ ಕಾಲಭೇದವನ್ನು ಕುರಿತು ಛಂದಸ್ಸಿನಲ್ಲಿ ಹೇಳುವದೇನಂದರೆ—ಒಂದು ಹ್ರಸ್ವ ಅಕ್ಷರಕ್ಕೆ ಒಂದೇ ಮಾತ್ರೆ ಅದೆ, ಒಂದು ದೀರ್ಘ ಅಕ್ಷರಕ್ಕೆ ಎರಡು ಮಾತ್ರೆಗಳು ಅವೆ.

ಅನುಸ್ವಾರದ ಅಕ್ಷರ ದೀರ್ಘವಾಗಿದೆ (ಕಂ, ವಂ, ಲಂ ಇತ್ಯಾದಿ); ವಿಸರ್ಗದ್ದು ದೀರ್ಘವಾಗಲಿ ಹ್ರಸ್ವವಾಗಲಿ ಇರುವದು (ತಃ, ಮಃ, ಸಃ ಇತ್ಯಾದಿ).

ಹ್ರಸ್ವ ಅಕ್ಷರವನ್ನು ಅಂದರೆ ಒಂದೇ ಮಾತ್ರೆಯ ಅಕ್ಷರವನ್ನು ಈ ಆವರಣಚಿನ್ಹೆಯೊಳಗೆ (⌣) ಕಾಣುವ ಚಿನ್ಹೆಯಿಂದ ಮತ್ತು ದೀರ್ಘ ಅಕ್ಷರವನ್ನು ಈ ಆವರಣಚಿನ್ಹೆಯೊಳಗೆ (—) ಕಾಣುವ ಚಿನ್ಹೆಯಿಂದ ತೋರಿಸುವ ಪದ್ಧತಿ ಅದೆ.

ಗಣವು ಅಂದರೆ ಕೆಲವು ಅಕ್ಷರಗಳ ಅಥವಾ ಮಾತ್ರೆಗಳ ಕೂಟವು.

ಕನ್ನಡ ಛಂದಸ್ಸಿನಲ್ಲಿ 3 ವಿಧದ ಗಣಗಳು ಅವೆ, ಯಾವವಂದರೆ—

1, 3 ಮಾತ್ರೆಗಳ ಗಣಗಳು

ಉದಾಹರಣೆಗಳು—'ಕುದುರೆ, ಹಡಗ, ಕಿವಿಯು, ಇರುವ, ಹಾವು, ಕಂಣು, ಬೇಡ, ಬೇಕು, ಹೋಗು' ಇತ್ಯಾದಿ ಶಬ್ದಗಳು 3 ಮಾತ್ರೆಗಳ ಗಣಗಳಾಗಿವೆ.

2, 4 ಮಾತ್ರೆಗಳ ಗಣಗಳು

ಉದಾಹರಣೆಗಳು—'ಕುದುರೆಯು, ಹಡಗವು, ಕಿವಿಗಳು, ಇರುವವು, ಹಾವಿನ, ಕಂಣಿನ, ಬೇಡವೆ, ಬೇಕೋ, ಹೋಗುವ' ಇತ್ಯಾದಿ.

3, 5 ಮಾತ್ರೆಗಳ ಗಣಗಳು

ಉದಾಹರಣೆಗಳು—ಆ ಕುದುರೆ, ಹಡಗಗಳು, ಕಿವಿಯಂನು, ಇರುವದಕೆ, ನಡೆ ಹುಡುಗ, ಬೇಗ ಬಾ, ಅದ ನೋಡು ಇತ್ಯಾದಿ.

ಶ್ಲೋಕಗಳನ್ನು ಕಟ್ಟುವದಕ್ಕಾಗಿ ನೇಮಕದ ಗಣಗಳನ್ನು ಸಾಲುಸಾಲಾಗಿ ಇಡುತ್ತಾ ಬರ ಬೇಕು.

ಒಂದೇ ಗಣದಲ್ಲ್ಯಾಗಲಿ ಗಣಗಳ ಸಾಲಿನಲ್ಲ್ಯಾಗಲಿ ಒಂದೇ ಮಾತ್ರೆಯ ಅಕರದ ಮುಂದೆ ಒಂದು ಒತ್ತಕ್ಷರ ಬಂದರೆ, ಆ ಹಿಂದಿನ ಒಂದೇ ಮಾತ್ರೆಯ ಅಕ್ಷರವು 2 ಮಾತ್ರೆಯದಾಗುತ್ತದೆ.

ಉದಾಹರಣೆಗಳು—1ನೇ ಶ್ಲೋಕದಲ್ಲಿ 'ಮತಿಯನ್ನ್' ಎಂತ ಅದೆ; ಇದರಲ್ಲಿ 'ಯ' ಎಂಬದು 2 ಮಾತ್ರೆಯದು. ಅಲ್ಲಿಯೇ 'ಜಿಹ್ವೆಗೆ' ಎಂತ ಅದೆ; ಇದರಲ್ಲಿ 'ಜಿ' ಎಂಬದು 2 ಮಾತ್ರೆಯದು. ಅಲ್ಲಿಯೇ 'ನಿನ್ನ' ಎಂತ ಅದೆ; ಇದರಲ್ಲಿ 'ನಿ' ಎಂಬದು 2 ಮಾತ್ರೆಯದು. ಅಲ್ಲಿಯೇ 'ಪೊಗಳುವದಿತ್ತು' ಎಂತ ಅದೆ; ಇದರಲ್ಲಿ 'ದಿ' ಎಂಬದು 2 ಮಾತ್ರೆಯದು.—2ನೇ ಶ್ಲೋಕದಲ್ಲಿ 'ಸಮಸ್ತ' ಎಂತ ಅದೆ; ಇದರಲ್ಲಿ 'ಮ' ಎಂಬದು 2 ಮಾತ್ರೆಯದು.—5ನೇ ಶ್ಲೋಕದಲ್ಲಿ 'ರಸದೊಳ್ ಪಾಲೇ' (ರಸದೊಳ್ಪಾಲೇ) ಎಂತ ಅದೆ; ಇದರಲ್ಲಿ 'ದೊ' ಎಂಬದು 2 ಮಾತ್ರೆಯದು.—6ನೇ ಶ್ಲೋಕದಲ್ಲಿ 'ಬದುಕಿದಡೇನು ಶ್ವಾನ' ಎಂತ ಅದೆ; ಇದರಲ್ಲಿ 'ನು' ಎಂಬದು 2 ಮಾತ್ರೆಯದು.—19ನೇ ಶ್ಲೋಕದಲ್ಲಿ 'ಸಂಸಾರದ ಧ್ರುವ' ಎಂತ ಅದೆ; ಇದರಲ್ಲಿ 'ದ' ಎಂಬದು 2 ಮಾತ್ರೆಯದು.—26ನೇ ಶ್ಲೋಕದಲ್ಲಿ 'ಹಿಡಿಯೊಳ್ ತುಂಬ್ಯ' (ಹಿಡಿಯೊಳ್ತುಂಬ್ಯ) ಎಂತ ಅದೆ; ಇದರಲ್ಲಿ 'ಯೊ' ಎಂಬದು 2 ಮಾತ್ರೆಯದು.—33ನೇದರಲ್ಲಿ 'ಮುಕ್ತಿಗೆ' ಎಂತ ಅದೆ; ಇದರಲ್ಲಿ 'ಮು' ಎಂಬದು 2 ಮಾತ್ರೆಯದು.—37ನೇದರಲ್ಲಿ 'ಸುಪ್ರಖ್ಯಾತ' ಎಂತ ಅದೆ; ಇದರಲ್ಲಿ 'ಸು' ಎಂಬದೂ 'ಪ್ರ' ಎಂಬದೂ 2 ಮಾತ್ರೆಯವು.—39ನೇದರಲ್ಲಿ 'ರುತುಪರ್ನಕ್ಷಿತೀ' ಎಂತ ಅದೆ; ಇದರಲ್ಲಿ 'ನ' ಎಂಬದು 2 ಮಾತ್ರೆಯದು.—42ನೇದರಲ್ಲಿ 'ಪುಣ್ಯಶ್ಲೋಕರಿಗೆ' ಎಂತ ಅದೆ; ಇದರಲ್ಲಿ 'ಪು' ಎಂಬದೂ 'ಣ್ಯ' ಎಂಬದೂ 2 ಮಾತ್ರೆಯವು.

'ಗ್ರ, ದ್ರ, ಗ್ರೀ, ಗರ್' ಇತ್ಯಾದಿ ಸಕಲ ರಕಾರ ಒತ್ತಕ್ಷರಗಳ ಹಿಂದಿನ ಒಂದೇ ಮಾತ್ರೆಯ ಅಕ್ಷರವೂ 'ಜ್ಞ' ಎಂಬ ಒತ್ತಕ್ಷರದ ಹಿಂದಿನ ಅಂಥ ಅಕ್ಷರವೂ 2 ಮಾತ್ರೆಯದ್ದಾಗದೆ ಇರ ಬಹುದು.

ಉದಾಹರಣೆಗಳು—5ನೇ ಶ್ಲೋಕದಲ್ಲಿ 'ಸರ್ವ ಗ್ರಹಂಗಳೊಳ್ಗೆ' ಎಂಬದು; 222ನೇದರಲ್ಲಿ 'ಚಂದನ ದ್ರುಮಂಗಳಂ' ಎಂಬದು; 227ನೇದರಲ್ಲಿ 'ನಡೆದುದು ಗ್ರೀಷ್ಮ' ಎಂಬದು; 242ನೇದರಲ್ಲಿ 'ಅಲರಲರ್ಗಳಾ' ಎಂಬದು; 28ನೇದರಲ್ಲಿ 'ಮುಕ್ತಿಗೆ ಜ್ಞಾನ' ಎಂಬದು. ಈ ಉದಾಹರಣೆಗಳನ್ನು ತಿಳು ಕೊಳ್ಳುವದಕ್ಕಾಗಿ ಅಲ್ಲಲ್ಲಿಯ ಗಣಗಳನ್ನು ಶೋಧಿಸ ಬೇಕು.

ಮೇಲೆ ಹೇಳಿದ ಕ್ರಮಕ್ಕೆ ಸಮವಾಗದ ಪ್ರತಿಷೇಧಗಳು (Exceptions) ಕಾಣು ವ ಪಕ್ಷದಲ್ಲಿ ಅವಕ್ಕೆ ಅನುಸರಿಸುವದು ಕೀರ್ತಿಯಲ್ಲ.

ಒಂದೊಂದು ಗಣದ ಆರಂಭದಲ್ಲಿ ಯಾವಾಗಲೂ 2 ಮಾತ್ರೆಗಳನ್ನು ಪ್ರತ್ಯೇಕ ವಾಗಿ ಹಿಡುಕೊಳ್ಳ ಬರುವ ಹಾಗೆ ಆಗ ಬೇಕು, ಅಂದರೆ ಅಲ್ಲಿ ಯಾವಾಗಲೂ 2 ಪ್ರ ತ್ಯೇಕವಾದ ಹ್ರಸ್ವ ಅಕ್ಷರಗಳಾಗಲಿ, 1 ದೀರ್ಘ ಅಕ್ಷರವಾಗಲಿ ಇರ ಬೇಕು.

ಉದಾಹರಣೆಗಳು—'ಎಲೋ, ಇಗೋ, ಕಡೇ, ಅನೀತಿ, ವಿರೋಧ, ಸಹಾಯ' ಇತ್ಯಾದಿ ಪ್ರಕಾರವಾಗಿ ಒಂದು ಗಣವು ಆರಂಭಿಸಲೂ ಇರಲೂ ಬಾರದು; ಆದರೆ 'ಎಲೋ, ಇಗೋ, ಕಡೆ ಯ, ಧರೆಯ, ನೀತಿ, ಬುದ್ಧಿ, ವಾಕ್ಯ, ದೇವ, ನೋಡು' ಎಂಬ ಪ್ರಕಾರವು ಒಂದು ಗಣದ ಆರಂ ಭದಲ್ಲಿಯೂ (ಗಣವು 3 ಮಾತ್ರೆಯದಾಗಿದ್ದರೆ) ಗಣವಾಗಿಯೂ ಇರ ತಕ್ಕದ್ದು.

ಅರ್ಧ ಶ್ಲೋಕವು ತೀರಿದಲ್ಲಿ ಗಣಗಳ ಒಂದು ಸಾಲು ತೀರಿತು.

ಗಣಗಳ ಒಂದು ಒಂದು ಸಾಲಿನ ಆರಂಭದಲ್ಲಿ ಮಾತ್ರ ವ್ಯಂಜನವಿಲ್ಲದ ಸ್ವರ ವು ಇರ ಬಹುದು ಅಂದರೆ ಅರ್ಧ ಅರ್ಧ ಶ್ಲೋಕದ ಆರಂಭದಲ್ಲಿ ಮಾತ್ರ ಅಂಥ ಸ್ವರ ವು ಇರ ಬಹುದು; ಉಳಿದ ಸ್ವರಗಳೆಲ್ಲಾ ಸಂಧಿ ಪ್ರಕರಣದ ಮೇಲೆ ವ್ಯಂಜನದವುಗ ಳಾಗಿರ ಬೇಕು. ಇದಕ್ಕೆ ದಾಸರ ಪದಗಳಲ್ಲಿ ಪ್ರತಿಷೇಧಗಳು ಶಿಕ್ಕುತ್ತವೆ, ಆದರೆ ಅ ವು ಪ್ರಮಾಣವಾಗಿರ ಕೂಡದು.

ನಾವು ಛಾಪಿಸ ಕೊಟ್ಟ ಈ ಪುಸ್ತಕದಲ್ಲಿ ಗಣಸಾಲುಗಳ ನಡುವೆ ಸಹ, ಪ್ರತಿ ಷೇಧವಿಲ್ಲದಿದ್ದರೂ, ವ್ಯಂಜನವಿಲ್ಲದ ಸ್ವರಗಳು ದೃಷ್ಟಿಗೆ ಬೀಳುವದುಂಟು; ಆದರೆ ಪದ ಗಳನ್ನು ಓದುವಾಗ ಆ ಸ್ವರಗಳೆಲ್ಲಾ, ಪ್ರತಿಷೇಧವಿಲ್ಲದ ಪಕ್ಷದಲ್ಲಿ, ಸಂಧಿಯಾಗಿ ಅ ಡಗಿ ಹೋಗುತ್ತವೆ. ಅರ್ಥವನ್ನು ಲಘು ಮಾಡುವದಕ್ಕಾಗಿ, ಗಣಗಳು ಕೆಡದ ಪ ಕ್ಷದಲ್ಲಿ, ಮಾತುಗಳನ್ನು ವಿಂಗಡಿಸಲಾಯಿತು; ಹೀಗೆ ಕಾವ್ಯವನ್ನು ಬರೆಯುವದು ಯುಕ್ತವಾಗಿದೆ.

ಶ್ಲೋಕಗಳ ಪಂಕ್ತಿಗಳು ಅಂದರೆ ಚರಣಗಳು ಪದಗಳೆನ್ನಿಸುತ್ತವೆ; ಒಂದು ಶ್ಲೋಕ ದಲ್ಲಿ 2, 4, 6 ಪದಗಳು ಇರ ಬಹುದು; 4 ಪದಗಳು ಇದ್ದರೆ ಅವು ಪಾದಗಳು (Quarters) ಎಂತಲೂ ಎನ್ನಿಸುತ್ತವೆ.

1. ಭಾಮಿನೀ ಷಟ್ಪದಿಯ ಗಣಗಳು.

(1ನೇ ಶ್ಲೋಕ ನೋಡಿರಿ.)

ಈ ಛಂದಸ್ಸಿಗೆ 3 ಮಾತ್ರೆಯ ಗಣಗಳೂ 4 ಮಾತ್ರೆಯ ಗಣಗಳೂ ಬೇಕು. ಮೊ ದಲು 3 ಮಾತ್ರೆಯ ಗಣ, ಆ ಮೇಲೆ 4 ಮಾತ್ರೆಯದು, ಆ ಮೇಲೆ ತಿರಿಗಿ 3 ಮಾತ್ರೆಯ

ದು, ಆ ಮೇಲೆ ತಿರಿಗಿ 4 ಮಾತ್ರೆಯದು ಎಂಬ ಪ್ರಕಾರವಾಗಿ ಗಣಗಳನ್ನು ಹಾಕುತ್ತಾ ಬರಬೇಕು. ಗಣಗಳನ್ನೂ ಗಣಮಾತ್ರೆಗಳನ್ನೂ ತೋರಿಸುವ ಪಟ್ಟಿ ಇಲ್ಲಿ ಛಾಪಿಸಿಅದೆ—

ಗಣಗಳ ಮತ್ತು ಗಣಮಾತ್ರೆಗಳ ಮೊದಲಿನ ಸಾಲು ಅಥವಾ ಅರ್ಧ ಶ್ಲೋಕ.

3	4	3	4	1ನೇ ಪದ			
3	4	3	4	2ನೇದು			
3	4	3	4	3	4	1	3ನೇದು, 1ನೇ ಗಣಸಾಲು

ಈ ಸಾಲಿನಲ್ಲಿ 14 ಗಣಗಳೂ ಸಾಲಿನ ಕಡೇಲಿ ಹೆಚ್ಚಾದ 1 ಮಾತ್ರೆಯೂ ಕಾಣುತ್ತವೆ. ಮತ್ತೊಂದು ಅರ್ಧ ಶ್ಲೋಕ ಅದೇ ಪ್ರಕಾರವಾಗಿರ ಬೇಕು. ಪೂರ್ಣ ಶ್ಲೋಕದಲ್ಲಿ 6 ಪದಗಳಿರುವದರಿಂದ ಷಟ್ಪದಿ ಎಂಬ ಹೆಸರು ಹುಟ್ಟಿತು.

3 ಮಾತ್ರೆಯ ಆ ಗಣಗಳ ಅಕ್ಷರಗಳು 2 ವಿಧವಾಗಿರ ಬಹುದು; 4 ಮಾತ್ರೆಯ ಆ ಗಣಗಳ ಅಕ್ಷರಗಳು 4 ವಿಧವಾಗಿರ ಬಹುದು. ಆಯಾ ವಿಧಗಳನ್ನು ತೋರಿಸುವದಕ್ಕಾಗಿ ಹಿಂದೆ ಗೊತ್ತು ಮಾಡಿದ, ಹ್ರಸ್ವಾಕ್ಷರಗಳನ್ನೂ ದೀರ್ಘಾಕ್ಷರಗಳನ್ನೂ ಕಾಣಿಸುವ ಎರಡು ಚಿನ್ಹೆಗಳನ್ನು (∪) (—) ಪ್ರಯೋಗಿಸುವ.

ಹಾಗಾದರೆ 3 ಮಾತ್ರೆಯ ಗಣಗಳ ಅಕ್ಷರಗಳ 1ನೇ ವಿಧವು ಹ್ಯಾಗಂದರೆ—(∪∪∪); 2ನೇ ವಿಧವು ಹ್ಯಾಗಂದರೆ (—∪).

∪∪∪ ∪∪∪ ∪∪∪
1ನೇ ವಿಧದ ಉದಾಹರಣೆಗಳು—ಅದರ, ಅವನು, ತೆಗದು ಇತ್ಯಾದಿ.

— ∪ — ∪ — ∪
2ನೇ ವಿಧದ ಉದಾಹರಣೆಗಳು—ಹೋಗು, ಬೇಗ, ಬೀಳು ಇತ್ಯಾದಿ.

ಮತ್ತು 4 ಮಾತ್ರೆಯ ಗಣಗಳ ಅಕ್ಷರಗಳ 1ನೇ ವಿಧವು ಹ್ಯಾಗಂದರೆ (∪∪∪∪); 2ನೇ ವಿಧವು ಹ್ಯಾಗಂದರೆ (∪∪—); 3ನೇ ವಿಧವು ಹ್ಯಾಗಂದರೆ (—∪∪); 4ನೇ ವಿಧವು ಹ್ಯಾಗಂದರೆ (— —).

∪∪∪∪ ∪∪ ∪ ∪ ∪∪∪∪
1ನೇ ವಿಧದ ಉದಾಹರಣೆಗಳು—ಅವನಿಗೆ, ತಿಳಿಯುವ, ಗಲಿಬಿಲಿ ಇತ್ಯಾದಿ.

∪∪— ∪∪— ∪∪—
2ನೇ ವಿಧದ ಉದಾಹರಣೆಗಳು—ನರನೇ, ತರದಿಂ, ಅವನಂ ಇತ್ಯಾದಿ.

—∪∪ —∪∪ — ∪∪
3ನೇ ವಿಧದ ಉದಾಹರಣೆಗಳು—ಆಗಲಿ, ಕೇಳಲೆ, ಭೋಜನ ಇತ್ಯಾದಿ.

— — — — — —
4ನೇ ವಿಧದ ಉದಾಹರಣೆಗಳು—ಇಟ್ಟಾ, ಕೇಳೋ, ಪುಣ್ಯಂ ಇತ್ಯಾದಿ.

ಈ ಗ್ರಂಥದಲ್ಲಿಯ 1ನೇ ಪೂರ್ಣ ಶ್ಲೋಕವನ್ನು ಇಲ್ಲಿ ಹಾಕಿ, ಅದರ 28 ಗಣಗಳನ್ನೂ ಒಂದೊಂದು ಗಣಸಾಲಿನ ಹೆಚ್ಚಾದ ಮಾತ್ರೆಯನ್ನೂ 3 ಮತ್ತು 4 ಮಾತ್ರೆಗಳು ಹೊಂದ ಬಹುದಾದ ಅಕ್ಷರವಿಧಗಳನ್ನೂ ತೋರಿಸುವ—

1	2	3	4				
⏑⏑⏑	⏑⏑⏑⏑	—⏑	—⏑⏑				
ಗಿಳಿಯು	ಮರಿಯುನು	ತಂದು	ಪಂಜರ				1ನೇ ಪದ
5	6	7	8				
⏑⏑⏑	—⏑⏑	⏑⏑⏑	⏑⏑ ⏑⏑				
ದೊಳಗೆ	ಪೋಷಿಸಿ	ಕಲಿಸಿ	ಮೃದು ನುಡಿ				2ನೇದು
9	10	11	12	13	14		
⏑⏑⏑	—⏑⏑	—⏑	⏑⏑⏑⏑	—⏑	—⏑⏑	⏑	
ಗಳನು	ಲಾಲಿಸಿ	ಕೇಳ್ವ	ಪರಿಣಿತ	ರಂತೆ	ನೀನೆನ	ಗೆ||	3ನೇದು, [1ನೇ ಗಣಸಾಲು
15	16	17	18				
⏑⏑⏑	⏑⏑—	—⏑	—⏑⏑				
ತಿಳುಹು	ಮತಿಯನ್ನ	ಎನ್ನ	ಜಿಹ್ವೆಗೆ				4ನೇದು
19	20	21	22				
⏑⏑⏑	—⏑⏑	—⏑	——				
ಮೊಳಗು	ವಂದದಿ	ನಿನ್ನ	ನಾಮಾ				5ನೇದು
23	24	25	26	27	28		
⏑⏑⏑	⏑⏑⏑⏑	—⏑	—⏑⏑	—⏑	⏑⏑⏑⏑	⏑	
ವಳಿಯು	ಪೊಗಳುವ	ದಿತ್ತು	ರಕ್ಷಿಸು	ನಮ್ಮ	ನನವರ	ತ||	6ನೇದು, [2ನೇ ಗಣಸಾಲು

ವಿವರವು—1, 5, 7, 9, 15, 19, 23=3 ಮಾತ್ರೆಯ ಗಣಗಳ ಅಕ್ಷರಗಳ 1ನೇ ವಿಧ.

3, 11, 13, 17, 21, 25, 27=3 ಮಾತ್ರೆಯ ಗಣಗಳ ಅಕ್ಷರಗಳ 2ನೇ ವಿಧ.

2, 8, 12, 24, 28=4 ಮಾತ್ರೆಯ ಗಣಗಳ ಅಕ್ಷರಗಳ 1ನೇ ವಿಧ.

16=4 ಮಾತ್ರೆಯ ಗಣಗಳ ಅಕ್ಷರಗಳ 2ನೇ ವಿಧ.

4, 6, 10, 14, 18, 20, 26=4 ಮಾತ್ರೆಯ ಗಣಗಳ ಅಕ್ಷರಗಳ 3ನೇ ವಿಧ.

22=4 ಮಾತ್ರೆಯ ಗಣಗಳ ಅಕ್ಷರಗಳ 4ನೇ ವಿಧ.

ಗಣಗಳ ಒಂದೊಂದು ಸಾಲಿನ ಹೆಚ್ಚಾದ ಮಾತ್ರೆಯು ಹೇಳುವದರಲ್ಲಿ ಮಾತ್ರ ದೀರ್ಘವಾಗುತ್ತದೆ.

ಕಡೇ ಪ್ರಮಾಣ—ಭಾಮಿನೀ ಷಟ್ಪದಿಯಲ್ಲಿ ಗಣಗಳೂ ಹೆಚ್ಚಾದ ಮಾತ್ರೆಗಳೂ ಯಾವಾಗಲೂ ಹೇಳಿದಷ್ಟು ಬರ ಬೇಕು; ಆದರೆ ಗಣಗಳ ಮಾತ್ರೆಗಳ ಅಕ್ಷರ ವಿಧವು, ಗೊತ್ತು ಮಾಡಿದ ವಿಧಗಳಿಗೆ ಅನುಸಾರವಾಗಿ, ಒಂದೊಂದು ಶ್ಲೋಕದಲ್ಲಿ ಬೇರೆ ಬೇರೆ ಆಗಿರ ಬಹುದು. (ಈ ಕಡೇ ಪ್ರಮಾಣದ ಅರ್ಥವು ಸಕಲ ವಿಧದ ಸಾಧಾರಣ ಶ್ಲೋಕಗಳ ರಚನೆಯಲ್ಲಿ ಬೇಕು.)

2. ವಾರ್ಧಕ ಷಟ್ಪದೀ ಗಣಗಳು.

(140ನೇ ಶ್ಲೋಕ ನೋಡಿರಿ.)

ಈ ಛಂದಸ್ಸಿಗೆ 5 ಮಾತ್ರೆಗಳ ಗಣಗಳೇ ಬೇಕು. 5 ಮಾತ್ರೆಯ ಈ ಗಣಗಳ ಅಕ್ಷರಗಳು ಹೊಂದ ಬಹುದಾದ 6 ವಿಧಗಳು ಹಿಂದೆ ಪ್ರಯೋಗಿಸಿದ ಚಿನ್ಹೆಗಳಲ್ಲಿ ಕಾಣುವದು ಹ್ಯಾಗಂದರೆ—

1ನೇ ವಿಧವು (∪∪∪∪∪); 2ನೇ ವಿಧವು (∪∪∪—); 3ನೇ ವಿಧವು (∪∪—∪); 4ನೇ ವಿಧವು (—∪—); 5ನೇ ವಿಧವು (—∪∪∪); 6ನೇ ವಿಧವು (——∪).

ಈ ಗ್ರಂಥದಲ್ಲಿಯ 140ನೇ ಪೂರ್ಣ ಶ್ಲೋಕವನ್ನು ಇಲ್ಲಿ ಹಾಕಿ, ಅದರ 28 ಗಣಗಳನ್ನೂ ಒಂದೊಂದು ಗಣಸಾಲಿನ ಹೆಚ್ಚಾದ ಮಾತ್ರೆಯನ್ನೂ 5 ಮಾತ್ರೆಗಳು ಹೊಂದ ಬಹುದಾದ ಅಕ್ಷರವಿಧಗಳನ್ನೂ ತೋರಿಸುವ—

1	2	3	4			
——∪	——∪	— —∪	—∪—			
ಮಾವಂಗೆ	ಭಾವಂಗೆ	ಮೇಣ್ ಅತ್ತೆ	ಗೈದೆ ಸಂ			1ನೇ ಪದ
5	6	7	8			
—∪∪∪	—∪∪∪	— ∪—	— ∪∪∪			
ಭಾವಿಸುತ	ಸೇವಿಸುತ	ಕಾಂತನಂ	ಸದ್ ವ್ರತದಿ			2ನೇದು
9	10	11	12	13	14	
— ∪∪∪	∪ ∪∪∪∪	— ∪—	∪∪∪ ∪∪	— —∪	— —∪	∪
ನೋವುತಿಪ	ಯುವತಿಗಿಹ	ಲೋಕದೊಳ್	ಸುಕೃತ ಫಲ	ಮಾಯತ್ತು!	ಮಂತ್ ಅಲ್ಲ	ದೆ
						[3ನೇದು, 1ನೇ ಗಣಸಾಲು
15	16	17	18			
—∪—	—∪—	∪∪∪∪∪	∪ ∪—∪			
ಪಾವಿನಂತ್	ಆವಿನಂತ್	ಅಡಿಗಡಿಗೆ	ಮೊರದೆದ್ದು			4ನೇದು
19	20	21	22			
—∪∪∪	—∪∪∪	∪∪∪∪∪	— — ∪			
ಡಾವರಿಸಿ	ಸೀವರಿಸಿ	ಮನೆಗೆಲಸ	ಮಂ ಗೈಯು			5ನೇದು
23	24	25	26	27	28	
— ∪∪∪	— ∪∪∪	— ∪∪∪	∪∪∪ —	∪∪∪ —	∪ ∪∪—	∪
ದಾ ವನಿತೆ	ಸಾವ್ ಅನಿತೆ	ಲೇಸ್ ಎನಿಸ	ದಿಹಳೆ ತತ್	ಪತಿಗೆ ತದ್	ಗೃಹಜನಕ್	ಕೆ
						6ನೇದು, 2ನೇ ಗಣಸಾಲು

ವಿವರವು—10, 12, 21=1ನೇ ಗಣಾಕ್ಷರವಿಧ.—26, 27, 28=2ನೇದು.—18=3ನೇದು.—4, 7, 11, 15, 16=4ನೇದು.—5, 6, 8, 9, 19, 20, 23, 24, 25=5ನೇದು.—1, 2, 3, 13, 14, 22=6ನೇದು.

ಭಾಮಿನೀ ಷಟ್ಪದಿಗೆ ಹೇಳಿದ ಕಡೇ ಪ್ರಮಾಣವನ್ನು ವಾರ್ಧಕ ಷಟ್ಪದಿಯನ್ನು ಕುರಿತು ಸಹ ಹೇಳ ಬೇಕು.

3. ರಾಗ ಮುಖಾರಿ; ಝಂಪೆ ತಾಳ.

(63ನೇ, 95ನೇ, 100ನೇ ಶ್ಲೋಕಗಳನ್ನು ನೋಡಿರಿ.)

ಇದರ ಗಣಗಳು, ವಾರ್ಧಕದಲ್ಲಿ ಇದ್ದ ಹಾಗೆ, 5 ಮಾತ್ರೆಯವುಗಳಾಗಿವೆ; ಮತ್ತು ಇದರ ಗಣಗಳ ಅಕ್ಷರಗಳು ವಾರ್ಧಕದ ಗಣಾಕ್ಷರಗಳ 6 ರೂಪಗಳನ್ನೇ ಹೊಂದು

ತ್ತವೆ. 63ನೇ ಪಲ್ಲವನ್ನೂ ಪೂರ್ಣ ಶ್ಲೋಕವನ್ನೂ ಹಾಕಿ, ಗಣಗಳನ್ನೂ* ತಾಳಗಳನ್ನೂ ಈ ಆವರಣಚಿನ್ಹೆಯೊಳಗೆ (.) ಕಾಣುವ ಚಿನ್ಹೆಯಿಂದ ತಾಳಪೆಟ್ಟುಗಳನ್ನೂ† ತೋರಿಸುವ—

ಪಲ್ಲ

ಆರು ಹಿತ	ವರು ನಿನಗೆ	1ನೇ ತಾಳ
ಮೂರು ಮಂ	ದಿಗಳೊಳಗೆ	1ನೇ ಪದ (ಪಾದ), 2ನೇ ತಾಳ
ನಾರಿಯೋ	ಧಾರಿಣಿಯೋ	3ನೇ ತಾಳ
ಬಲು ಧನದ	ಸಿರಿಯೊ— —	‖ 2ನೇ ಪದ (ಪಾದ), 1ನೇ ಗಣಸಾಲು, 4ನೇ ತಾಳ

ಶ್ಲೋಕ

ಅನ್ಯರಲಿ	ಜನಿಸಿರ್ದ	1ನೇ ತಾಳ
ಅಂಗನೆಯ	ಕರತಂದು	1ನೇ ಪದ (ಪಾದ), 2ನೇ ತಾಳ
ತನ್ನ ಮನೆ	ಗವಳ ಯಜ	3ನೇ ತಾಳ
ಮಾನಿಯೆನಿ	ಸೆ— — — —	‖ 2ನೇ ಪದ (ಪಾದ), 1ನೇ ಗಣಸಾಲು, 4ನೇ ತಾಳ
ಭಿನ್ನವಿಲ್	ಲದೆಯರ್ಧ	5ನೇ ತಾಳ (ಅಪೂರ್ಣವಾದ್ದು)
ದೇಹವೆನಿ	ಸುವ ಸತಿಯು	3ನೇ ಪದ, 6ನೇ ತಾಳ
ಕಣ್ಣಿನಲಿ	ನೋಡಲಂ	7ನೇ ತಾಳ
ಮಳು ಕಾಲ	ವಶದಿ— —	‖ 4ನೇ ಪದ, 1ನೇ ಗಣಸಾಲು, 8ನೇ ತಾಳ (ಅಪೂರ್ಣವಾದ್ದು)

95ನೇ ಶ್ಲೋಕದಲ್ಲಿ 2ನೇ ಪದಕ್ಕೆ 2 ಮಾತ್ರೆಗಳು ಹೆಚ್ಚಿರುವದರಿಂದ ಇವುಗಳ ಎರಡನೇದರಲ್ಲಿ ಮತ್ತೊಂದು ಪೆಟ್ಟು ಬೀಳ ಬೇಕು; ಇಲ್ಲಿಯ 'ವಶದಿ' ಎಂಬದರ ಹಾಗೆ.

4. ರಾಗ ಆನಂದಭೈರವಿ; ಝಂಪೆ ತಾಳ.

(128ನೇ ಶ್ಲೋಕ ನೋಡಿರಿ.)

ಇದರ ಗಣಗಳು ಸಹ 5 ಮಾತ್ರೆಯವುಗಳು; ಮತ್ತು ಗಣಾಕ್ಷರಗಳು ಸಹ ಗೊತ್ತು ಮಾಡಿದ 6 ರೂಪಗಳನ್ನು ಹೊಂದುತ್ತವೆ. ಆದರೆ ರಾಗ ಮುಖಾರಿಗೂ ರಾಗ ಆನಂದಭೈರವಿಗೂ ವ್ಯತ್ಯಾಸವಿರುವದರಿಂದ ಈ ಕಡೆಯದರ ಪದಗಳು ಸ್ವಲ್ಪ ಬೇರೆ ಆಗುತ್ತವೆ. 128ನೇ ಪಲ್ಲವನ್ನೂ ಶ್ಲೋಕವನ್ನೂ ಹಾಕಿ, ಗಣಗಳನ್ನೂ ತಾಳಗಳನ್ನೂ ತಾಳಪೆಟ್ಟುಗಳನ್ನೂ ತೋರಿಸುವ—

---

*ದಾಸರ ಪದಗಳ ಎಲ್ಲಾ ಗಣಗಳನ್ನು ಹಿಂದೆ ಹೇಳಿದ ಮಾತ್ರಾಕ್ರಮಕ್ಕನುಸಾರವಾಗಿ ಕಟ್ಟಿ ಹಾಕಲಾಯಿತು; ಈ ಪ್ರಕಾರದಿಂದ ಮಾತ್ರ ಹುಡುಗರಿಗೆ ಅಂಥ ಪದಗಳ ರಚನೆಯು ಸ್ವಲ್ಪ ತಿಳಿದೀತು.

†ತಾಳಪೆಟ್ಟುಗಳನ್ನು ಸಹ ಒಂದು ವಿಧವಾಗಿ ತೋರಿಸುವದಕ್ಕೆ ಪ್ರಯತ್ನ ಪಟ್ಟೆವು; ಆದರೂ ಅವನ್ನು ಬಲ್ಲವರಿಂದ ಬಡಿಸಿ ಕೊಂಡರೆ ಹೊರ್ತು ನೆಟ್ಟಗೆ ಕಲಿಯುವದಕ್ಕೆ ಬೇರೆ ಉಪಾಯವಿಲ್ಲ.

ಪಲ್ಲ

ಏನ ಮಾ	ಡಲಿ ನನ್ನ		1ನೇ ತಾಳ
ದೇವ——	‖ ಈ ಬೆಳೆಯು		1ನೇ ಪದ, 2ನೇ ತಾಳ
ಸೋನೆಯಿಲ್	ಲದಲುರಿದು	ದು ‖	2ನೇ ಪದ, 1ನೇ ಗಣಸಾಲು, 3ನೇ ತಾಳ (1 ಪೆಟ್ಟು ಹೆಚ್ಚಿನದು)

ಶ್ಲೋಕ

ಮೂಡ ದೆಸೆ	ಯೊಳು ಬಂದು		1ನೇ ತಾಳ
ದು————	ವೃಷ್ಟಿಯಾ		1ನೇ ಪದ, 2ನೇ ತಾಳ
ಬಡಗ ದೆಸೆ	ಯೊಳು ಸುರಿದು	ದು ‖	2ನೇ ಪದ, 1ನೇ ಗಣಸಾಲು, 3ನೇ ತಾಳ (1 ಪೆಟ್ಟು ಹೆಚ್ಚಿನದು)
ಎಡೆ ಬಿಡದೆ	ತೆಂಕ ಕಡೆ		4ನೇ ತಾಳ
ಯುಲಿ ಹೊಡೆದ	ಮಳೆಯು ತಾ		3ನೇ ಪದ, 5ನೇ ತಾಳ
ನಡುವೆ ಬಿಡು	ವದು ಯಾತ	ಕೆ ‖	4ನೇ ಪದ, 2ನೇ ಗಣಸಾಲು, 6ನೇ ತಾಳ (1 ಪೆಟ್ಟು ಹೆಚ್ಚಿನದು)

5. ರಾಗ ಶಂಕರಾಭರಣ; ಆದಿ ತಾಳ.

(68ನೇ, 78ನೇ ಶ್ಲೋಕಗಳನ್ನು ನೋಡಿರಿ.)

ಇದರ ಗಣಗಳು 4 ಮಾತ್ರೆಯವುಗಳು; ಭಾಮಿನೀ ಷಟ್ಪದಿಯಲ್ಲಿ ಪ್ರಯೋಗಿಸಿದ 4 ಮಾತ್ರೆಯ ಗಣಗಳ ಹಾಗೆಯೇ ಇವುಗಳನ್ನು ಕಟ್ಟಬೇಕು. 68ನೇ ಪಲ್ಲವನ್ನೂ ಅರ್ಧ ಶ್ಲೋಕವನ್ನೂ ಹಾಕಿ, ಗಣಗಳನ್ನೂ ತಾಳಗಳನ್ನೂ ತಾಳಪೆಟ್ಟುಗಳನ್ನೂ ತೋರಿಸುವ—

ಪಲ್ಲ

ವರದ ಸು	ಹೃದಯಾ	ವರದ ಸು	ಹೃದಯಾ	1ನೇ ತಾಳ
ವರದ ಸು	ಹೃದಯಾ	ಯೆನುಮನ	ವೆ———	1ನೇ ಪದ, 2ನೇ ತಾಳ
ದುರಿತಶ	ರಧಿಯುತ್	ತರಿಸ ಬೆ	ಕಾದರೆ	3ನೇ ತಾಳ
ಪರಮ ಪ	ತಿಯ ನುತಿ	ಸಿರು ಮನ	ವೆ———	‖ 2ನೇ ಪದ, 1ನೇ ಗಣಸಾಲು, 4ನೇ ತಾಳ

ಅರ್ಧ ಶ್ಲೋಕ

ಘೋರ ತ	ರದ ಸಂ	ಸಾರವು	ದುಃಖದ	1ನೇ ತಾಳ
ವಾರಿಧಿ	ಯುದರೊಳ	ಗೇನ್ ಉಂ	ಟು———	1ನೇ ಪದ, 1ನೇ ಗಣಸಾಲು, 2ನೇ ತಾಳ
ತೋರುವ	ಶಿರಿ ಸಂ	ಪತ್ತಿನ	ನೆಲೆಯು ವಿ	3ನೇ ತಾಳ
ಚಾರಿಸ	ಲದು ಕನ	ಸಿನ ಗಂ	ಟು———	‖ 2ನೇ ಪದ, 2ನೇ ಗಣಸಾಲು, 4ನೇ ತಾಳ

ಮತ್ತೊಂದು ಅರ್ಧ ಶ್ಲೋಕದ ಗಣಗಳೂ ಹೆಚ್ಚಾದ ಮಾತ್ರೆಗಳೂ ಹಾಗೆಯೇ ಅವೆ; ಶ್ಲೋಕಗಳನ್ನು ರಚಿಸಲಿಕ್ಕೆ ಹತ್ತಿದರೆ 4 ಮಾತ್ರೆಯ ಗಣಗಳ ಅಕ್ಷರಗಳು ಭಾಮಿನಿಯಲ್ಲಿ ತೋರಿಸಿದ 4 ವಿಧಗಳಿಗೆ ಅನುಸಾರವಾಗಿ ಬರ ಬೇಕು.

6. ರಾಗ ಮಾರವಿ; ಏಕ ತಾಳ.

ಇದರ ಗಣಗಳು ರಾಗ ಶಂಕರಾಭರಣದ ಆದಿ ತಾಳದಂಥವುಗಳಾಗಿವೆ; ಆದರೆ ಗಣಸಾಲೂ ತಾಳವೂ ತಾಳಪೆಟ್ಟುಗಳೂ ಬೇರೆ. ಈ ಛಂದಸ್ಸಿಗೆ ನಮ್ಮ ಗ್ರಂಥದಲ್ಲಿ ದೃಷ್ಟಾಂತವಿಲ್ಲ, ಆದ್ದರಿಂದ ರಾವಣದಿಗ್ವಿಜಯದ ಒಂದು ಶ್ಲೋಕದ 2ನೇ ಭಾಗ ಹಾಕಿ, ಗಣಗಳನ್ನೂ ತಾಳಗಳನ್ನೂ ತಾಳಪೆಟ್ಟುಗಳನ್ನೂ ತೋರಿಸುವ—

(ಪನ್ನಗ)	ಚಯುಗಳ |	ಕಟ್ಟಿದ |	1ನೇ ತಾಳ
	ಶ್ವಯುಗಳ |	ಸಹಿರಣ್ |	1ನೇ ಪದ, 2ನೇ ತಾಳ
	ಮಯುಗಳ |	ಸುರಥಾ |	3ನೇ ತಾಳ
	ಲಯುಗಳೊ |	ಳುಲಿದೂ ‖	2ನೇ ಪದ, 1ನೇ ಗಣಸಾಲು, 4ನೇ ತಾಳ
		ನಡದ |	ರಾಗಾ ‖ ಪಲ್ಲ ‖ ಒಂದು ತಾಳ

ಮತ್ತೊಂದು ಅರ್ಧ ಶ್ಲೋಕವು, ಗಣಾಕ್ಷರಗಳ 4 ವಿಧಗಳಿಗೆ ಅನುಸಾರವಾಗಿ, ಹಾಗೆಯೇ ಕಟ್ಟಿ ಅದೆ. ಈ ಅರ್ಧ ಶ್ಲೋಕದ ಅರ್ಥವೇನಂದರೆ — (ಅವರು ಹಾವಿನ) ಗುಂಪುಗಳ, (ಮತ್ತು) ಕಟ್ಟಿದ ಕುದುರೆಗಳ (ಈ) ಭಂಗಾರಲೇಪವುಳ್ಳ ಒಳ್ಳೇ ರಥಗಳೆಂಬ ಆಲಯುಗಳೊಳಗೆ (=ಆ ವಾಹನಗಳ ಮೇಲೆ ಕೂತು ಕೊಂಡು) ಕೂಗು ಹಾಕಿ, ನಡೆದರು ಆಗ.

7. ರಾಗ ರೇಗುಪ್ತಿ; ಮಟ್ಟೆ ತಾಳ.

(73ನೇ ಶ್ಲೋಕ ನೋಡಿರಿ.)

ಇದರ ಗಣಗಳು ಭಾಮಿನೀ ಷಟ್ಪದಿಯ 3 ಮಾತ್ರೆಯ ಗಣಗಳಂಥವುಗಳಾಗಿವೆ. 73ನೇ ಶ್ಲೋಕವನ್ನು ಹಾಕಿ, ಗಣಗಳನ್ನೂ ತಾಳಗಳನ್ನೂ ತಾಳಪೆಟ್ಟುಗಳನ್ನೂ ತೋರಿಸುವ—

ಕೋಪ |	ವೆನ್ನು |	ಮಾಡ |	ದೀರು |	1ನೇ ಪದ, 1ನೇ ತಾಳ
ಪಾಪ |	ಕೆ ಗುರಿ |	ಯಾಗ |	ದೀರು ‖	2ನೇ ಪದ, 1ನೇ ಗಣಸಾಲು, 2ನೇ ತಾಳ
ಶಾಪ |	ಹರನ |	ನುತಿಗ |	ಳನ್ನು |	3ನೇ ಪದ, 3ನೇ ತಾಳ
ನೀ ಪ |	ರಿಸುತ |	ಲೀರು |	ಮನವೆ ‖	4ನೇ ಪದ, 2ನೇ ಗಣಸಾಲು, 4ನೇ ತಾಳ

8. ರಾಗ ಪೂರ್ವಿ; ರೂಪಕ ತಾಳ.

ಇದರ ಗಣಗಳು ರಾಗ ರೇಗುಪ್ತೀ ಮಟ್ಟೆ ತಾಳದಂಥವುಗಳಾಗಿವೆ. ನಮ್ಮ ಗ್ರಂಥದಲ್ಲಿ ಅದಕ್ಕೆ ದೃಷ್ಟಾಂತವಿಲ್ಲ; ಆದರೆ ಅದರ ಪಲ್ಲವನ್ನೂ ಒಂದು ಶ್ಲೋಕವನ್ನೂ ಹಾಕಿ, ಗಣಗಳನ್ನೂ ತಾಳಗಳನ್ನೂ ತಾಳಪೆಟ್ಟುಗಳನ್ನೂ ತೋರಿಸುವ—

ಪಲ್ಲಿ

ಚಿಂತೆ	ಯಾತ	ಕೋ		1ನೇ ತಾಳ
		ಬಯಲ		2ನೇ ತಾಳ
ಭ್ರಾಂತಿ	ಯಾತ	ಕೊ	‖	
ಅಂತ	ರಂಗ	ಶುದ್ಧಿ	ಹೊಂದು	3ನೇ ತಾಳ
ಪಂತೆ	ಕಷ್ಟ	ಮಾಡ	ದೆ ‖	4ನೇ ತಾಳ

ಶ್ಲೋಕ

ಬೆಳ್ಳಿ	ಯುದಯು	ಕಾಲ	ದಲ್ಲಿ	1ನೇ ಪದ, 1ನೇ ತಾಳ
ವೇಳೆ	ಯರಿತು	ಕೂಗು	ವಂಥ ‖	2ನೇ ಪದ, 1ನೇ ಗಣಸಾಲು, 2ನೇ ತಾಳ
ಕೋಳಿ	ತನ್ನ	ಮರಿಗ	ಳಿಂಗೆ	3ನೇ ಪದ, 3ನೇ ತಾಳ
ಹಾಲ	ಕೊಟ್ಟು	ಸಲಹು	ತಿಹುದೆ ‖	4ನೇ ಪದ, 2ನೇ ಗಣಸಾಲು, 4ನೇ ತಾಳ

9. ರಾಗ ಭೈರವಿ; ತ್ರಿವಿಡೆ ತಾಳ.

(146ನೇ ಶ್ಲೋಕ ನೋಡಿರಿ.)

ಇದರ ಗಣಗಳು ಭಾಮಿನೀ ಷಟ್ಪದಿಯವುಗಳ ಹಾಗೆ 3 ಮತ್ತು 4 ಮಾತ್ರೆಯವುಗಳಾಗಿದ್ದು, ಅವುಗಳ ಹಾಗೆಯೇ ಬೀಳುತ್ತವೆ. 146ನೇ ಪಲ್ಲವನ್ನು ಇಲ್ಲಿ ಹಾಕಿ, ಗಣಗಳನ್ನೂ ತಾಳಗಳನ್ನೂ ತಾಳಪೆಟ್ಟುಗಳನ್ನೂ ತೋರಿಸುವ—

1ನೇ ತಾಳ	2ನೇ ತಾಳ (ಅಪೂರ್ಣವಾದ್ದು)			
ಕೇಳೊ	ಕೇಳೋ	ಮನುಜ	ನೆ — — —	
ಕೇಳೊ	ಕೇಳೋ ‖	3ನೇ ತಾಳ, 1ನೇ ಪದ		
ಕೇಳು	ಲೋಕದ	4ನೇ ತಾಳ		
ಬಾಳಿ	ನೊಗತನ	5ನೇ ತಾಳ		
ಕಾಳು	ಮಾಡದೆ	ಬಿಡುವ	ದೆ — — — ‖	6ನೇ ಮತ್ತು ಅಪೂರ್ಣವಾದ [7ನೇ ತಾಳ, 2ನೇ ಪದ
ನಾಳೆ	ಯಮುನಾ	8ನೇ ತಾಳ		
ಪಾಳು	ಬೇಗದಿ	9ನೇ ತಾಳ		
ಕಾಲ	ಹಿಡಿದೆಳ	ದೊಯ್ಯು	ದಿರುವರೆ ‖	10ನೇ ಮತ್ತು 11ನೇ ತಾಳ, [3ನೇ ಪದ

(ಶ್ಲೋಕದಲ್ಲಿ 4 ಪದಗಳವೆ.)

10. ದ್ವಿಪದೆ.

(50ನೇ ಶ್ಲೋಕ ನೋಡಿರಿ.)

ಇದರ ಗಣಗಳು ವಾರ್ಧಕ ಷಟ್ಪದಿಯ 5 ಮಾತ್ರೆಯವುಗಳ ಹಾಗೆಯೂ ಭಾಮಿನೀ ಷಟ್ಪದಿಯ 3 ಮಾತ್ರೆಯವುಗಳ ಹಾಗೆಯೂ ಬೀಳುತ್ತವೆ; 3 ಮಾತ್ರೆಯವುಗಳು ಒಂದೊಂದು ಪದದ ಅಂತ್ಯದಲ್ಲಿ ಕಾಣುತ್ತವೆ. 50ನೇ ಶ್ಲೋಕ ಇಲ್ಲಿ ಹಾಕುವ—

ದಳಪನೆಂ | ದನು ಪೌಜ | ನೆಣಿಸಿರೆನ್ | ನುತ್ತಾ || 1ನೇ ಪದ, 1ನೇ ಗಣಸಾಲು
ನಿಲಿಸಿದರು | ವಿಧವಿಧದಿ | ವಿಂಗಡಿಸಿ | ಮತ್ತಾ || 2ನೇ ಪದ, 2ನೇ ಗಣಸಾಲು
(ಕಡೇ ಅಕ್ಷರದ ದೀರ್ಘತ್ವವು ಹೇಳುವದರಿಂದಲೇ ಹುಟ್ಟುತ್ತದೆ.)

II. ಪ್ರಾಸದ ವಿಷಯವು.

'ಪ್ರಾಸ' ಎಂಬದಕ್ಕೆ 'ಪ್ರ' ಅಂದರೆ ಮುಂದೆ ಮತ್ತು 'ಅಸ' ಅಂದರೆ ಹಾಕುವದು ಎಂಬದು ಮೂಲ. ಪ್ರಾಸ ಅಂದರೆ ಮುಂದೆ ಹಾಕುವಿಕೆ. ಒಂದೊಂದು ಪದದ (=ಚರಣದ) ಮುಂದಗಡೆಯಲ್ಲಿ (=ಅದರದರ ಆರಂಭದಲ್ಲಿ) ಇರುವ ಗಣದ 2ನೇ ಹ್ರಸ್ವವಾದ ವ್ಯಂಜನವನ್ನಾಗಲಿ (№ 1, 2, 3, 6) ಒತ್ತು ವ್ಯಂಜನವನ್ನಾಗಲಿ (№ 4, 5) ಪೂರ್ಣ ಶ್ಲೋಕದಲ್ಲಿ ಒಂದೇ ಮಾಡಿ ಇಡುವದು ಪ್ರಾಸವಾಗಿದೆ.

ಆ ವ್ಯಂಜನದ ಹಿಂದಿನ ಅಕ್ಷರವು ಹ್ರಸ್ವವಾಗಲಿ (№ 1, 3) ದೀರ್ಘವಾಗಲಿ (№ 2, 6) ಇರ ಬಹುದು.

ಪ್ರಾಸಕ್ಕಾಗಿ ಆ 2ನೇ ಹ್ರಸ್ವವಾದ ವ್ಯಂಜನವನ್ನಾಗಲಿ ಒತ್ತುವ್ಯಂಜನವನ್ನಾಗಲಿ ಪೂರ್ಣ ಶ್ಲೋಕದಲ್ಲಿ ಒಂದೇ ಮಾಡಿ ಇಡುವದೆಂತ ಹೇಳಿದೆವು; ಹ್ಯಾಗಂದರೆ ಹ್ರಸ್ವವಾದ ಆ ವ್ಯಂಜನಗಳನ್ನಲ್ಲದೆ ಅವವುಗಳ ಹ್ರಸ್ವವಾದ ಸ್ವರವನ್ನು ಲಕ್ಷಿಸುವದೇ ಇಲ್ಲ; ಅ, ಇ, ಉ, ಎ, ಒ ಎಂಬ ಸ್ವರಗಳಲ್ಲಿ ಯಾವದಾದರೂ ಆ ವ್ಯಂಜನಗಳಲ್ಲಿ ತೋರ ಬಹುದು.

4 ಮತ್ತು 5 ಮಾತ್ರೆಯ ಗಣಗಳ ಶ್ಲೋಕಗಳಲ್ಲಿ ಪ್ರಾಸದ ವ್ಯಂಜನಾಕ್ಷರವು ದೀರ್ಘವಾಗಿರ ಬಹುದು; ಈ ಪಕ್ಷದಲ್ಲಿ ಗಣದ ಮೊದಲಿನ ಅಕ್ಷರವು ಸಹ ದೀರ್ಘವಾಗಿರ ಬೇಕು (66ನೇ ಶ್ಲೋಕದಲ್ಲಿ "ಸಾಕಾರ"; 68ನೇದರಲ್ಲಿ "ಆರೈಸು"; 107ನೇದರಲ್ಲಿ "ಪುಣ್ಯಂ"; 140ನೇದರಲ್ಲಿ "ಮಾವಂಗೆ"; 155ನೇದರಲ್ಲಿ "ಬಾಗಿಲ್ಗಳಾರ್" ಇತ್ಯಾದಿ).

ಉದಾಹರಣೆಗಳು:

№ 1.

1ನೇ ಶ್ಲೋಕದ ಪ್ರಾಸವ್ಯಂಜನಾಕ್ಷರವು ಳ ಕಾರ (ಲ ಕಾರ)—
(ಗ)-ಳಿ; (ದೊ)-ಳ್ಗ; (ಗ)-ಳ್ಗ; (ತಿ)-ಳು; (ಮೊ)-ಳ್ಗ; (ವ)-ಳಿ. (ಳಿ, ಳ್ಗ, ಳ್ಗ, ಳು, ಳ್ಗ, ಳಿ)

№ 2.

2ನೇ ಶ್ಲೋಕದ ಪ್ರಾಸವ್ಯಂಜನಾಕ್ಷರವು ನ ಕಾರ (ಣ ಕಾರ)—
(ದೀ)-ನ; (ದಾ)-ನಿ; (ಹೀ)-ನ; (ಏ)-ನ; (ಜ್ಞಾ)-ನ; (ವಾ)-ನ. (ನ,ನಿ,ನ,ನ,ನ,ನ)

№ 3.

3ನೇ ಶ್ಲೋಕದ ಪ್ರಾಸವ್ಯಂಜನಾಕ್ಷರವು ಳ ಕಾರ (ಲ ಕಾರ)—
(ಸು)-ಲಿ; (ಕ)-ಳಿ; (ಯ)-ಳಿ; (ಂ)-ಲಿ; (ತಿ)-ಳಿ; (ಘು)-ಳಿ. (ಲಿ, ಳಿ, ಳಿ, ಲಿ, ಳಿ, ಳಿ)

№ 4.

13ನೇ ಶ್ಲೋಕದ ಪ್ರಾಸವ್ಯಂಜನಾಕ್ಷರವು ಪ್ಪಕಾರ (ರ್ಪಕಾರ)—
(ಸ)-ರ್ಪ;(ಕ)-ಪ್ಪೆ;(ಸಿ)-ಪ್ಪ;(ದ)-ರ್ಪ;(ತ)-ಪ್ಪ(ತ)-ಪ್ಪು.(ರ್ಪ,ಪ್ಪೆ,ಪ್ಪ,ರ್ಪ,ಪ್ಪ,ಪ್ಪು)

№ 5.

61ನೇ ಶ್ಲೋಕದ ಪ್ರಾಸವ್ಯಂಜನಾಕ್ಷರವು ದ್ರ ಕಾರ (ರ್ದ ಕಾರ)—
(ನಿ)-ದ್ರೆ; (ಘ)-ದ್ರು. (ದ್ರೆ, ದ್ರು)

№ 6.

67ನೇ ಶ್ಲೋಕದ ಪ್ರಾಸವ್ಯಂಜನಾಕ್ಷರವು ಥ ಕಾರ (ತ ಕಾರ)—
(ಅಸ್)-ಥ; (ಸೊಸ್)-ಥ; (ಚಿತ್)-ತ; (ನುತ್)-ತ. (ಥ, ಥ, ತ, ತ)

ದ್ವಿಪದೆಯಲ್ಲಿ (50ನೇ ಮುಂತಾದ ಶ್ಲೋಕಗಳನ್ನು ನೋಡಿರಿ) ಒಂದೊಂದು ಪದದ ಅಂತ್ಯದಲ್ಲಿ ಸಹ ಪ್ರಾಸವು ಇರ ಬೇಕು.

ದಾಸರ ಪದಗಳಲ್ಲಿ ಪದಗಳೊಳಗೆ (ತಾಳಗಳ ಪ್ರಕಾರವಾಗಿ) ಅನೇಕ ಸರ್ತಿ ಶೃಂಗಾರಪ್ರಾಸಗಳು ಕಾಣುತ್ತವೆ (68ನೇ, 78ನೇ, 95ನೇ ಶ್ಲೋಕಗಳನ್ನು ನೋಡಿರಿ); ಹಾಗೆ ಕಾಣಿಸುವದು ಬಹಳ ಛಂದವೆನ್ನಿಸುತ್ತದೆ. ಜೈಮಿನಿ ಇತ್ಯಾದಿ ಯುಕ್ತಿಯುಳ್ಳ ಕವಿಗಳು ಸಹ ಅಂಥ ಶೃಂಗಾರಪ್ರಾಸಗಳನ್ನು ಪದಗಳ ಒಳಗೆ ಹಾಕುತ್ತಾರೆ (187ನೇ, 192ನೇ ಮುಂತಾದ ಶ್ಲೋಕಗಳನ್ನು ಶೋಧಿಸಿರಿ).

ಪ್ರಾಸದಲ್ಲಿ ಅಲ್ಲಲ್ಲಿ ಕಾಣುವ ಪ್ರತಿಷೇಧಗಳಿಗೆ ಅನುಸಾರವಾಗಿ ಮಾಡುವದು ಕೀರ್ತಿಕರವಾದದ್ದಲ್ಲ (ಉದಾಹರಣೆ—63ನೇ ಶ್ಲೋಕದಲ್ಲಿ (ಅ)-ನ್ಯ ಎಂಬದು (ತ)-ನ್ನ ಎಂಬದಕ್ಕೆ ಪ್ರಾಸವಾಗ ಕೂಡದು.

ಈ ಗ್ರಂಥದ ಕೆಲವು ಚಿನ್ಹೆಗಳ ವಿವರ.

ಕನ್ನಡ ಕಾವ್ಯದಲ್ಲಿ ಎಲ್ಲಾ ಮಾತುಗಳು, ಕೂಡುವ ಪಕ್ಷದಲ್ಲಿ, ಸಂಧಿಯಾಗಿ ಬರೆದವೆ; ಆದ್ದರಿಂದ ಅರ್ಥ ಮಾಡುವದು ಹೆಚ್ಚು ಕಷ್ಟ. ಈ ಕಷ್ಟವನ್ನು, ಆಗುವ ಮಟ್ಟಿಗೆ, ಪರಿಹರಿಸುವದಕ್ಕಾಗಿ ಈ ಗ್ರಂಥದಲ್ಲಿ ಅನೇಕ ಮಾತುಗಳನ್ನು, ಗಣಗಳು ಕೆಡದ ಪಕ್ಷದಲ್ಲಿ, ವಿಂಗಡಿಸಿದೆವು. ಅದು ಕಾರಣವಾಗಿ ಅಲ್ಲಲ್ಲಿ ಮಾತುಗಳ ಅಂತ್ಯದಲ್ಲಿ ಅರ್ಧ ಅಕ್ಷರಗಳು ಕಾಣಿಸುತ್ತವೆ. ಆ ಅರ್ಧ ಅಕ್ಷರಗಳಿಗೆ, ಅರ್ಥ ಮಾಡುವಾಗ ಬೇಕಾದ ಹಾಗೆ, ಅನಿತ್ಯ ಉ ಕಾರವನ್ನೂ ಇ ಕಾರ (ಇದಕ್ಕೆ ಬದಲಾಗಿ ಈ ಗ್ರಂಥದಲ್ಲಿ ಅರ್ಧ ಯ ಕಾರ ಒತ್ತು ಹಾಕಿ ಅದೆ), ಎ ಕಾರ, ಅ ಕಾರಗಳನ್ನೂ ಕೂಡಿಸ ತಕ್ಕದ್ದಾಗಿದೆ; ಆದರೆ ಪದಗಳನ್ನು ಓದುವಾಗ ಅದದನ್ನು ಕೂಡಿಸಲಾಗದು.

ಉದಾಹರಣೆಗಳು—1ನೇ ಶ್ಲೋಕದಲ್ಲಿ "ನೀನ್ ಎನಗೆ"="ನೀನು ಎನಗೆ"; ಅಲ್ಲಿಯೇ "ಮತಿಯನ್ನ್ ಎನ್ನ„="ಮತಿಯನ್ನು ಎನ್ನ"; 3ನೇದರಲ್ಲಿ "ವಾಗ್ಯ್ ಇದರ್ಾ"="ವಾಗಿ ಇದರ್ಾ"; 7ನೇದರಲ್ಲಿ "ದೆಲ್ಲ್ಯ್ ಇಹುದು"="ದೆಲ್ಲಿ ಇಹುದು"; 11ನೇದರಲ್ಲಿ "ದಾತಂಗ್ ಏಕೆ"="ದಾತಂಗೆ ಏಕೆ"; 12ನೇದರಲ್ಲಿ "ದವರಿಂಗ್ ಅಧಮ"="ದವರಿಂಗೆ ಅಧಮ"; 15ನೇದರಲ್ಲಿ "ಹುಳುವಿನಂತ್ ಇಹನೂ"= "ಹುಳುವಿನಂತೆ ಇಹನೂ"; 4ನೇದರಲ್ಲಿ "ಜ್ಞನಪ್ಪ್ ಅಂತೆ"=ಜ್ಞನಪ್ಪ ಅಂತೆ"; 9ನೇದರಲ್ಲಿ "ವಿಲ್ಲ್ ಎಂದಾ"="ವಿಲ್ಲ ಎಂದಾ"; 71ನೇದರಲ್ಲಿ "ಪಾಳಿಗಳೆಲ್ಲ್ ಅಲ್ಲ್ಯ್"="ಪಾಳಿಗಳೆಲ್ಲ ಅಲ್ಲಿ" ಇತ್ಯಾದಿ.

ಕಾವ್ಯದಲ್ಲಿ ಎಲ್ಲಾ ಮಾತುಗಳ ಸಂಧಿಯನ್ನು, ಗಣಗಳು ಕೆಡದೆ, ಬಿಚ್ಚಲಾಗದು. ಬಿಚ್ಚಲಾಗದಂಥ ಪಕ್ಷದಲ್ಲಿ ಮಾತುಗಳನ್ನು ಬೇಗ ವಿಂಗಡಿಸುವದಕ್ಕಾಗಿ ಈ ಆವರಣ ಚಿನ್ಹೆಯೊಳಗೆ (°) ಇರುವ ಚಿನ್ಹೆ ಪ್ರಯೋಗವಾಯಿತು. ಇದು ಯಾವ ಅಕ್ಷರದ ಮೇಲೆ ಅದೆಯೋ, ಆ ಅಕ್ಷರದಲ್ಲಿ ಎರಡು ಮಾತುಗಳ ಸಂಧಿ ಅದೆ; ಆ ಅಕ್ಷರದ ವ್ಯಂಜನವು ಹಿಂದಿನ ಮಾತಿನದು, ಅದರ ಸ್ವರವು ಮುಂದಿನ ಮಾತಿನದು.

ಅರ್ಥ ಮಾಡುವಾಗ, ಹಿಂದಿನ ಮಾತಿಗೆ ಹೋಗ ಬೇಕಾದ ವ್ಯಂಜನಕ್ಕೆ ಉ, ಇ, ಎ, ಅ ಎಂಬ ಸ್ವರಗಳಲ್ಲಿ ಒಂದನ್ನು ಕೂಡಿಸ ತಕ್ಕದ್ದಾಗಿದೆ.

ಉದಾಹರಣೆಗಳು —1ನೇ ಶ್ಲೋಕದಲ್ಲಿ "ಪಂಜರದೊ°ಳಗೆ"="ಪಂಜರದ ಒಳಗೆ"; ಅಲ್ಲಿಯೇ "ಪರಿಣತರೆ°ಂತೆ"="ಪರಿಣತರ ಅಂತೆ"; ಅಲ್ಲಿಯೇ "ಮೊಳಗುವೆ°ಂದದಿ"="ಮೊಳಗುವ ಅಂದದಿ"; 3ನೇದರಲ್ಲಿ "ಸು-ಲಭವಾ°ಗ್ಯ್"="ಸು-ಲಭವು ಆಗಿ"; ಅಲ್ಲಿಯೇ "ಸಂಸ್ಕೃತದಲಿ°ನ್ನ್"="ಸಂಸ್ಕೃತದಲಿ ಇನ್ನು"; 5ನೇದರಲ್ಲಿ "ಶಿಷ್ಯರಿ°ಗುನ್ನತಂ"="ಶಿಷ್ಯರಿಗೆ ಉನ್ನತಂ" ಇತ್ಯಾದಿ.

ಮೇಲೆ ತೋರಿಸಿದ ಆ ಚಿನ್ಹೆಯು (°) ಸಂಸ್ಕೃತ ಸಮಾಸಗಳನ್ನು ವಿಂಗಡಿಸುವ ರೀತಿಯನ್ನು ಸಹ ಸೂಚಿಸುತ್ತದೆ.

(-) ಈ ಚಿನ್ಹೆಯು, ಕೂಡಿದ ಪಕ್ಷದಲ್ಲಿ, ಸಮಾಸ-ಶಬ್ದಗಳ ನಡುವೆ ಹಾಕಿ ಅದೆ; ಅದಲ್ಲದೆ ಉದಾಹರಣೆಗಳು ಬರುವಲ್ಲಿ ಅದು ಪ್ರಯೋಗವಾಯಿತು.

ಕೆಲವು ಇಂಥ ಚಿನ್ಹೆಗಳು ಒಂದರ ಮುಂದೆ ಒಂದು ಇದ್ದರೆ, ಏನಾದರೂ ಬಿಟ್ಟು ಬಿಟ್ಟದೆಂತ ತೋರಿಸುತ್ತವೆ.

(, ; .) ಈ 3 ಚಿನ್ಹೆಗಳು ವಿರಾಮದವುಗಳು. (,) ಇದು ಅಲ್ಪ ವಿರಾಮದ್ದು; (;) ಇದು ಅರ್ಧ ವಿರಾಮದ್ದು; (.) ಇದು ಪೂರ್ಣ ವಿರಾಮದ್ದು. ಈ ವಿರಾಮ-ಚಿನ್ಹೆಗಳನ್ನು ಪದಗಳ ಅರ್ಥಕ್ಕಾಗಿ ಅಗತ್ಯವಾಗಿ ಲಕ್ಷಿಸ ಬೇಕು; ಅವು ಶ್ಲೋಕದಲ್ಲಿ ಹಾಕ ಕೂಡದಿರುವಲ್ಲಿ ಟೀಕೆಯಲ್ಲಿ ಹಾಕಿ ಅವೆ.

(. –) ಈ ಚಿನ್ಹೆಯು ಅರ್ಥ ಪೂರ್ಣವಾಗಿ ತೀರಿದಲ್ಲಿ ಕಾಣಿಸುತ್ತದೆ.

(?) ಈ ಚಿನ್ಹೆಯು ಪ್ರಶ್ನೆಯದು; (!) ಇದು ಸಂಬೋಧನೆಯದು.

(=) ಇದು ಸಮಾರ್ಥಕ ಚಿನ್ಹೆ. (–) ಈ ಚಿನ್ಹೆಯು ಪದಗಳ (ಚರಣಗಳ) ಅಂತ್ಯದಲ್ಲಿದ್ದು, ಒಂದು ಮಾತಿನ ಒಂದು ಭಾಗವು ಕೆಳಗಿನ ಪದದ ಆರಂಭಕ್ಕೆ ಹೋಯಿತೆಂತ ತೋರಿಸುತ್ತದೆ.

ನಿಘಂಟಿನ ವಿಷಯ.

ಇದರಲ್ಲಿ ಶಾಲೇ ಹುಡುಗರು ತಿಳಿಯದಿರ ಬಹುದಾದ ಎಲ್ಲಾ ಮಾತುಗಳ ಅರ್ಥ ಹೇಳಿ ಅದೆ, ಟೀಕೆಯಲ್ಲಿ ವಿಂಗಡಿಸದಿರುವ ಸಮಾಸ-ಶಬ್ದಗಳು ವಿಂಗಡಿಸಿ ಅವೆ. ಶ್ಲೋಕಗಳನ್ನು ಅರ್ಥ ಮಾಡುವದು ಕಷ್ಟವಾದರೆ, ಒಂದೊಂದು ಮಾತಿನ ಅರ್ಥವನ್ನು ನಿಘಂಟಿನಲ್ಲಿ ಹುಡುಕಿ ನೋಡ ತಕ್ಕದ್ದಾಗಿದೆ; ಹ್ಯಾಗಂದರೆ ಆಗಿಂದಾಗ್ಯೆ ಒಂದು ಮಾತಿಗೆ ಎರಡು ಅರ್ಥವಿರುವದು. ನಿಘಂಟಿನಲ್ಲಿ ಅರ್ಥ ಕೊಟ್ಟ ಮೇಲೆ ಇರುವ ಅಂಕೆಗಳು ಆಯಾ ಮಾತುಗಳು ಇಷ್ಟಿಷ್ಟನೇ ಶ್ಲೋಕದಲ್ಲಿ ಶಿಕ್ಕುತ್ತವೆಂತ ಗೊತ್ತು ಮಾಡುತ್ತವೆ. ಒಂದು ಮಾತಿಗೆ ಎರಡು ಅರ್ಥ ಹಚ್ಚಿದ್ದರೆ, ಆಯಾ ಸ್ಥಳಕ್ಕೆ ತಕ್ಕಂಥಾದ್ದನ್ನು ಆರಿಸಿ ಕೊಳ್ಳ ಬೇಕು.

MINOR

Canarese Poetical
ANTHOLOGY

ಸಣ್ಣ ಕರ್ನಾಟಕ ಕಾವ್ಯಮಾಲೆ

I. ಪಾಠ

AN HUMBLE INTRODUCTION

ದೀನ ಭಾವದ ಪೀಠಿಕೆ

(ಭಕ್ತೀ ಸಾರ)

ಭಾಮಿನಿ-ಷಟ್ಪದಿ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

3	4	3	4	1ನೇ ಪದ			
3	4	3	4	2ನೇ ಪದ			
3	4	3	4	3	4	1	3ನೇ ಪದ, 1ನೇ ಗಣಸಾಲು
3	4	3	4	4ನೇ ಪದ			
3	4	3	4	5ನೇ ಪದ			
3	4	3	4	3	4	1	6ನೇ ಪದ, 2ನೇ ಗಣಸಾಲು

ಗಿಳಿಯ ಮರಿಯನು[1] ತಂದು, ಪಂಜರ-
ದೊಳಗೆ ಪೋಷಿಸಿ, ಕಲಿಸಿ ಮೃದು ನುಡಿ[2]-
ಗಳನು, ಲಾಲಿಸಿ ಕೇಳ್ವ[3] ಪರಿಣತರಂತೆ ನೀನ್ ಎನಗೇ[4] ||

1, ಮರಿಯನ್ನು. 2, ನುಡಿಗಳನ್ನು. 3, ಕೇಳುವ. 4, ನನಗೇ.

ತಿಳುಹು[5] ಮತಿಯನ್ನ[6]; ಎನ್ನ[7] ಜಿಹ್ವೆಗೆ
ಮೊಳಗುವೆಂದದಿ[8] ನಿನ್ನ ನಾಮಾ[9]-
ವಳಿಯ ಪೊಗಳುವದಿತ್ತು[10], ರಕ್ಷಿಸು ನಮ್ಮನೆನವರತಾ[11]! || 1 ||

5, ತಿಳಿಸು. 6, ಮತಿಯನ್ನು. 7, ನನ್ನ. 8, ಮೊಳಗುವ ಅಂದದಿಂದ (ಅಥವಾ ಅಂದದಲ್ಲಿ). 9, ನಾಮ-ಆವಳಿಯ (ನಾಮಗಳ ಆವಳಿಯನ್ನು). 10, ಪೊಗಳುವದ ಇತ್ತು (ಪೊಗಳುವದನ್ನು ಕೊಟ್ಟು; 'ಇತ್ತು' ಎಂಬದಕ್ಕೆ ಈವುವದು ಎಂಬದು ಮೂಲ). 11, ನಮ್ಮನ್ನು ಅನವರತಾ.—ನೀನು (ದೇವರೇ) ಗಿಳಿಯ ಮರಿಯನ್ನು (ಅಂದರೆ ಗಿಳೀ ಮರಿಯ ಹಾಗೆ ನಿನ್ನ ಮುಂದೆ ಇರುವ ನನ್ನನ್ನು) ತಂದು, ---- ಲಾಲಿಸಿ ಕೇಳುವ ಪರಿಣತರ ಅಂತೆ (ಅಂದರೆ ಲಾಲಿಸಿ ಕೇಳುವ ಎಲ್ಲಾ ಪರಿಣತರಿಗೆ ನೀನು ತಿಳಿಸುವಂತೆ) ನನಗೆ (ಸಹ) ತಿಳುಹು ಮತಿಯನ್ನು; ಮೊಳಗುವ ಅಂದದಿಂದ (ನಾನು) ನಿನ್ನ ನಾಮಗಳ ಆವಳಿಯನ್ನು ಹೊಗಳುವದನ್ನು ನನ್ನ ಜಿಹ್ವೆಗೆ ಕೊಟ್ಟು, ಇತ್ಯಾದಿ.

ದೀನ ನಾನು, ಸಮಸ್ತ ಲೋಕಕೆ[1]
ದಾನಿ ನೀನು; ವಿಚಾರಿಸಲು, ಮತಿ-
ಹೀನ ನಾನು, ಮಹಾಂತ[2]-ಮಹಿಮಾ-ಜ್ಯೋತಿ-ಪತಿ ನೀನೂ; ||
ಏನ[3] ಬಲ್ಲೆನು ನಾನು? ನೆರೆ ಸು[4]-
ಜ್ಞಾನ-ಮೂರುತಿ ನೀನು. ನಿನ್ನ ಸ-
ಮಾನರುಂಟೇ? ದೇವ, ರಕ್ಷಿಸು ನಮ್ಮನೆನವರತಾ! || 2 ||

1, ಲೋಕಕ್ಕೆ. 2, ಮಹಾಂತವಾದ ಮಹಿಮೆಯ ಜ್ಯೋತಿಯುಳ್ಳ ಪತಿ. 3, ಏನನ್ನು, ಏನು ಎಂಬದರಲ್ಲಿ ದ್ವಿತೀಯಾವಿಭಕ್ತಿ. 4, ಸುಜ್ಞಾನದ ಮೂರ್ತಿ.

A EULOGY ON THE CANARESE LANGUAGE

ಕನ್ನಡ ಭಾಷೆಯ ಸ್ತುತಿ

(ಅನುಭವಾಮೃತ)

ಸುಲಿದ ಬಾಳೆಯ ಹಣ್ಣಿನೆಂದದಿ[1],
ಕಳಿದ ಸಿಗುರಿನ ಕಬ್ಬಿನೆಂದದಿ
ಯುಳಿದ ಉಷ್ಣದ ಹಾಲಿನೆಂದದಿ ಸು-ಲಭವಾಗ್ಯ ಇರ್ದ[2] ||

1, ಅಂದದಿಂದ. 2, ಇದ್ದಾ.

ಲಲಿತವಹ[3] ಕನ್ನಡದ ನುಡಿಯಲಿ[4]
ತಿಳಿದು, ತನ್ನೊಳು[5] ತನ್ನ ಸಾಖ್ಯವ
ಘಳಿಸಿ ಕೊಂಡರೆ ಸಾಲದೇ? ಸಂಸ್ಕೃತದಲಿನ್ನ[6] ಏನೂ? || 3 ||

3, ಆಗುವ, ಆದ. 4, ನುಡಿಯಲ್ಲಿ. 5, ತನ್ನೊಳಗೆ (ಹೃದಯದೊಳಗೆ; ಮನಸ್ಸೌಖ್ಯವು ಮುಖ್ಯವೆಂಬಂತೆ). 6, ಸಂಸ್ಕೃತದಲ್ಲಿ.—'ತಿಳಿದು' ಎಂಬ ಆಖ್ಯಾತದ ಹಿಂದೆ ಸಹ 'ತನ್ನ ಸೌಖ್ಯವ' ಎಂಬ ಶಬ್ದವಿಡ ಬೇಕು.

MEANS OF ACQUIRING KNOWLEDGE

ಬುದ್ಧಿ ಘಳಿಸಿ ಕೊಳ್ಳುವ ಉಪಾಯಗಳು

(ಸೋಮೇಶ್ವರ-ಶತಕ)

ಪ್ರಸಂಗ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—
ಇದರ ಗಣಮಾತ್ರೆಗಳು ಬೇರೆ ಶ್ಲೋಕಗಳಲ್ಲಿಯೂ ಯಾವಾಗಲೂ
ಈ ಕ್ರಮದ ಪ್ರಕಾರವಾಗಿಯೇ ಬೀಳ ಬೇಕು.

∪ ∪ — | — ∪ ∪ | — ∪ — | ∪
∪ ∪ — | — — ∪ | — — ∪ | — | 1ನೇ ಪದ
∪ ∪ — | — ∪ ∪ | — ∪ — | ∪
∪ ∪ — | — — ∪ | — — ∪ | — || 2ನೇ ಪದ, 1ನೇ ಗಣಸಾಲು (ಎರಡನೇ ಭಾಗವು ಇದರ ಹಾಗೆಯೇ)

ಕೆಲವಂ[1] ಬಲ್ಲವರಿಂದ ಕಲ್ತು[2],
ಕೆಲವಂ ಗ್ರಂಥಂಗಳಂ[3] ಕೇಳುತಾ[4],
ಕೆಲವಂ ಮಾಳ್ಪವರಿಂದ[5] ಕಂಡು,
ಕೆಲವಂ ಸು-ಜ್ಞಾನದಿಂ[6] ನೋಡುತಾ[7], ||

1, ಕೆಲವನ್ನು. 2, ಕಲಿತು. 3, ಗ್ರಂಥಗಳನ್ನು. 4, ಕೇಳುತ್ತಾ. 5, ಮಾಡುವವರಿಂದ. 6, ಸುಜ್ಞಾನದಿಂದ. 7, ನೋಡುತ್ತಾ.

ಕೆಲವಂ ಸಜ್-[8]ಜನ-ಸಂಗದಿಂದ—
ಲರಿ[9]ಯ್ಯೈ, ಸರ್ವ-ಜ್ಞನಪ್ಪೆ[10] ಅಂತೆ, ನೀನ್! ||
ಪ[11]ಲವುಂ ಪ[12]ಳ್ಳ ಸಮುದ್ರವೇ, ನ[13]—
ರ, ನರಾ! ಕೇಳ್ ಬುದ್ಧಿ[14]ಯಂ ಪೇ[15]ಳ್ವುದಾ! || 4 ||

8, ಸಜ್ಜನರ ಸಂಗದಿಂದಲೆ. 9, ಅರಿ, ಐಯ್ಯ (ತಿಳುಕೋ, ಐಯ್ಯ). 10, ಅಪ್ಪೆ, ಅಪ್ಪ, ಆಗುವ (ಅಪ್ಪಂತೆ, ಆಗುವಂತೆ). 11, ಹಲವು. 12, ಹಳ್ಳ (ಹಲವು ಹಳ್ಳಗಳು ಸಮುದ್ರವೇ; ಅದರಂತೆ ಅನೇಕ ಸಣ್ಣ ದೊಡ್ಡ ಉಪಾಯುಗಳಿಂದ ಬಹಳ ಬುದ್ಧಿ ಬರ ಬೇಕು). 13, ನರನೆ, ನರನೇ! 14, ಬುದ್ಧಿಯನ್ನು. 15, ಹೇಳುವದನ್ನು!

GOD IS THE MOST HIGH

ದೇವರು ಸರ್ವ-ಶ್ರೇಷ್ಠನಾಗಿದ್ದಾನೆ

ಕವಿಯೇ ಪ್ರಾಥರೊ[1]ಳುತ್ತ[2]ಮಂ; ಕ—
ನಕವೇ ಲೋ[3]ಹಂಗಳೊಳ್ ಶ್ರೇಷ್ಠ; ಕೇಳ್,
ಶ್ರುವವೇ ಶಿಷ್ಯರಿ[4]ಗುನ್ನತಂ; ರ—
ತುನದೊಳ್ ವೈಡೂರ್ಯವೇ ವೆ[5]ಗ್ಗಳಂ, ||
ರವಿಯೇ ಸರ್ವ ಗ್ರಹಂಗಳೊಳ್ಗೆ,
ರಸದೊಳ್ ಪಾಲೇ; ವ[6]ರಂ ಸರ್ವಥಾ
ದಿ[7]ವ-ಭೂ-ಪಾಲಕನೇ, ಕಣಾ, ನ—
ರ, ನರಾ! ಕೇಳ್ ಬುದ್ಧಿಯಂ ಪೇಳ್ವುದಾ! || 5 ||

1, ಒಳ್, ಒಳು, ಒಳಗೆ. 2, ಉತ್ತಮನು. 3, ಲೋಹಗಳೊಳಗೆ. 4, ಉನ್ನತವು. 5, ವೆಗ್ಗಳವು (ಈ ವಿಶೇಷಣ-ಪದವನ್ನು ಮುಂದಿನ ಎರಡು ವಾಕ್ಯಗಳಿಗೆ ಸಹ ಹಾಕ ಬೇಕು). 6, ವರನು. 7, ದಿವದ ಮತ್ತು ಭೂಮಿಯ ಪಾಲಕನೇ (ದೇವರೇ).

GOD'S FEAR IS THE FIRST WANT OF MAN

ದೇವರ ಭಯವು ಮುಖ್ಯವಾದ್ದು

(ಅನುಭವಾಮೃತ)

ಭಾಮಿನಿ-ಷಟ್ಪದಿ (1ನೇ ಶ್ಲೋಕ ನೋಡ ಬೇಕು)

ಏನು[1] ಕಲಿತಡೆದೇನು[2]! ಯತ್ನದ[3]-
ಲೇನು ಮಾಡಿದಡೇನು[4]? ಸರ್ವವು
ಕಾನನದ ಬೆಳ-ದಿಂಗಳೆಂದದಿ ವ್ಯರ್ಥವಾಗ್ಯ ಇಹುದೂ[5]; ||
ತಾನು ದೇವರ ಭಯವ ಕಲಿಯದೆ,
ಮಾನವನು ಬದುಕಿದಡೆದೇನು?
ಶ್ವಾನ[6] ಸೂಕರದಂತೆ ಹೊಟ್ಟೆಯ ಹೊರದು ಕೊಂಡ್ ಇಹನೂ[7]. ||6||

1, ಏನೂ, ಏನಾದರೂ. 2, ಕಲಿತಡೆ, ಕಲಿತರೆ. 3, ಯತ್ನದಲ್ಲಿ. 4, ಮಾಡಿದಡೆ, ಮಾಡಿದರೆ. 5, ಇರುವದು. 6, ಶ್ವಾನದ ಮತ್ತು ಸೂಕರದ ಅಂತೆ. 7, ಇರುವನು.—'ತಾನು ದೇವರ ಭಯವ ಕಲಿಯದೆ' ಎಂಬದನ್ನು ಶ್ಲೋಕದ ಆರಂಭದಲ್ಲಿ ಸಹ ಇಡ ಬೇಕು.

II. ಪಾಠ.

THE VAIN CONDUCT OF MAN

ಮನುಷ್ಯರ ವ್ಯರ್ಥವುಳ್ಳ ನಡತೆ

ಕೆಲರು[1] ಮನೆ ಮನೆವಾರ್ತೆ ಮಕ್ಕಳ[2]-
ಲೊಲಿದು, ಮಮತೆಯ ಮಾಡಿ, ಧನವನು[3]
ಘಳಿಸಿ, ಸಂಸೃತಿ-ಸಂಭ್ರಮದಲಾಸಕ್ತರಾಗ್ಯ[4] ಇಹರೂ. ||

1, ಕೆಲವರು. 2, ಮಕ್ಕಳಲ್ಲಿ. 3, ಧನವನ್ನು. 4, ಸಂಸೃತಿಯ ಸಂಭ್ರಮದಲ್ಲಿ.—

ಫಲವ ಕಂಡರೆದೇನ್? ಅಕಟೆಕಟ,
ಘಳಿಲನೆಲ್ಲವು ಬಟ್ಟು-ಬರಿದಾಗ್ಯೆ
ಅಳಿವುದೆದರೊಳ್ ದುಃಖವೆಲ್ಲದೆ, ಸುಖವೆದೆಲ್ಲ್ಯ ಇಹುದೂ? ||7||

(ಅದರ) ಫಲವ ಕಂಡರೆ, ಅದು ಏನು? ಅಕಟ, ಅಕಟ, ಘುಳಿಲನೆ ಎಲ್ಲವು ಬಟ್ಟು-ಬರಿದು ಆಗಿ, ಅಳಿವುದು (ಅಳಿಯುವದು)! ಅದರೊಳ್ (ಹೇಳಿದದರೊಳಗೆ) ಇತ್ಯಾದಿ.

[1]ಮೊದಲೆ ಮರ್ಕಟ; ಮೇಲೆ ಮಧ್ಯದ
ಮದ-ವೆಥೆಯ ಹಿಡಿದಿರಲು, ವೃಶ್ಚಿಕ
ತುದಿಯ ಕಾಲನು ಕಚ್ಚಿದರೆ ಕುಣಿದಾಡುವಂದದಲೀ. ||
ಅಧಿಕ ಧನ, ಸಂಪತ್ತು, ಯೌವನ–
ವೊದಗಿರಲು, ವನಿ[2]ತಾದಿ-ವಿಷಯಾ–
ಸ್ಪದನೆನಿಸಿ ನಿಜವರಿಯದವನಿಗೆ ಮೋಕ್ಷ ಶಿಕ್ಕೀತೇ? ||8||

1, (ಮನುಷ್ಯನು) ಮೊದಲೆ ಮರ್ಕಟ (ದ ಹಾಗೆ ಇದ್ಧಾನೆ; (ಆ) ಮೇಲೆ (ಅವನು) ಮಧ್ಯದ (ಮಧ್ಯಪ್ರಾಯದ) ಮದ (ವುಳ್ಳ) ವೆಥೆಯ (ವ್ಯಥೆಯನ್ನು) ಹಿಡಿದು ಇರಲು, ವೃಶ್ಚಿಕವು (ಒಬ್ಬನ) ತುದಿಯ ಕಾಲನು (ಕಾಲಿನ ತುದಿಯನ್ನು) ಇತ್ಯಾದಿ ಅಂದದಲ್ಲಿ (ಇದ್ಧಾನೆ). 2, ವನಿತೆ ಮುಂತಾದ ವಿಷಯಗಳಿಗೆ ಆಸ್ಪದನು.

ತಾಯಿ ತಂದೆಯ ಬಿಟ್ಟು, ಹೆಂಡತಿ
ಸೂಯುವಾನಳೆಯೆಂದು, ಸರ್ವರ
ಬಾಯಿ ಹೊ[1]ಡದೆಲ್ಲವನು ಮಕ್ಕಳಿಗಿತ್ತು ಮಮತೆಯಲೀ, ||
ನೋ[2]ಯ ನುಡಿದಾರ್ ಏನನೆಂದರು,
ನಾಯ-ನಕರವನೆಡವ ಲುಬ್ಧಗೆ
ನಾಯ[3]ಕವೆನಿಪ ನರಕವೆಲ್ಲದೆ, ಸಗ್ಗವಿಲ್ಲ! ಎಂ[4]ದಾ. ||9||

1, ಹೊಡದು, ಎಲ್ಲವನ್ನು ಮಕ್ಕಳಿಗೆ ಇತ್ತು (ಕೊಟ್ಟು; ಈವುವದು=ಕೊಡುವದು). 2, (ಮತ್ತೊಬ್ಬರಿಗೆ) ನೋಯ (ನೋಯಲಿಕ್ಕೆ, ನೋವಾಗುವಂತೆ) ನುಡಿದು, ಆರ್ (ಯಾರು) ಏನನ್ನು ಎಂದರೂ, ನಾಯದ (ನ್ಯಾಯದ) ನಕರವನ್ನು ಅಡವ (ಅಡೆಯುವ ಲುಬ್ಧಗೆ (ಲುಬ್ಧನಿಗೆ). 3, ಎಣಿಸುವ. 4, ಈ ಪದಗಳ ಬೋಧಕನೆಂಬದು ಇದಕ್ಕೆ ಆಪ್ತ್ಯೆ ಆಗಿದೆ.

ದುಕ್ಕ ವೆಕ್ಕಸವಾಗೆ[1], ಸರ್ವರು
ಸೊಕ್ಕಿ, ಮನದಲಿ ಮರುಗುವರು; ತಮ-
ಗೆಕ್ಕಜದ ಸುಖವಾಗೆ, ಸೊಕ್ಕ್ವರು[2], ದೇವರಂ[3] ಮರೆದೂ[4]. ||
ಅಕ್ಕಟಕ್ಕಟ, ಕುರುಡ ಮನುಜನು
ಹಕ್ಕಿಯಂದದಿ ಬಲೆಯ ನೋಡದೆ,
ಶಿಕ್ಕಿ, ಸೊಕ್ಕ್ವಳ್ ಕುದಿದು, ಹೊರಳುತ[5], ನರಳುತಿಹನೆಂದಾ. || 10 ||

1, ಆಗಲು, ಆಗುವಾಗ. 2, ಸೊಕ್ಕುವರು. 3, ದೇವರನ್ನು. 4, ಮರೆತು. 5, ಹೊರಳುತ್ತ.— (ಎಲ್ಲರು ಬಹಳ ದುಃಖದೊಳಗೆ ದೇವರ ಪರಿಪಾಲನೆಗೆ ಮೆಚ್ಚದೆ, ಸೊಕ್ಕುವರು; ಬಹಳ ಸುಖದೊಳಗೆ ಪರಿಪಾಲಕನಾದ ದೇವರನ್ನು ಮರೆತು, ಸೊಕ್ಕುವರು; ಅದೆರಡೂ ಅಸಮಾಧಾನದ ಕಾರಣವೇ!)

THE MISERABLE STATE OF THE WORLDLY MAN

ಲೌಕಿಕಾಶೆಯುಳ್ಳ ಮನುಷ್ಯರ ನಿರ್ಭಾಗ್ಯದ ಅವಸ್ಥೆ

ಕಾಣದಾತಂಗ್[1] ಏಕೆ[2] ಕನ್ನಡಿ?
ಗಾಣದೆತ್ತಿಗೆ ಗೆಜ್ಜೆಯೇತಕೆ[3]?
ಗೋಣಿಗೇತಕೆ ಗವಸಣಿಗೆ? ನರಿಗೇಕೆ ಪರಲೋಕಾ? ||
ರಾಣಿಯೇಕೆ ನಪುಂಸಕಗೆ[4]? ಗೀ-
ರ್ವಾಣ-ಭಾಷೆಯದೇಕೆ ಗೊಲ್ಲಗೆ?
ಕೇಣವಿಲ್ಲದ ವಿಷಯ-ಲಂಪಟಗೇಕೆ[5] ಪರಮ ಸುಖಾ? || 11 ||

1, ಆತನಿಗೆ. 2, ಯಾಕೆ. 3, ಯಾತಕ್ಕೆ 4, ನಪುಂಸಕನಿಗೆ. 5, ವಿಷಯದಲ್ಲಿ ಲಂಪಟನಾದವನಿಗೆ.

ಚರ್ಮ-ಖಂಡವ ಕಡಿವ[1] ಶುನಕಕೆ[2]
ಖರ್ಮನೇ ತುಪ್ಪದಲಿ ರುಚಿ? ದುಷ್-
ಕರ್ಮ-ಕಿಂಕರರಾದ ದೋಷ-ಫಲಾಭಿಲಾಷರಿಗೇ[3], ||

1, ಕಡಿಯುವ. 2, ಶುನಕಕ್ಕೆ. 3, ದೋಷದಿಂದ ಹೊಂದುವ ಫಲದ ಅಭಿಲಾಷರಿಗೆ.

ಹಮ್ಮಿನಿಂದಲೆ ಸತ್ಯದಲಿ ಮನ
ನೆಮ್ಮದವರಿಂಗ್[4], ಅಧಮ ಮಾರ್ಗದ
ದುಮ್-ಮತಿಗಳಿಗೆ ದೂರವಾಗ್ಯ ಇಹುದಾತ್ಮ-ನಿಜ-ಸುಖವೂ.||12||

4, (ಮತ್ತು) - - - ನೆಮ್ಮದವರಿಂಗೆ, (ಮತ್ತು) - - ದುಮ್ಮತಿಗಳಿಗೆ.

ಸರ್ಪ[1]-ವದನ-ಗ್ರಾಸವಾಗ್ಯ ಇಹ[2]
ಕಪ್ಪೆ ಮಕ್ಷಿಕ-ಭಕ್ಷಣವ ಬಯ-
ಸಿಪ್ಪ[3] ತೆರದಲಿ, ಮರಣ-ವಶವಾಗ್ಯ ಇರ್ದ ಮಾನವನೂ ||
ದರ್ಪದಿಂದಲೆ ಕೇಡ ಬಗೆವನು,
ತಪ್ಪ[4] ಸಾಧಿಸಿ ಸಕಲರಿಂಗ್. ಅದು[5]
ತಪ್ಪುವುದೆ ತಂಗ್[6]? ಅಕಟ, ನಗುವದು ಹೆಡ-ತಲೇ ಮೃತ್ಯೂ!||13||

1, ಸರ್ಪದ ವದನಕ್ಕೆ ಗ್ರಾಸವು. 2, ಇರುವ. 3, ಬಯಸಿ ಇರುವ (ಅಥವಾ ಬಯಸುವ). 4, ತಪ್ಪನ್ನು. 5, ಅಂದರೆ ಮೃತ್ಯು. 6, ತನಗೆ.

ದುಕ್ಕ ಬೆರಸದ ಸುಖವದಾರಿಗೆ
ಶಿಕ್ಕುವದು? ಹೇಳ್, ಕಂದ! ಮರ್ಕಟ
ಸೊಕ್ಕಿ, ಕೀಲನು ಕಿತ್ತು ಬಿಸುಟಂದದಲಿ[1]; ಮಧು[2]-ರಸವಾ ||
ಇಕ್ಕಿ ನೆಕ್ಕಲು, ಖಡ್ಗ-ಧಾರೆಯು
ಪೊಕ್ಕು[3] ನಾಲಗೆ ಶೀಳುವಂದದ[4]-
ಲುಕ್ಕಿ, ಮೋಸದ ಸುಖ ಕೆಳಸಿ[5], ಕಡು ದುಕ್ಕ ಬಡುತ್ತಿಹನೂ[6].||14||

1, ಮರದ ತುಂಡನ್ನು ಶೀಳುವದಕ್ಕೆ ಒಂದು ಕೀಲು ಅದರಲ್ಲಿ ಹೊಡೆದಿರಲಾಗಿ ಒಂದು ಮರ್ಕಟ ಆ ಕೀಲಿನ ಆಟವಾಡಿ, ಅದನ್ನು ಕೈಯಿಂದ ಕಿತ್ತು ಬಿಸುಟಾಗ, ಕಾಲು ಶೀಳಿನಲ್ಲಿ ಇರಕಾಗಿ, ನೋವು ಪಟ್ಟಿತು; ಆ ಅಂದದಲ್ಲಿ. 2, (ಮತ್ತು) ಒಬ್ಬನು ಮಧು-ರಸವನ್ನು ಖಡ್ಗದ ಧಾರೆಗೆ ಇಕ್ಕಿ ನೆಕ್ಕಲು, ಆ ಧಾರೆಯು ಇತ್ಯಾದಿ. 3, ಹೊಕ್ಕು. 4, ಅಂದದಲ್ಲಿ ಉಕ್ಕಿ. 5, ಕೆಳಸಿ; ಅಂದರೆ ಪ್ರೀತಿ ಮಾಡಿ (ಅಥವಾ ಸುಖಕ್ಕೆ ಎಳಸಿಕೊಂಡು). 6, ಇರುವನು.—'ಉಕ್ಕಿ' ಎಂಬದರಿಂದ ಕಡೇ ಶಬ್ದದ ವರೆಗೆ ಮನುಷ್ಯನೆಂಬುದು ಆಖ್ಯೆ.

III. ಪಾಠ

THE WORLDLY MAN'S DEPLORABLE CONDITION

ಲೌಕಿಕನ ದುಃಖಕರವಾದ ಸ್ಥಿತಿ

ಮರುಳು ಹಿಡಿದವ ಮದ್ದು-ಗುಣಿಕೆಯ–
ನೆರದು ಕುಡಿವೆಂದದಲಿ, ಲೋ[1]ಕಾ–
ವರಣದಲಿ ಮರದಿ[2]ರ್ದು ಸತ್ಯವ ಮೂಢ ಭಾವದಲೀ, ||
ಪ[3]ರಿ-ಪರಿಯ ಸಂಸಾರ-ಪಾ[4]ಶದಿ
ಹಿ[5]ರಿದು ಬಿಗಿ ವಡದಿರ್ದ ಮನುಜಗೆ
ದೊರಕುವದೆ ಪರ-ಸುಖವು? ತಿರುಳಿನ ಹುಳುವಿನೆಂತ್ ಇಹನೂ.||15||

1, ಲೋಕದ ಆವರಣದಲ್ಲಿ. 2, ಇದ್ದು. 3, ಬಹಳ ಪರಿಯ. 4, ಪಾಶದಲ್ಲಿ. 5, ಹಿರಿದು=ಹಿರಿದಾಗಿ.—ಅರ್ಥದ ಸೂಚನೆ: ತನ್ನ ಹುಚ್ಚು ಕೆಲಸದಿಂದ ನೀಚ ಮನುಷ್ಯನು ಕೆಡುವನಷ್ಟೇ (ಉಮ್ಮತ್ತದ ಕಾಯಿ ಅರದು ಕುಗಿದ ಒಬ್ಬ ಹುಚ್ಚನ ಹಾಗೆ).

ಒರಲೊಳಗೆ ತಲೆಯಿಟ್ಟು, ವನಕೆಯ
ಭರದ ಘಾ[1]ಯಕೆ ತಪ್ಪಲಿಕ್ಕ ಆ[2]ರ್
ಅ[3]ರಿವರೈ? ಬಹು ದುಃಖ-ಸಂಗ್ರಹವಾದ ಸಂಸೃತಿಯಾ ||
ಶರಧಿಯೊಳು ಹೊಕ್ಕವನಿಗೆಂತ್, ಎಲೆ,
ಪರಿಹರಿಸುವದು ಶಾಪ, ವೇದನೆ,
ಮರಣ, ಭೀತಿಯಿದೆಲ್ಲ, ಸ[4]ತ್ಯವನರಿಯದವಗೆಂದಾ. ||16||

1, ಘಾಯಕ್ಕೆ. 2, ಯಾರು. 3, ಅರಿಯುವರು, ಬಲ್ಲರು. 4, ಸಂಸೃತಿಯ ಶರಧಿಯೊಳಗೆ ಹೊಕ್ಕವನಿಗೆ (ಮತ್ತು) ಸತ್ಯವನ್ನು ಅರಿಯದವನಿಗೆ ಎಂತು ಪರಿಹರಿಸುವದು ಶಾಪ? ಇತ್ಯಾದಿ.

ಕೊರಳ ಸುತ್ತಿದ ಹಾವು ಕಚ್ಚದೆ,
ಮರಳುವದೆ? ಲೋಕ-ಪ್ರ[1]ಬಂಧದಿ
ಹೊರಳುತಿಹ ಪಾಮರಗೆ ತಪ್ಪದು ನಾಶನದ ಬಂಧಾ. ||

1, ಪ್ರಬಂಧದಲ್ಲಿ.

ಕುರುಡ ಕಾಣದೆಗಾಧ-ಕೂಪದ—
ಲುರುಳುವಂತೆ, ವಿವೇಕ-ಶೂನ್ಯನು
ತಿರುಗುತಿಹ[2] ಪಾಪಾಧ್ವದಲಿ[3] ಕಡೆಘಾನಿ[4] ಹೊಂದುವನೂ. ||17||

2, ಇರುವ. 3, ಪಾಪದ ಅಧ್ವದಲ್ಲಿ. 4, ಕಡೆಗೆ ಹಾನಿ.

ತನ್ನ ಹಿತವನು[1] ತಿಳಿಯಲರಿಯದ[2]
ಕುನ್ನಿ ಬರಿದೇ! ಬಯಸಿ ಬೈಲಿಗೆ,
ಹೊನ್ನು ಹೆಂಣ್ ಎಂದ್ ಎಂಬ ಗಂಟಲ[3] ಗಾಳದಲಿ ಶಿಕ್ಕೀ, ||
ಉನ್ನತೋನ್ನತ[4]-ದುಃಖ-ನಿಧಿಯಿಂ[5]
ಬನ್ನ ಬಡುವನು ಮರುಳು ಮನುಜನು[6];
ಹಣ್ಣ್ ಎನುತ[7], ಕಿಚ್ಚಿನಲಿ ಬೀಳುವ ಶಲಭದಂದದಲೀ. ||18||

1, ಹಿತವನ್ನು. 2, ತಿಳಿಯಲಿಕ್ಕೆ ಅರಿಯದ (ಮನುಷ್ಯನೆಂಬ) ಕುನ್ನಿ. 3, ಗಂಟಲಿನ (ಅಂದರೆ ಗಂಟ್ಲಿನೊಳಗೆ ಶೇರಿ ಹಿಡಿಯುವ) ಗಾಳದಲ್ಲಿ. 4, ಉನ್ನತ-ಉನ್ನತ, ಬಹಳ ಉನ್ನತವಾದ. 5, ನಿಧಿಯಿಂದ. 6, ಮನುಜನೆಂಬ ಆಖ್ಯೆಯನ್ನು 'ಬಯಸಿ' ಮುಂತಾದ ಶಬ್ದಗಳ ಹಿಂದೆ ಇಡಬೇಕು. 7, ಎನ್ನುತ್ತ.

ಯಾಕೆ ಮನೆ, ಮನೆವಾರ್ತೆ, ಮಕ್ಕಳು?
ಯಾಕೆ ಮಡದಿಯು ಗೊಡವೆ? ತಾನ್[1]—ಅದು
ಕಾಕ್! ಎಲಾ, ಸಂಸಾರದಧ್ರುವಹಾರು ನಂಬುವರೂ? ||
ಸಾಕು, ಸಾಕ್! ಅದು ಬೇಡ! ಬರಿದೇ[2]
ಶೋಕ-ಮೋಹಾಸ್ಪದವದೆಂದ್, ಅದ[3]—
ನೋಕರಿಸಿ ಬಿಡದೆಹಹ[4], ನಿತ್ಯದಿ ಮೋಹಿಸುತ್ತ್ ಇಹನೂ. ||19||

1, ತಾನು ಅಂದರೆ ಮನುಷ್ಯನು; ಈ ಶಬ್ದವು ಮುಂದಿನದಕ್ಕೆ ಆಖ್ಯೆಯಾಗಿದೆ. ಅದು ಎಂತ ಹಿಡಿದು ಆಸ್ಪದವದೆಂದು ಎಂಬದರ ವರೆಗೆ ಅವನು ಹೇಳ ನ್ಯಾಯವಾದ ವಾಕ್ಯಗಳು. 2, ಬರೇ ಶೋಕದ (ಮತ್ತು) ಮೋಹದ ಆಸ್ಪದವು ಅದು! 3, ಅದನ್ನು. 4, ಬಿಡದೆ, ಅಹಹ.

ಬಡವೆಯುಳ್ಳರೆ[1], ಮಡದಿ ಮಕ್ಕಳು
ಕಡು ಮಮತೆಯನು ಮಾಳ್ಪ[2]ರಾತೆಗೆ[3];
ಬಡತನಗಳೆಡಸಿದರೆ, ಮೆಲ್ಲನೆ ಸಡಿಲ[4] ತೊಡಗುವರೂ. ||
ಬಿಡದೆ ಕರು, ಹಾಲ್ ಇರಲು, ತಾಯ್ಯನು,
ಕಡೆಗೆ ಹೋಹದು[5], ಬತ್ತಿದರೆ; ತಾ
ಕೆಡುವ ಕಾಲಕ್ಕ್ ಆರಿಗಾರ್[6], ಐ? ಮಗನೆ, ಹೇಳ್! ಎಂದಾ. ||20||

1, ಇದ್ದರೆ. 2, ಮಾಡುವರು. 3, ಆತನಿಗೆ (ಗಂಡನಿಗೆ, ತಂದೆಗೆ). 4, ಸಡಲಲಿಕ್ಕೆ, ಸಡಿಲಾಗುವದಕ್ಕೆ. 5, ಹೋಗುವದು. 6, ಯಾರಿಗೆ ಯಾರು.

ಹೆಂಡಿರೇತಕೆ? ಮಕ್ಕಳೇತಕೆ?
ಭಂಡಿ ತುಂಬಿದ ಧನವದೇತಕೆ?
ಮಂಡೆ ತುಂಬಿದ ಬಳಗವಿದ್ದ್, ಏನ್ ಅಹರು[1]? ಮರಣ-ಪತೀ||
ಚಂಡ ಪಾಶದಿ[2] ಕಟ್ಟಿ, ಕಳ್ಳನ
ಕೊಂಡು ಹೋಹಂದದಲಿ[3], ವೈವನು[4].
ಕಂಡು, ಬಿಡಿಸುವರುಂಟೆ[5]? ಯಾರಿಂದ್ ಏನು ಫಲವೆಂದಾ. ||21||

1, ಆಗುವರು. 2, ಪಾಶದಿಂದ. 3, ಹೋಗುವ. 4, ವೈಯುವನು. 5, ಬಿಡಿಸುವವರು.

ತಂದೆ ತಾಯ್ಯ್ ಘಳಿಸಿರ್ದ ಧನವನು
ನಂದನರು ತಮ್ಮೊಳಗೆ ಪಾಲಿಗೆ
ತಂದು, ಗುದ್ದ್ಯ್ ಆಡುತ್ತಲಿರಮನೆಗರಿಕೆಯನು ಮಾಡೇ[1];||
ಹಿಂದು ಮುಂದನು ನೋಡದೆ[2]ವರನು
ಬಂಧಿಸೆಲ್ಲವ ತೆಗದು ಕೊಂಬರು[3].
ಮುಂದೆ ಭಿಕ್ಷಾ-ಪಾತ್ರೆ[4]ಗಧಿಕಾರಿಗಳು ತಾವ್! ಎಂದಾ. ||22||

1, ಮಾಡಲಾಗಿ. 2, (ಅರಮನೆಯವರು ಹಿಂದನ್ನೂ ಮುಂದನ್ನೂ) ನೋಡದೆ, ಅವರನ್ನು ಬಂಧಿಸಿ, ಎಲ್ಲವ. 3, ಕೊಳ್ಳುವರು. 4, ಪಾತ್ರೆಗೆ ಅಧಿಕಾರಿಗಳು.

IV. ಪಾಠ

A GOOD ADVICE

ಒಳ್ಳೇ ಬುದ್ಧಿಯ ಮಾತು

ಎಡರಿನಲ್ಲ್ಯ ಎದೆ ಗುಂದದುಬ್ಬದೆ[1]
ಪೊಡವಿಯೆಧಿಪತಿಯಾಗೆ[2], ಬಡತನ-
ವೆಡಿಸಿದರೆ ಕಣ್ಣು ಗೆಡದೆ, ವಿತ್ತವ ಘಳಿಸಿ ಗರ್ವಿಸದೇ, ||
ಮಡದಿ ಮನೆ ಮನೆವಾರ್ತೆ ಮಕ್ಕಳ[3]-
ಲೊಡವೆಯಲಿ ಕಡು ಮಮತೆಯಿಲ್ಲದೆ,
ದೃಢ ಸು-ಭಕ್ತಿಯಲಿರಲು, ಮೋದವ ಪಡುವನೆವನೆಂದಾ[4]. ||23||

1, ಗುಂದದೆ, ಉಬ್ಬದೆ. 2, ಆಗಲು. 3, ಮಕ್ಕಳಲ್ಲಿ (ಮತ್ತು) ಒಡವೆಯಲ್ಲಿ. 4, ಅವನು ಅಂದರೆ ಯಾರೂ ಒಬ್ಬನು ಎಂಬುದು ಹಿಂದಿನ ಪೂರ್ಣ ವಚನಕ್ಕೆ ಆಖ್ಯೆಯಾಗಿದೆ.

THE IMPRACTICABILITY OF OBTAINING CLEANNESS BY CEREMONIES

ಆಚಾರದಿಂದ ಶುದ್ಧತ್ವವು ಪ್ರಾಪ್ತವಾಗದು

(ಭಕ್ತೀ ಸಾರ)

ಎಂಜಲೆಂಜಲೆಯೆಂಬರಾ[1] ನುಡಿ-
ಯೆಂಜಲಿಲ್ಲವೆ? ವಾರಿ ಜಲ-ಚರ-
ದೆಂಜಲಿಲ್ಲವೆ? ಕೀರವೆದು ಕರುವೆಂಜಲೆನಿಸಿರದೇ? ||
ಎಂಜಲೆಲ್ಲಿಯೆ[2]ದೆಲ್ಲಿಯುಂ[3] ಪರ-
ರೆಂಜಲಿಲ್ಲವೆ? ಬೇರೆ[4] ಭಾವಿಸ-
ಲೆಂಜಲುಂಟೇ? ದೇವ, ರಕ್ಷಿಸು ನಮ್ಮನೆನವರತಾ! ||24||

1, ಎನ್ನುವರು; ಆ. 2, ಎಂಜಲೆಲ್ಲಿ ಅದು? 3, ಎಲ್ಲಿಯಾದರೂ. 4, ಅಂದರೆ ಹಾಗಲ್ಲವೆಂತ ಭಾವಿಸಲು ಎಂಜಲುಂಟೇ? (ಇಲ್ಲವಿಲ್ಲ! ಎಲ್ಲವೂ ಎಂಜಲೇ!)

ತೊಲಗುವರು ಕಡೆ ಕಡೆಗೆ, ಛೀ, ಹೊಲೆ!
ಹೊಲೆಯೆನುತ ಕಳವಳಿಸಿ, ತಮ್ಮ[1]ಯ
ಮಲದ ಭಾವವನೇನು[2] ಕಾಣದೆ, ಬರಿದೆ[3] ಮನನೊಂದೂ. ||
ಜಲದೊಳಗೆ ಮುಳುಗಿದರೆ ತೊಲಗದು
ಹೊಲೆ-ಗೆಲಸವೀ[4] ದೇಹದೊಳು ನೀ
ನೆಲಸಿರಲು, ಹೊಲೆಯುಂಟೆ! ರಕ್ಷಿಸು[5] ನಮ್ಮನೆನವರತಾ! || 25 ||

1, ತಮ್ಮ. 2, ಭಾವವನ್ನು ಏನೂ. 3, ಸುಮ್ಮಗೆಯೇ. 4, ಗೆಲಸವು; ಈ. 5, (ದೇವ,) ರಕ್ಷಿಸು.

(ಸೋಮೇಶ್ವರ-ಶತಕ)

ಪ್ರಸಂಗ (4ನೇ ಶ್ಲೋಕ ನೋಡ ಬೇಕು)

ಹಿಡಿಯೊಳ್ ತುಂಬ್ಯ ಇರೆ[1] ಪಂಕ, ಮೇಲೆ
ತೊಳೆಯಲ್, ತಾಂ[2] ಶುದ್ಧನೇ? ಗೈದೊಡಂ[3]
ಕಡು ಪಾಪಂಗಳ, ಮೀಯಲೊತ[4]
ಶುಚಿಯೇ? ಕಾಕಾಳಿಗಳ್[5] ಮೀಯವೇ? ||
ಗುಡ-ಪಾನಂಗಳೊಳದ್ದೆ[6], ಕೈಪೆ
ಸೊರೆ[7] ತಾಂ ಸ್ವಾದಪ್ಪುದೇ[8]? ಬಾಹ್ಯದೊಳ್
ಮಡಿಯೇ? ನಿರ್ಮಲ[9] ಚಿತ್ತವೇ, ನ–
ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! || 26 ||

1, ಇರಲು, ಇರಲಾಗಿ. 2, ತಾನು. 3, ಗೈದರೂ. 4, ಮೀಯಲು, ಆತ. 5, ಕಾಕ-ಆಳಿಗಳು. 6, ಅದ್ದಲು. 7, ಸೋರೆ. 8, ಸ್ವಾದಿಸುವದೇ. 9, ನಿರ್ಮಲ ಚಿತ್ತವೇ (ಮಡಿಯಾಗಿದೆ).

(ಅನುಭವಾಮೃತ)

ಭಾಮಿನಿ-ಷಟ್ಪದಿ (1ನೇ ಶ್ಲೋಕ ನೋಡ ಬೇಕು)

ಕೆಲರು[1] ಜಪ ತಪಗಳಲಿ, ಕೆಲಬರು
ಬಲುಮೆಯೆಹ[2] ಭುಜ-ಬಲದಿ[3], ಕೆಲಬರು
ಹಲವು ವಿಧ[4]-ಯಾಗದಲಿ, ಕೆಲಬರು ದಾನ-ಧರ್ಮದಲೀ[5] ||
ಬಳಲುವರು, ಬಹು ಕಷ್ಟದಿಂದಲೆ
ಘಳಿಸಿ ಕೊಳ್ವರೆ[6] ತಮ್ಮ ಸುಖಗಳ,
ತಿಳಿಯಲರಿಯದೆ ನಿತ್ಯ ಸುಖವನು ಸತ್ಯ-ಮಾರ್ಗದಲೀ. || 27 ||

1, ಕೆಲವರು, ಕೆಲಬರು. 2, ಆದ. 3, ಬಲದಲ್ಲಿ. 4, ವಿಧದ. 5, ದಾನ ಕೊಡುವದೆಂಬ ಧರ್ಮದಲ್ಲಿ. 6, ಕೊಳ್ಳುವದಕ್ಕೆ.

(ಭಕ್ತಿ ಸಾರ)

ಸ್ನಾನ[1], ಸಂಧ್ಯಾದಿಗಳ ಜಪ, ತಪ,
ದಾನ-ಧರ್ಮ-ಪರೋಪಕಾರದಿ
ಹೀನ ಭಾವದೊಳುಳಿವರಲ್ಲದೆ[2] ಬೇರೆ ಗತಿಯುಂಟೇ? ||
ಏನು[3] ಮಾಡಿದಡೇನು[4], ಮುಕ್ತಿಗೆ
ಜ್ಞಾನವಿಲ್ಲದೆ? ಸತ್ಯ-ಭಕ್ತಿಗೆ
ನೀನೆ[5] ಕಾರಣನಾಗಿ, ರಕ್ಷಿಸು ನಮ್ಮನೆನವರತಾ! || 28 ||

1, ಸ್ನಾನದಿ, ಸಂಧ್ಯೆ ಮುಂತಾದ ಜಪದಿ, ತಪದಿ, ದಾನಗಳ ಧರ್ಮವೆಂಬ ಪರರ ಉಪಕಾರದಿ. 2, ಉಳಿಯುವರು; ಅಲ್ಲದೆ. 3, ಏನೂ. 4, ಮಾಡಿದರೆ. 5, ನೀನು, ದೇವರೇ.

PRAYER FOR ETERNAL HAPPINESS

ಅಚಲವಾದ ಆನಂದ ಬೇಕೆಂಬ ಪ್ರಾರ್ಥನೆ

ನೀರ ಮೇಲಣ[1] ಗುಳ್ಳೆಯಂದದಿ
ತೋರಿಯಡಗುವ ಪಾಪ-ಮಯ[2]-ಸಂ–
ಸಾರ-ಬಹಳಾರ್ಣವದೊಳಗೆ ಮುಳುಗಿದೆನು ನಿತ್ಯದಲೀ. ||
ತೋರಿ[3]ಸೆಚಲಾನಂದ-ಪದವಿಯ,
ಶೇರಿಸೆಕಟಾ, ನಿನ್ನ ಓಲ್ ನಮ–
ಗಾರು ರಕ್ಷಕರುಂಟು? ರಕ್ಷಿಸು ನಮ್ಮನೆನವರತಾ! || 29 ||

1, ಮೇಲಿನ ಮೇಲಿರುವ. 2, ಪಾಪ-ಮಯವಾದ ಸಂಸಾರದ ಬಹಳ ಅರ್ಣವದೊಳಗೆ. 3, ತೋರಿಸಿ ಅಚಲವಾದ ಆನಂದದ ಪದವಿಯ, ಶೇರಿಸು (ನನ್ನನ್ನು ಅದಕ್ಕೆ!) ಅಕಟಾ, ಇತ್ಯಾದಿ.

V. ಪಾಠ

THE SHORTNESS OF MAN'S LIFE

ಮನುಷ್ಯನ ಜೀವದ ಕಾಲ ಬೇಗ ತೀರುತ್ತದೆ

ವರುಷ[1] ನೂರ್ ಆಯುಷ್ಯವೆದರೊಳ–
ಗಿರುಳು ಕಳದೈವತ್ತು, ಮಿಕ್ಕ ಆ–
ದ್ದರಲಿ ವಾರ್ಧಕ ಬಾಲ್ಯ ಕೌಮಾರದೊಳು ಮೂವತ್ತೂ ||
ಇರದೆ ಸಂದುದು[2]; ಬಳಿಕಲಿಪ್ಪತ್ತು
ಒರುಷವೆದರೊಳಗಾದುದೆಂತಃ–
ಕರಣ ನಿನ್ನೊಳು ತೋರಿ, ರಕ್ಷಿಸು ನಮ್ಮನೆನವರತಾ! || 30 ||

1, ವರುಷ ನೂರು (ಮನುಷ್ಯನ) ಆಯುಷ್ಯವು; ಅದರೊಳಗೆ ಇರುಳಾಗಿರುವ 50 ವರುಷಗಳನ್ನು ಕಳೆದು ಬಿಟ್ಟರೆ, ಮಿಕ್ಕಾದ್ದರಲ್ಲಿ ಮೂವತ್ತು ಇತ್ಯಾದಿ. 2, ಸಂತು (ಸಲ್ಲುತ್ತದೆಂಬದಕ್ಕೆ ಬದಲಾಗಿ); ಬಳಿಕಲೇ ಇಪ್ಪತ್ತು ವರುಷ (ಅತಿವೃದ್ಧಾಪ್ಯಕ್ಕೆ ಉಳಿಯುತ್ತವೆ); ಅದರೊಳಗೆ (ಆಯುಷ್ಯವು) ಆದುದು (ಆಯಿತು).—ನಾವು 'ಸಂದುದು' ಎಂಬದನ್ನು ನಿಜಭೂತಕಾಲದ ಮೇಲೆ ತಿಳುಕೊಂಡರೆ, ಕವಿಯು ತನ್ನ ಆಯುಷ್ಯದಲ್ಲಿ ಸಂದ ವರುಷಗಳನ್ನು ಹೇಳಿದ ಹಾಗೆ ಆಗುತ್ತದೆ.

THE INSTABILITY OF THE BODY

ಶರೀರದ ಅಸ್ಥಿರತ್ವ

ಎಂಟು ಗೇಣಿನ ದೇಹ, ರೋಮಗ–
ಳೆಂಟು ಕೋಟಿಯು, ಕೀಲ್ಗ[1]ಳರವತ್ತ್
ಎಂಟು, ಮಾಂಸಗಳಿಂದ ಮಾಡಿದ ಮನೆಯು ಮನವೊಲೆಯೇ, ||
ಹೆಂಟೆಯಲಿ ಮುಚ್ಚುವರು. ದೇಹದ–
ಲುಂಟೆ ಸೌಖ್ಯವು? ದೇವ ನಿಜವಹೆ[2]
ನಂಟ ನೀನ್ ಆಗ್ಯ, ಇನ್ನು ರಕ್ಷಿಸು ನಮ್ಮನನವರತಾ! || 31 ||

1, ಕೀಲುಗಳು. 2, ಆದ.—(ಎಂಟು ಗೇಣಿನ ದೇಹವೆಂಬ, ರೋಮಗಳೆಂಟು ಕೋಟಿಯುಳ್ಳ, ಕೀಲ್ಗಳರವತ್ತೆಂಟು ಇರುವ ಮಾಂಸಗಳಿಂದ ಇತ್ಯಾದಿ).

ಹೂಡಿದೆಲು ಮರಮುಟ್ಟು, ಮಾಂಸದ
ಗೋಡೆ, ಚರ್ಮದ ಹೊದಿಕೆ, ನರವಿನ
ಕೂಡೆ ಹಿಂಡಿಗೆ[1] ಬಿಗಿದ ಮನೆಯೊಳಗಾತ್ಮ ಬೇಸತ್ತು ||
ಬೀಡು ತೊಲಗಿದ ಬಳಿಕಲೊ ಸುಡು-
ಗಾಡಿನಲಿ ಬೆಂದ್ ಉರಿವ ಕೊಂಪೆಯ
ನೋಡಿ, ನಂಬ್ಯ[2] ಇರಬಹುದೆ? ರಕ್ಷಿಸು ನಮ್ಮನನವರತಾ! || 32 ||

1, 'ಪಿಂಡಿಗೆ ಬಿಗಿದ' ಅಂದರೆ ಪಿಂಡಿಯು (ಅಂದರೆ ದೇಹವು) ಆಗುವ ಹಾಗೆ ಬಿಗಿದ. 2, (ಯಾರಾದರೂ) ನೋಡಿ, ನಂಬಿ.—(ಎಲುವಿನ ಮರಮುಟ್ಟು ಉಳ್ಳ, ಮಾಂಸದ ಗೋಡೆ ಉಳ್ಳ ಇತ್ಯಾದಿ).

ಬಿಗಿದ ರಕುತದ ರೋಮ-ಕೂಪದ
ತೊಗಲ ಕೋಟೆಯ ನಂಬೆ[1], ರೋಗಾ–
ದಿಗಳ ಮುತ್ತಿಗೆ ಬಲಿದು, ಜೀವನ ಪಿಡಿಯ[2]ಲನುವಾಯ್ತು. ||

1, (ಯಾರಾದರೂ) ನಂಬಲು. 2, ಹಿಡಿಯಲು (ಲಿಕ್ಕೆ) ಅನುವು ಆಯಿತು.

ವಿಗಡ ಮೃತ್ಯುವಿನೆವರು ಬರುತ್ತಿರೆ,
ತೆಗಸು[3] ಕಾಲನ ಬಲವ; ಬಲು ಮು–
ತ್ತಿಗೆಯನಿದ ಪರಿಹರಿಸಿ, ರಕ್ಷಿಸು ನಮ್ಮನೆನವರತಾ! || 33 ||

3, (ದೇವರೇ), ತೆಗಸು.—[ರಕ್ತ ಬಿಗಿದಿರುವ (ಮತ್ತು) ರೋಮ ಕೂಪವುಳ್ಳ ತೊಗಲಿನ ಇತ್ಯಾದಿ].

ಪೇಳಲೆನ್ನ[1] ಅಳವೆಲ್ಲವೀಗ್ ಮೃತ್ತಿ–
ಯೊಳುಗಳು ನೆರೆಯಂಗ[2]-ದೇಶವ
ಧಾಳಿ ಮಾಡುವರೆಕಟೆಕಟ, ಶೆರೆ ಸೂರೆಗಳ ಹಿಡಿದೂ, ||
ಕಾಳು ಮಾಡುವರಿನ್ನು ತನುವಿದು
ಬಾಳಲರಿಯದು; ಕೋಟಿ[3]ಯೆವರಿಗೆ
ಕೋಳು ಹೋಗದ ಮುನ್ನ, ರಕ್ಷಿಸು ನಮ್ಮನೆನವರತಾ! || 34 ||

1, ಪೇಳಲು ಎನ್ನ (ನನ್ನ) ಅಳವು ಅಲ್ಲವು; ಈಗ. 2, ನೆರೆ ಅಂಗಗಳ ದೇಶವ (ದೇಹವ). 3, ಕೋಟಿಯು ಅವರಿಗೆ.

ಅಳಿಯುವೊಡಲನು ನೆಚ್ಚಿ, ವಿಷಯಂ[1]–
ಗಳಿಗೆ ಕಾತುರನಾಗಿ, ಮಿಗೆ ಕಳ–
ವಳಿಸಿ, ಕಾಲನ ಬಳಿಗೆ ಹಂಗಿಗನಾಗಿ, ಬಾಳಿದೆನೂ. ||
ತಿಳಿದು ಮನದೊಳು ನಿನ್ನ ನಾಮಾ–
ವಳಿಯ, ಜಿಹ್ವೆ[2]ಗೆ ತಂದು, ಪಾಪವ
ಕಳೆದು ಬಿಡುವದೆ ಲೇಸು. ರಕ್ಷಿಸು ನಮ್ಮನೆನವರತಾ! || 35 ||

1, ವಿಷಯಗಳಿಗೆ. 2, (ಅದನ್ನು ಅಂದರೆ ನಾಮಾವಳಿಯನ್ನು) ಜಿಹ್ವೆಗೆ ತಂದು.

ಈಗಲೋ[1]ವೀ ದೇಹವಿನ್ನು ಯಾ–
ವಾಗಲೋ? ನಿಜವಲ್ಲವೆಂಬು[2]ದ–
ನೀಗ ತಿಳಿಯದೆ, ಮಡದಿ ಮನೆ ಮನೆವಾರ್ತೆಯೆಂದ್ ಎನುತಾ, ||

1, ಈಗಲೋ ಈ ದೇಹವು? ಇನ್ನು ಯಾವಾಗಲೋ? (ಈ ದೇಹವು ಈಗ ನಿಜವಾದದ್ದೋ? ಯಾವಾಗ್ಯಾದರೂ ನಿಜವಾದದ್ದೋ?). 2, ಎಂಬದನ್ನು.

ರಾಗ-ಲೋ[3]ಭದಿ ಮುಳುಗಿ, ಮುಂ[4]ದಣ
ತಾಗು ಬಾಗುಗಳೆರಿಯೆ. ನಿನ್ನ ಸ-
ಮಾಗಮವ ಬಯಸುವೆನು! ರಕ್ಷಿಸು ನಮ್ಮನೆನವರತಾ! || 36 ||

3, ಲೋಭದಲ್ಲಿ. 4, ಮುಂದಿನ.

VI. ಪಾಠ

THE ADVENTURES OF KING NALA

ನಳರಾಯನ ಕಥೆ

(ರಾಮಾಯಣ)

ಭಾಮಿನಿ-ಷಟ್ಪದಿ (೧ನೇ ಶ್ಲೋಕ ನೋಡ ಬೇಕು)

ದ್ಯೂತದಲಿ ಸಾಮ್ರಾ[1]ಜ್ಯ-ಲಕ್ಷ್ಮಿಯು-
ನೋತು, ಸತಿ-ಸಹಿತಾಂಗ ಸು-ಪ್ರ-
ಖ್ಯಾತ ನಳ-ಪತಿಯೆಡವಿ-ಗುರಿಯಾದನು, ಕಣಾಯೆಂದಾ. || 37 ||

1, ಸಾಮ್ರಾಜ್ಯದ ಲಕ್ಷ್ಮಿಯನ್ನು ಓತು (ಓಲು ಕೊಟ್ಟು), ಸತಿಯ ಸಹಿತದಲ್ಲಿ ಆಗ.

ಬಿ[1]ಸುಟನೈ ಬಳಿಕೆಡವಿಯೊಳಗಾ-
ಯಸವ ಸೈರಿಸಲಾರದಾಶ್ರಮ-
ಋಷಿಗಳೆಡೆಯಲ್ಲ್ಯ ಆಪ್ತ ದಮಯಂತಿಯನು; ವಿಪಿನದಲೀ ||
ನುಸುಳಿದನು ಬಳಿಕೊಬ್ಬನೇ; ಸಂ-
ಧಿಸಿದ ತ[2]ತ್-ಕರ್ಕೋಟನ ದೆಸೆಯಿಂದ್
ಅಸುವ ನೀಗದೆ, ಸಾರಿದನು ಋತುಪರ್ನ-ಭೂ-ಪತಿಯಾ. ||38||

1, ಬಿಸುಟನು (ಬಿಸುಡು ಎಂಬದು ಇದಕ್ಕೆ ಮೂಲ), ಐ, ಬಳಿಕ ಅಡವಿಯೊಳಗೆ, ಆಯಸವ ಸೈರಿಸಲಾರದೆ, (ಅಲ್ಲಿರುವ) ಆಶ್ರಮದ ಋಷಿಗಳ ಎಡೆಯಲ್ಲಿ ಆಪ್ತ ದಮಯಂತಿಯೆಂಬ ತನ್ನ ಹೆಂಡತಿಯನ್ನು. 2, ಆ.

ನಳನ ಮನೆಯುವ[1]ನೆಂದರೆಂತನ
ಸಲಹಿ ಕೊಂಡ್ ಇರ್ದ[2]ನು, ಕಣಾ, ನೃ[3]-ಪ-
ತಿಲಕ, ಮನ್ನಣೆಯುಲ್ಲಿ ರುತುಪರ್ನ-ಕ್ಷಿತೀ-ಪಾಲಾ. ||
ಬಳಿಕಲಾ ದಮಯಂತಿ ಭಾರಿಯು
ಬಳಲಿಕೆಯುನೆನುಭವಿಸಿ, ತಂದೆಯು
ನಿಳಯುವನು ಸಾರಿದಳು, ಭೀಷ್ಮಕನೆಂಬ ರಾಜನೆದಾ. ||39||

1, 'ಎಂದರೆ' ಎಂಬದಕ್ಕೆ 'ನಳನು' ಎಂಬದು ಆಖ್ಯೆ. 2, ಇದ್ದನು. ಇದಕ್ಕೆ 'ಕ್ಷಿತಿ-ಪಾಲ' ನೆಂಬದು ಆಖ್ಯೆ. 3, ನೃಪರಲ್ಲಿ ತಿಲಕವಾದವನೇ (ನೃಪರಲ್ಲಿ ಶ್ರೇಷ್ಠನೇ, ಕೇಳು!).

ಅಳಿಯುನನು ಕಾಣದೆ, ವಿದರ್ಭನು
ತೊಳಲಿಚಿದನೆನು[1]ಚರರ ನಾನಾ
ಹಳುವದಲಿ, ಹಳ್ಳಿಯುಲಿ, ನಗರಂಗಳಲಿ, ನಗ-ಕುಲದಾ ||
ಬಳಗಳಲಿ. ಬಳಿಕವರು ಕಾಣದೆ,
ಹೊಳಲ ಸಾರ್ದ[2]ರು. ಭೀಷ್ಮಕನು ಮಗ-
ಳುಳಿವ[3] ಕಾಣದೆ, ಕಂಡನೊಂದ್ ಅನುಮಾನ-ಸಾಧನವಾ. || 40 ||

1, ಅನುಚರರನ್ನು. 2, ಸಾರಿದರು. 3, ಉಳಿವನ್ನು.

ಸೃಜಿಸಿದನು ಸುದ್ದಿಯುನು ನೃ[1]-ಪ ಭೂ-
ಭುಜರ ನಗರಂಗಳಲಿ, ನಿಷಧನ
ನಿಜದ ವನಿತೆಗೆ ಪುನಃ ಸೊಯಂವರವೆಂದು, ಚರರಿಂದಾ. ||
ನಿಜವೆರಿಯುದೆಳಿಯಾಶೆಯುಲಿ ಭೂ-
ಭುಜರು ಬರು[2]ತಿರ್ದರು, ಕಣಾ, ಕೇಳ್,
ಅಜಯು-ಭೂ-ಪತಿಯೆಲವ್ರೊ, ಬಳಿಕಾ ಕುಂಡಿನೀ-ಪುರಕೇ. || 41 ||

1, ಇದು ಆಖ್ಯೆಯಾಗಿದೆ (ನೃ-ಪ=ಭೀಷ್ಮಕನೆಂಬವನು). 2, ಬರುತ್ತ ಇದ್ದರು.

ಸೋಕಿತೇ ಕಡು ನಿಂದ್ಯೆ ಪುಣ್ಯ-
ಶ್ಲೋಕರಿಗೆ?-ನಳ-ಭೂ-ಪನೀ ನರ-
ಲೋಕದೊಳಗುತ್ತಮನೆಲಾ! ಹಯ-ಜ್ಞತೆಯ ಜನರಿಂಗೇ ||
ನಾಕು ಮಡಿ ಮಿಗಿಲೆಂಬ ನಾಣ್-ನುಡಿ
ಕಾಕ ಬಳ[1]ಸಿತೆಯೆಂನುತಾಯಿ— [ಳುಗೀ. || 42 ||
ಕ್ಷ್ವಾಕು-ಕುಲದವನಿ-ಪನು ಸುಯ್ದನು, ಚಿಂತೆಯೊಳ್ ಮು

1, ಬಳಸಿತೇ? ಎನ್ನುತ್ತ, ಆ ಇಕ್ಷ್ವಾಕು-ಕುಲದ ಅವನಿಪನು (ಅಂದರೆ ರುತುಪರ್ನನು).

[1]ಅರಿದನಿದ? ನಾವ್ ನೋಡ ಬೇಕ್ ಎಂದ್,
ಅರ[2]ಸನುತ್ತಮ ವಾಜಿ ಹೂಡಲಿ
ವರ ವರೂಥಕ್ಕ! ಎನಲು; ತಂದನು ಸೂ[3]ತನು[4]ರು ಹಯವಾ. ||
ಅರಸ, ಕೇಳ್ ಐ! ನಳ-ಮಹೀ-ಪತಿ
ತುರಗವಿವು ನಾಳಿನಲಿ ಕುಂಡಿನಿ-
ಪುರಿಗೆ ಪರಿಗತವಾಗದೆ[5]ನೆ; ರುತುಪರ್ನನಿಂತ್ ಎಂದಾ— || 43 ||

1, ಅರಿದನು ಇದನ್ನು? (ಬಲ್ಲನು ಇದನ್ನು ಅಂದರೆ ಹಯವಿದ್ಯೆಯನ್ನು?) 2, ರುತುಪರ್ನನೆಂಬವನು. 3, ರುತುಪರ್ನನಿಗಿದ್ದ ನಳನಲ್ಲದ ಸೂತನು. 4, ಏಕವಚನವು ಬಹುವಚನಕ್ಕೆ ಬದಲಾಗಿ ಹೇಳಿ ಅದೆ (ಈ ಶ್ಲೋಕದಲ್ಲಿ 'ತುರಗವು ಇವು' ಎಂಬದನ್ನೂ 44ನೇ ಶ್ಲೋಕದಲ್ಲಿ 'ಅಶ್ವಾವಳಿಯು' ಎಂಬದನ್ನೂ 45ನೇ ಶ್ಲೋಕದಲ್ಲಿ 'ಅಶ್ವ-ಚಯ' ಎಂಬದನ್ನೂ ಸರಿ ನೋಡ ಬೇಕು). 5, ಎನಲು, ಎನ್ನಲು (ಇದಕ್ಕೆ 'ನಳ-ಮಹೀ-ಪತಿ' ಎಂಬದು ಆಖ್ಯೆ).

ನಳನು ಬಲ್ಲವನಶ್ವ-ಹೃದಯವ—
ನಿಳೆಯೊಳೆಂದು, ಸಮಸ್ತರಾ ನೃ-ಪ-
ತಿಲಕವನು ಕೊಂಡ್ ಆಡುವರು; ನೀನ್ ಅಶ್ವ-ಲಕ್ಷಣದಾ ||
ಹೊಲಬ ಬಲ್ಲ್ಯ, ಐ? ಬ[1]ಲ್ಲೆನೆನೆ; ಕಣ್ಣ—
ಗಳಿಗೆ ಸೊಗಸುಪಕರಿಸುವಶ್ವಾ—
ವಳಿಯ ತಂ[2]ದನು; ಹೂಡಿದನು ಹೊಂ-ದೇರಿನಲಿ ಹಯವಾ. ||44||

1, ಬಲ್ಲೆನೆಂಬದು ನಳನ ಪ್ರತ್ಯುತ್ತರ. 2, ಅಂದರೆ ನಳನು.

ಏರಿದನು ನೃ-ಪನೊ ರಥವನೊ—
ಬ್ಬಿ ಏರಿ ನಳ[1]ನೆಬ್ಬರಿಸೆ, ಕಣ್ಣ-ಎವೆ
[2]ಜಾರೆ, ಜಾರಿದವಶ್ವ-ಚಯ, ಪವಮಾನ-ವೇಗದಲೀ. ||
ತೂರಿ ಬಿ[3]ದ್ದುದು ಮುಕುಟ. ತಡೆ ಹಯ—
ವೇರಿದಂತ್ ಇರೆ ಪಥವನೆ[4]ನೆ; ನಳ
ನೂರು ಯೋಜನ ಮುಂ[5]ಚಿತೆನಲೆಬ್ಬರಿಸಿದನು ಹಯವಾ. || 45 ||

1, ಏರಿದನು ನೃಪನು (ಋತುಪರ್ನನು) ಆ ರಥವನು: ಉಬ್ಬಿ ಏರಿ, ನಳನು ಅಬ್ಬರಿಸಲು. 2, ಜಾರಲಿಕ್ಕೆ, ಜಾರುವ ಪ್ರಕಾರ. 3, ಬಿತ್ತು. 4, ತಡೆ ಹಯವ, (ಅದು) ಪಥವನ್ನು ಏರಿದಂತೆ ಇರಲು! (ಅದು ಆ ಏರುವ ಸ್ಥಳಕ್ಕೆ ಮುಟ್ಟಿದ ಮೇಲೆ) ಎನೆ (ಇದಕ್ಕೆ ಋತುಪರ್ನನೆಂಬದು ಆಖ್ಯೆ). 5, ಮುಂಚಿತವಾಗಿ (ಬಿತ್ತು).

ಇವನು ತಾ ನಳನೆಲ್ಲ್, ಎಲೇಯೆಂದ್,
[1]ಅವನಿ-ಪತಿಯೆನುಮಾನ-ಮುಖದಿಂದ್,
ಇವನನೆರಿಯಲು ಬೇಕ್ ಎನುತ, ದುಮ್ಮ-ಇಕ್ಕಿದನು ಧರೆಗೇ. ||
ಹವಣನೆದನೆರಿದೀತ ಕಡಿಯಾ—
ಣವನು ಸೆಳೆದಿಳೆ[2]ಗಿಳಿದುದೇನ್? [3]ಐ
ಯವನಿಗೆವತರಿಸಿದ ಕಥಾಂತರವೇನು? ಹೇಳ್! ಎಂ[4]ದಾ. || 46 ||

1, ಋತುಪರ್ನ. 2, ಇಳಿದ್ದು. 3, ಐ, ಅವನಿಗೆ. 4, ಹಣವನ್ನು ಅದನ್ನು ಅರಿದು (ಅರಿತು) ಇತ್ಯಾದಿ ಮಾತುಗಳನ್ನು ಈ ಕಥೆ ಕೇಳುವ ರಾಜನು ಅಂದದ್ದು.

ನಳನು ನೀನ್ ಅಹುದೆನಲು; ಕಣ್ಗಳ
ಜಲದ ಝಾಡಿಯಲಪ್ಪಿ, ತುರಗಾ—
ವಳಿಯ ಹೃದಯವನೆ[1]ರಿದನಾತನದಕ್ಷ-ಹೃದಯವನೂ ||

1, ಕಣ್ಣುಗಳ ಜಲದ ಝಾಡಿಯಲ್ಲಿ (ಋತುಪರ್ನನು ನಳನನ್ನು) ಅಪ್ಪಿ, ತುರಗಾವಳಿಯ ಹೃದಯವನು (ಗುಣವನ್ನು) ಅರಿದನು (ನಳನಿಂದ ಕಲಿತು ಕೊಂಡನು); ಆತನದು (ಋತುಪರ್ನನದಾದ) ಅಕ್ಷ-ಹೃದಯವನು (ಅಕ್ಷ-ವಿದ್ಯೆಯ ಹೃದಯದರ್ಥವನ್ನು) ನಳನು ತದೀಯ ನೃಪಾಲನಿಂದ (ಋತುಪರ್ನನಿಂದ) ಅರಿದನು. ಒಲವು ಮಿಗೆ (ಮಿಗಲಿಕ್ಕಾಗಿ).

ನಳ ತದೀಯು ನೃ-ಪಾಲನಿಂದ್ ಅರಿ–
ದೊಲವು ಮಿಗೆ, ರಥವೇರಿ, ಭೂಮಿ-ಪ-
ತಿಲಕರಿಬ್ಬರು ಸಾರಿದರು ಭೀಷ್ಮಕನ ಪಟ್ಟಣವಾ. || 47 ||

ಬಂದ ನೃ-ಪರೊಳಗೀತನೇ ನಳ–
ನೆಂದ್, ಅರಿದು, ಭೀಷ್ಮಕನು ತನ್ನ[1]ಯು
ನಂದನೆಯುನೊಲಿದಿತ್ತನೈ ಬಳಿಕಾ ಮಹೀ-ಪತಿ[2]ಗೆ; ||
ಬಂದ ಭೂ-ಪರು ಹರದರೀತ[3]ನ
ತಂದು, ನಿಲಿಸಿದನಖಿಳ ಸಂಪದ–
ದಿಂದ ನೈಷಧ-ನಗರಿಯುಲಿ. ನರ-ನಾಥ, ಕೇಳ್! ಎಂದಾ. || 48 ||

1, ತನ್ನ. 2, ಅಂದರೆ ನಳನಿಗೆ. 3, ಈತನನ್ನು (ಭೀಷ್ಮಕನು) ತಂದು, ಇತ್ಯಾದಿ.

ಜನ-ಪನಾ ದಾಯಿಗನ ಮರು ಜೂ–
ಜಿನಲಿ ಗೆಲ್ದ[1]ನು ಧರೆಯುನಾಳ್ದನು,
ಜನ-ಪರಲಿ ಮಿಗಿಲೆನಿಸಿ, ರಾಜ್ಯವ, ಕೇಳು, ಪೂರ್ವದಲೀ. || 49 ||

1, ಗೆದ್ದನು ಧರೆಯುನು; ಆಳಿದನು - - - ರಾಜ್ಯವ ('ಜನಪನು' ಅಂದರೆ ನಳನು ಆಖ್ಯೆಯಾಗಿದೆ).

VII. ಪಾಠ

COUNTING AN ARMY

ಫೌಜನ್ನು ಎಣಿಸಿದ್ದು

(ಕಲ್ಯಾಣಪ್ಪನ ಪ್ರಸಂಗ)

ದ್ವಿಪದೆ (೨ ಪದದ್ದು)

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

5	5	5	3	1ನೇ ಪದ
5	5	5	3	2ನೇ ಪದ

ದಳ-ಪನೆಂದನು ಫೌಜ[1]ನೆಣಿಸಿರೆನ್ನುತ್ತಾ; ||
ನಿಲಿಸಿದರು ವಿಧ-ವಿಧದಿ, ವಿಂಗಡಿಸಿ, ಮತ್ತಾ || 50 ||

1, ಫೌಜನ್ನು.

ಕತ್ತಿ ಕೋವಿಗಳ ಭಟ[2]ರೊಂದು ಸಾಲಿನಲೀ, ||
ಅಸ್ತ್ರ ಬಿಲ್ಲಿನ ಧೀರರೊಂದು ಸಾಲಿನಲೀ, || 51 ||
ಬಡಿಗೆಗಳ ಬೀಸುವವರೊಂದು ಸಾಲಿನಲೀ, ||
ಬಡಿಗೆ ಡೊಣೆಯೊಳ್ ಬಡಿ[3]ವರೊಂದು ಸಾಲಿನಲೀ, || 52 ||
ಕೊತ್ತಳಿಗೆ ಪಿಡಿದ ಭಟರೊಂದು ಸಾಲಿನಲೀ, ||
ಕುತ್ತು-ಕೋ[4]ವಿಂ ಪಿಡಿ[5]ವರೊಂದು ಸಾಲಿನಲೀ,– || 53 ||
ಸಾಲು ಸಾಲೊಳ್ ನಿಲಿಸಿಯೆಣಿಸಲವರೆಂದೂ ||
ಏಳು ಸಾವಿರ ಫೌಜು ಗಣಿತವಾಯ್ತು, ಅಂದೂ || 54 ||
ತ್ರಿತಯ-ಯುಗ-ಸೇನೆಯೆಂದದಲಿ ಕಾಣುತ್ತಾ; ||
ಅತಿ ಹರುಷದಿಂ ದಳ-ಪ ನಕ್ಕ, ನೋಡುತ್ತಾ. || 55 ||

2, 'ಭಟರ' ಎಂಬದು ('ಧೀರರ' 'ಬೀಸುವವರ' ಇತ್ಯಾದಿ ಸಹ) ಕರ್ಮವಿಭಕ್ತಿಯಾಗಿದೆ; 54ನೇ ಶ್ಲೋಕದಲ್ಲಿ 'ನಿಲಿಸಿ' ಎಂಬದು ಅದಕ್ಕೆ ಆಖ್ಯಾತವಾಗಿದೆ. 3, ಬಗಿಯುವವರ. 4, ಕೋವಿಯನ್ನು. 5, ಹಿಡಿಯುವವರ. 6, (ಆ) 'ಪೌಜು' ಆಖ್ಯೆಯಾಗಿದೆ.

A WICKED WARRIOR'S SLEEPLESS NIGHT

ಒಬ್ಬ ಖಳ-ಭಟನಿಗೆ ರಾತ್ರಿಯಲ್ಲಿ ನಿದ್ರೆ ಬಾರದ್ದು

(ರಾವಣ-ದಿಗ್ವಿಜಯ)

ದ್ವಿಪದೆ

ದಿನ-ಪನೆಸ್ತಾ[1]ಚಲಂ ಸಾರುತಿರಲೆಂದೂ ||
ಜನಿಸಿ ನಿಲ[2]ದಿದು ಜಗ[3]ಕೆ ಭೂರಿ ನಿಶೆ ಬಂದೂ, || 56 ||
ಬೀಡ್ಯ ಇರಲು; ಬಳಿಕ ಶತ್ರುವಿನ ಬಲದೊಳಗೇ ||
ರೂಢಿಸಿದ[4]ರುರು ಸುಪ್ತರಾಗ್ಯ ಇರುಳಿನೊಳಗೇ. || 57 ||

1, ಅಸ್ತಾಚಲವು (ಅಸ್ತಾಚಲವ ಎಂಬದಕ್ಕೆ ಬದಲಾಗಿ). 2, ನಿಲ್ಲದೆ. 3, ಜಗಕ್ಕೆ. 4, (ಭಟರು) ರೂಢಿಸಿದರು ಉರು ಸುಪ್ತರಾಗಿ (ಅಂದರೆ ಬಹಳ ಸುಪ್ತಿಯುಳ್ಳವರಾದರು).

ಬೆಳ-ದಿಂಗಳೇರಿ, ಶಶಿ ಬಲು ಪ್ರಕಾಶಿಸಲೂ, ||
ಖಳನುರದಿ[5] ಚಿಂತೆಗಳ ಖಡುಗ ಝುಳಪಿಸಲೂ; || 58 ||
ಚಂದಿರನ[6] ಕಾಣುತಲೆ, ಕರಗಿದುದು ಚಿತ್ತಾ; ||
ಚಂದದಿಂ ಕಾನನ-ಚ್ಛವಿ ಗಂಡನೆತ್ತಾ[7]. || 59 ||
ಮಾರುತವು ಮಂದವಾಗಿಯೆ ಬೀಸಲಾಗಿ, ||
ತಾರೆಗಳ ರಾಜಿ ಥಳ-ಥಳಿಸೆ[8] ಶುಭವಾಗೀ, || 60 ||
ನಿದ್ರೆಯನು ಕಾಣನೆತ್ತಿ ನರಳುಥೊರಳುತ್ತಾ[9], ||
ಛಿದ್ರ-ಮಾನಸನಾಗಿ ಚಲಿಸಿ ಚಲಿಸುತ್ತಾ. || 61 ||

5, ಉರದಲ್ಲಿ. 6, (ಖಳನು) ಚಂದ್ರನನ್ನು ಕಾಣುತ್ತಲೆ (ಅವನ) ಚಿತ್ತ ಕರಗಿದುದು (ಕರಗಿತು). 7, ಕಂಡನು, ಅತ್ತ. 8, ಥಳಿಸಲು. 9, ನರಳುತ್ತ ಹೊರಳುತ್ತಾ.

NIGHTFALL

ರಾತ್ರಿಯಾದ್ದು

(ಭಾರತ)

ಭಾಮಿನಿ-ಷಟ್ಪದಿ (1ನೇ ಶ್ಲೋಕ ನೋಡ ಬೇಕು)

ಶಿಲುಕಿದುದು[1] ಜನ-ದೃಷ್ಟಿ ಬಲು ಗ-
ತ್ತಲೆಯ ಬಂಧದೊಳಂಧಕಾರದ[2]
ಜಲಧಿಯಲಿ ಜಗವದ್ದುದೇನ್[3] ಎಂಬೆನು[4] ಮಹಾದ್ಭುತವಾ? ||
ನಳಿನ-ಮಿತ್ರನ ಬೇಹುಕಾರರ
ಸುಳಿವೊ ತಿಮಿರದ ಪಾಳೆಯದೊಳೆನೆ[5],
ನಿಳಯ-ನಿಳಯದ ಸೊಡರು ತಳಿತುದು[6] ಕೂಡೆ ನಗರಿಯಲೀ. ||62||

1, ಶಿಲುಕಿತು. 2, ಬಂಧದೊಳು; ಅಂಧಕಾರದ ಇತ್ಯಾದಿ. 3, ಜಗವು ಅದ್ದುದು (ಅದ್ದಿತು). ಏನ್ ಇತ್ಯಾದಿ. 4, ಎನ್ನುವೆನು. 5, ಪಾಳೆಯದೊಳು? ಎನ್ನುವಂತೆ (ಎಂತ ಕೇಳುವಂತೆ). 6, ತಳಿಯಿತು.

VIII. ಪಾಠ

WORLDLY HAPPINESS IS TRANSIENT

ಇಹದ ಭಾಗ್ಯವು ಅಸ್ಥಿರವಾಗಿದೆ

(ದಾಸರ ಪದ)

ರಾಗ ಮುಖಾರಿ; ಝಂಪೆ ತಾಳ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

ಪಲ್ಲ

5	5	5	5	1ನೇ ಪದ
5	5	5	3 ‖	2ನೇ ಪದ

ಪದಗಳು

5	5	5	5	1ನೇ ಪದ
5	5	5	1 ‖	2ನೇ ಪದ, 1ನೇ ಗಣಸಾಲು
5	5	5	5	3ನೇ ಪದ
5	5	5	3 ‖	4ನೇ ಪದ, 2ನೇ ಗಣಸಾಲು

ಆ[1]ರು ಹಿತವರು ನಿನಗೆ ಮೂರು ಮಂದಿಗಳೊಳಗೆ?
ನಾರಿಯೋ? ಧಾರುಣಿಯೊ? ಬಲು ಧನದ ಶಿರಿಯೋ? || ಪಲ್ಲ ||
ಅನ್ಯರಲಿ ಜನಿಸಿರ್ದ[2] ಅಂಗನೆಯು ಕರತಂದು,
ತನ್ನ ಮನೆಗೆವಳ ಯಜಮಾನಿಯೆ[3]ನಿಸೇ, ||
ಭಿನ್ನವಿಲ್ಲದಲೆರ್ಧ ದೇಹವೆನಿಸುವ ಸತಿಯು[4]
ಕಣ್ಣಿನಲಿ ನೋಡಲೆಮ್ಮಳು ಕಾಲ-ವಶದೀ. || 63 ||

1, ಯಾರು. 2, ಇದ್ದ. 3, ಎನ್ನಿಸಲಾಗಿ. 4, (ಅಂಥಾ) ಸತಿಯು ಕಾಲ-ವಶದಲ್ಲಿ (ಶೇರಿದಾಗ ಅವನನ್ನು) ಕಣ್ಣಿನಲ್ಲಿ ನೋಡಲಿಕ್ಕೆ (ಇನ್ನು) ಅಮ್ಮಳು (ಅಂಮುವದಿಲ್ಲ).

ಮುನ್ನ ಶತ-ಕೋಟಿ ರಾಯರುಗಳೆಳ್ದ ಆ ನೆಲನ
ತನ್ನದೆಂದ್ ಎನುತ, ಶಾಸನವ ಬರಸೀ, ||
ಬಿನ್ನಣದ ಮನೆ ಗಟ್ಟಿ, ಕೋಟೆ ಕೊತ್ತಳವಿಕ್ಕಿ,
ಚನ್ನಿನೆವನೆಸುವೆ[1]ಳಿಯೆ; ಹೊರಗೆ ಹಾಕುವರೂ. || 64 ||

1, ಅಳಿಯಲಾಗಿ.

ಉದ್ಯೋಗ,[1] ವೆವಹಾರ, ನೃ-ಪ-ಸೇವೆ, ಕುಶಲ-ಗತಿ,
ಚುದ್ರತನ, ಕಳವು, ಪರ-ತಾಪದಿಂದಾ, ||
ಬುದ್ಧಿಯಿಂದಲೆ ಘಳಿಸಿ ಶಿಕ್ಕಿದಂಥ್ ಅರ್ಥವನು
ಸದ್ಯದಲ್ಲ್ಯ ಆರ್ ಉಂಬುವರು?[2] ಹೇಳು, ಮನುಜಾ! || 65 ||

1, ಉದ್ಯೋಗಾದಿ ಕಳವಂತ್ಯವಾದ 6 ಶಬ್ದಗಳು ಸಹ ಕರಣವಿಭಕ್ತಿಯಲ್ಲಿ ಅವೆಂದು ತಿಳು ಕೊಳ್ಳ ಬೇಕು. 2, ಉಣ್ಣುವರು.

ಶೋಕವನು ಗೈಯ್ಯುವರು ಸತಿ ಸುತರು, ಬಾಂಧವರು;
ಜೋಕೆ ತಪ್ಪಿದ ಬಳಿಕಲೆರ್ಥ ವೆರ್ಥಾ. ||
ಲೋಕದೊಳು ಘಳಿಸಿರ್ದ ಪುಣ್ಯ ಪಾಪಗಳೆರಡು
ಸಾಕಾರವಾಗಿ ಸಂಗಡ ಬಪ್ಪುದಲದೇ[1] || 66 ||

1, ಬರುವದು. ಅಲ್ಲದೆ (ಈ ಕಡೇ ಮಾತು 67ನೇ ಶ್ಲೋಕಕ್ಕೆ ಹೋಗುತ್ತದೆ).

ಅಸ್ಥಿರದ ದೇಹವನು ನಚ್ಚಿ ನಂಬ್ಯ ಇರ ಬೇಡ;
ಸೊಸ್ಥದಲಿ ನೆನೆ, ಕಂಡ್ಯ,[1] ಪರಮಾತ್ಮನಾ! ||
ಚಿತ್ತದೊಳು ಶುದ್ಧಿಯಿಂದ್ ಆ ಮಹಾ ಮಹಿಮೆಯೆವ–
ನುತ್ತಮೋತ್ತಮನೆಂದು,[2] ಸುಖಿಯೊಗು, ಮನುಜಾ! || 67 ||

1, ಕಂಡ್ಯಾ (ನೋಡಿದಿಯಾ). 2, ಉತ್ತಮ-ಉತ್ತಮನು (ಬಹಳ ಉತ್ತಮನು).

IN THIS MISERABLE, WICKED WORLD GOD'S HELP IS MUCH WANTED

ಕಷ್ಟವೂ ಪಾಪವೂ ಉಳ್ಳ ಇಹಲೋಕದಲ್ಲಿ ದೇವರ ಸಹಾಯ ಅತ್ಯವಶ್ಯವಾಗಿದೆ

ರಾಗ ಶಂಕರಾಭರಣ; ಆದಿ ತಾಳ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

ಪಲ್ಲ

4	4	4	4	
4	4	4	1	1ನೇ ಪದ (ಎರಡು ಸರ್ತಿ ಇದೇ)

ಪದಗಳು

4 | 4 | 4 | 4
4 | 4 | 4 | 1 | 1ನೇ ಪದ
4 | 4 | 4 | 4
4 | 4 | 4 | 1 || 2ನೇ ಪದ (ಎರಡು ಸರ್ತಿ ಇದೇ)

ವರ[1]-ದ-ಸು-ಹೃದಯಾ! ವರ-ದ-ಸು-ಹೃದಯಾ!
ವರ-ದ-ಸು-ಹೃದಯಾಯೆ[2]ನು,
ಮನವೇ! ||
ದುರಿತ-ಶರಧಿಯನ್ನುತ್ತರಿಸ ಬೆ[3]ಕೊಂದರೆ,
ಪರಮಪತ್ರಿಯು ನುತಿಸಿರು,
ಮನವೇ! || ಪಲ್ಲ ||

1, 'ವರ-ದ' ಅಂದರೆ ವರಗಳನ್ನು ಕೊಡುವ ಸುಹೃದಯವುಳ್ಳವನೇ! (ಅಂದರೆ ದೇವರೇ!) 2, ಎನ್ನು. 3, ಬೇಕಾದರೆ.

ಘೋರ-ತರದ ಸಂಸಾರವು ದುಃಖದ
ವಾ[1]ರಿಧಿಯೆಂದರೊಳಗೇನ್
ಉಂಟೊ?
ತೋರುವ ಶಿರಿ-ಸಂಪತ್ತಿನ ನೆಲೆಯು ವಿ-
ಚಾರಿಸಲೆದು ಕನಸಿನ
ಗಂಟೊ. ||
ಮೂರು ದಿನದ ಬಾಳಿಕೆಯೆಂದರೊಳು ನೀನ್
ಆರೈ[2]ಸುವದೇತರ
ನಂಟೊ?
ಭಾರ-ಹರನ, ಮನ ಮುಟ್ಟಿ, ಭಜಿಸಿದರೆ,
ಕಾರಣದಿಂದ ಮುಕುತಿ-
ಯುಂಟೊ! || 68 ||

1, ವಾರಿಧಿಯು; ಇದರ. 2, ಯಾತರ.

ಮಡದಿ ಸುತರ ಮಮಕಾರಕೆ ನೀ ಮನ–
ವೊಡಬಡುತಲೆ, ನಗುತಿರ
ಬೇಡ!
ಹುಡುಕುತ, ಮೃ[1]ತಿಯವರೈತಂದರೆ, ಹೊರ–
ವಡೆಲೆಂಬರು ತನುವಿನ
ಗೂಡಾ. ||
ಬಿಡಲಾರದ ಪಾಪದ ಪಾಶಕೆ ಶಿಕ್ಕ
ಬಡದು, ನಿ[2] ಕಡೆಯಲಿ ಕೆಡ
ಬೇಡಾ!
ಕಡೆ-ಹಾ[3]ಯ್ಸುವವನ ಭಜಿಸಲು, ಮುಕುತಿಯ
ಪಡೆಯ ಬಹುದು. ನು[4]ತಿಸೋ
ಗಾಡಾ! || 69 ||

1, ಮೃತಿಯವರು ಐತಂದರೆ (ಬಂದರೆ), ತನುವಿನ ಗೂಡನ್ನು ಹೊರವಡು, ಎಲೆ! ಎಂಬರು. 2, ನೀ. 3, ಕಡೆ-ಹಾಯಿಸುವವನನ್ನು (ದೇವರನ್ನು). 4, (ದೇವರನ್ನು) ನುತಿಸೋ.

ನೆತ್ತ ಪಗಡೆ ಚತುರಂಗವನಾಡುತ
ಹೊತ್ತು ಕಳ[1]ವದೇತಕೆ?
ನೀನೂ
ಸುತ್ತಿ, ತೊಳಲಿ, ಬಳಲುತ ಮಾಡಿದ ಗೃಹ-
ಕೃತ್ಯದಿ ನಿನಗಿ[2]ಹ ಫಲ–
ವೇನೂ? ||
ಕತ್ತಲೆಯೊಳು ಕಣ್ಣನು ತೆರೆದಂದದಿ
ವ್ಯರ್ಥದಿ ಸಂಗ್ರಹಿಸುವ–
ದೇನೂ?

1, ಕಳೆಯುವದು. 2, ಆಗುವ (ಆದ).

ಮತ್ರ್ಯ-ಭಯವೆಗೆಲ ಬೇಕ್ ಆದರೆ, ಸ–
ರ್ವೋತ್ತಮ ದೇವರೆ! ಶರ–
ಣೆನ್ನು! || 70 ||

ಕೂಳಿನ ಬಲದಲಿ ಬೆಳದೀ ಕಾಯದ
ಬಾಳುವೆಯೆಂಬದು ತಿರ–
ವೆಲ್ಲಾ;
ಜಾಳಿಗೆ ತುಂಬಿದ ಹೊನ್ನ-ಆಭರಣವು
ನಾಳೆಗೆ ಸಂಗಡ ಬಹ–[1]
ದೆಲ್ಲಾ; ||
ಮಾಳಿಗೆ-ಮನೆಯುಪ್ಪರಿಗೆಯು ಕೋಣೆಯು
ಪಾಳಿಗಳೆಲ್ಲ ಅಲ್ಲ್ಯ ಇಹು–
ದೆಲ್ಲಾ.
ಕಾಲನ[2] ಭಯವನು ಕಳೆಯಲು ದೇವರ
ನಾಲಿಗೆಯಲಿ ನುತಿಸೋ,
ಸೊಲ್ಲಾ[3]! || 71 ||

1, ಬರುವದು (ಬರುವಂಥಾದ್ದು). 2, ಕಾಲನ ಭಯವನ್ನು ಕಳೆಯಲಿಕ್ಕಾಗಿ ದೇವರನ್ನು ನುತಿಸೋ. 3, ಎಲೆಲಾ!

ಕು-ಮತಿಗಳೆಹ ಷಡ್[1]-ವರ್ಗಗಳ ಪರಾ–
ಕ್ರಮವೆಲ್ಲವ ನೀ ಪರಿ–
ಹರಿಸೂ!
ಬೆಮೆ-ಗೊಳ್ಳುವಿಂದ್ರಿಯದಿಚ್ಛೆಗಳಾ–
ಗಮನವ ದಯೆಯಿಂ ನೀ
ನಿಲಿಸೂ! ||

1, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಆರು.

ಯಮನೊಳ್ಗಳನೆಬ್ಬಟ್ಟುವ [2]ಯತ್ನ-
ಕ್ರಮ-ಗತಿಗಳ ಕಾರ್ಯವ
ಬಲಿಸೂ!
[3]ಅಮಿತ-ಮಹಾ-ಪರಮೌಜಸಿನಾತ್ಮನ
[4]ರಮಣೀಯಾಂಘ್ರಿ ಹೃದಬೊ—
ಳಿರಿಸೂ! || 72 ||

2, ಯತ್ನದ ಕ್ರಮವುಳ್ಳ ಗತಿಗಳ. 3, ಅಮಿತವಾದ ಮಹಾ ಪರಮ ಓಜಸಿನ. 4, ರಮಣೀಯ ಅಂಘ್ರಿ (ಯನ್ನು).

IX. ಪಾಠ

GOOD ADVICE

ಬುದ್ಧೀ ಮಾತುಗಳು

ರಾಗ ರೇಗುಪ್ತಿ; ಮಟ್ಟೆ ತಾಳ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

ಪಲ್ಲ

3	3	3	3	1ನೇ ಪದ
3	3	3	3 ‖	2ನೇ ಪದ, 1ನೇ ಗಣಸಾಲು
3	3	3	3	3ನೇ ಪದ
3	3	3	3	4ನೇ ಪದ
3	3	3 ‖		

ಪದಗಳು

3	3	3	3	(ಹೀಗೆಯೇ ನಾಲ್ಕು ಪದಗಳು)

ಸಾರಿ, ದೂರಿ, ಹೇಳುತೇನೆ;
ಕೆಟ್ಟೆ, [1]ಕಂಡ್ಯ, ಬೊಡ್ಡಿ-ಮನವೆ! ||
[2]ದೂರೊ ಬುದ್ಧಿ ಮಾಡ ಬೇಡ!
ಕೈಯಲಿಕ್ಕೊ ಕಡ್ಡಿ! ನಿನ್ನ
ಕೈಯಲಿಕ್ಕೊ ಕಡ್ಡಿ! || ಪಲ್ಲ ||

1, ಕಂಡಿಯಾ? 2, ದೂರುವ.

ಕೋಪವನ್ನು ಮಾಡದೀರು[1];
ಪಾಪಕೆ ಗುರಿಯಾಗದೀರು; ||
ಶಾಪ-ಹರನ ನುತಿಗಳನ್ನು
ನೀ ಪಠಿಸುತಲೀರು, ಮನವೆ! || 73 ||

1, ಇರು.

ಅಷ್ಟ ಮದದಿ[1] ಬೆರೆಯದೀರು;
ನಷ್ಟಕೆ ಗುರಿಯಾಗದೀರು; ||
ದುಷ್ಟ ಸಂಗವನ್ನು ಮಾಡಿ
ಭ್ರಷ್ಟನಾಗ ಬೇಡ, ಮನವೆ! || 74 ||

1, ಮದದಲ್ಲಿ (ಅನ್ನ, ಅರ್ಥ, ಯೌವನ, ಸ್ತ್ರೀ, ವಿದ್ಯೆ, ಕುಲ, ರೂಪ, ಉದ್ಯೋಗ ಎಂಬ ಎಂಟು ಮದ).

ಸಿರಿಯ ಮೆಚ್ಚಿ ಮೆರೆಯದೀರು;
ಬರಿದೆ ಹೊತ್ತು ಕಳೆಯದೀರು; ||
ಪರರ ನಿಂದೆಯನ್ನು ಮಾಡಿ
ನರಕಿಯಾಗ ಬೇಡ, ಮನವೆ! || 75 ||

ಕಾಯವನ್ನು ನಂಬದೀರು;
ಮಾಯೆಗೆ ಮರುಳಾಗದೀರು; ||
ಸ್ತ್ರೀಯರನ್ನು ಕಂಡು, ನೀನು
ಬಯ್ಸದೀರು[1], ನನ್ನ ಮನವೆ! || 76 ||

1, ಬಯಸದೆ.

ನಿನ್ನ ನಿಜವ ನಂಬದೀರೆ[1]-
ಲಿನ್ನ ತಾಶೆ ಮಾಡದೀರು; ||
ಚನ್ನಗಿನ್ನು ದೇವ್ರ[2] ಪಾದ-
ವನ್ನು ನೀನು ನಂಬು, ಮನವೆ! || 77 ||

1, ನಂಬದಿರು; ಎಲೆ. 2, ದೇವರ.

IMPOSSIBILITIES

ಆಗದ ಕಾರ್ಯಗಳು

ರಾಗ ಶಂಕರಾಭರಣ; ಆದಿ ತಾಳ (68ನೇ ಶ್ಲೋಕ ನೋಡ ಬೇಕು)

ಗಣಗಳ ಮತ್ತು ಗಣಮಾತ್ರಗಳ ಕ್ರಮ—

ಪಲ್ಲ

4 | 4
4 | 4
4 | 4 | 4 | 1 | 1ನೇ ಪದ (ಇದೇ ಎರಡು ಸಾರಿ)

ಪದಗಳು

4 | 4
4 | 4
4 | 4 | 4 | 1 | 1ನೇ ಪದ
4 | 4
4 | 4
4 | 4 | 4 | 1 || 2ನೇ ಪದ, 1ನೇ ಗಣಸಾಲು (ಇದೇ ಎರಡು ಸಾರಿ)

ಈಶನ ಕರುಣೆಯು—
ನಾಶಿಸು ವಿನಯದಿ
ದಾಸನ ಹಾಗೆಯೆ, ನೀ ಮನವೇ!
ಕ್ಲೇಶದ ವಿಧ-ವಿಧ-
ಪಾಶವ ಹರಿದು, ವಿ—
ಲಾಸದಿ ಸತ್ಯವ ತಿಳಿ, ಮನವೇ! || ಪಲ್ಲ ||
ಮೋಸದಿ ಜೀವಿಯು
ಘಾಸಿಯು ಗೈದದು
ಕಾಶಿಗೆ ಹೋದರೆ, ಹೋದೀತೇ?
ದಾಸರ ದುಡಿಸುತ
ಕಾಸನು ಕೊಟ್ಟರೆ,
ಲೇಸುವು ಹುಟ್ಟದಲೆದ್ದೀತೇ? ||

ಭಾಷೆಯ ಕೊಟ್ಟು ನಿ–
ರಾಶೆಯ ಪಡಿಸಲು
ಮೋಸವ ಮಾಡದೆ ಬಿಟ್ಟೀತೇ?
ನಾಶದ ಭೋಗ-ವಿ–
ಲಾಸವ ಸೇವಿಸಿ,
ವಾಸಿಯೆಂದೆಂದಡೆ, ಬಂದೀತೇ? || 78 ||
ಶ್ವಾನದ ಮನಕೆ ಸು-
ಭಾನುವ ಪಾತ್ರದ
ಶಾನೆ ವಿಭಾಸೆಯು ಸೊಗಸೀತೇ?
ಹೀನ ಮನುಜನಿಗೆ
ಜ್ಞಾನವ ಬೋಧಿಸೆ,
ಹೀನ ವಿಷಯಗಳು ಹೋದೀತೇ? ||
ಮಾನಿನಿ-ಮನಸು ನಿ–
ಧಾನದಲಿರದಿರೆ,[1]
ಮಾನದ ಭೂಷಣವುಳದೀತೇ?
ದಾನ-ದ ದೇವಿಗೆ
ಜಾನುವನೊರದ
ದೀನಗೆ ಮುಕುತಿಯು ದೊರಕೀತೇ? || 79 ||

1, ಇರದಿರಲಾಗಿ.

ಸತ್ಯದ ಧರ್ಮವ
ನಿತ್ಯವು ಬೋಧಿಸೆ,
ತೊತ್ತಿನ ಮನಸಿಗೆ ಸೊಗಸೀತೇ?
ತತ್ತ್ವ-ಸಾರ ವಿ–
ಚಿತ್ರದಿ ಪೇಳಲು,
ಕತ್ತೆಯು ಮನಸಿಗೆ ತಿಳದೀತೇ? ||

ಪುತ್ಥಳಿ-ಬೊಂಬೆಯು
ಚಿತ್ರದಿ ಬರದಿರೆ,
ಮುತ್ತನು ಕೊಟ್ಟರೆ ನುಡದೀತೇ?
ಎತ್ತನು ಕೇಳದ-
ರೊತ್ತೆಗೆ ಹಣವನ್ನ
ಇತ್ತು, ವಿಶೋಕವ ಮಾಡೀತೆ? || 80 ||

ನ್ಯಾಯುವ ಬಿಟ್ಟ ಅ-
ನ್ಯಾಯುವ ಪೇಳುವ
ನಾಯಿಗೆ ನರಕವು ತಪ್ಪೀತೇ?
ತಾಯ್ ತಂದೆಗಳನು
[1]ನೋಯಿಸಿದಾವ-
ನ್ಯಾಯಿಗೆ ಮುಕುತಿಯು ದೊರಕೀತೇ? ||
ಬಾಯಿಯು ಕೊಬ್ಬಿಂ
ಬೈಯುವ ಮನುಜಗೆ
ಘಾಯುವು ತಾಗದೆ ಬಿಟ್ಟೀತೇ?
[2]ಮಾಯೆಯು ನುಡಿ ಸಂ-
ಚೈಯಿಸಿದವನಿಗೆ
ಕಾಯುದ ಕಷ್ಟವು ತೊಲಗೀತೇ? || 81 ||

1, ನೋಯಿಸಿದ ಆ ಅನ್ಯಾಯಿಗೆ. 2, ಎಲ್ಲಾ ಮಾಯೆಯಾಗಿದೆ, ನನ್ನ ಕಾಯುವು ಸಹ ಮಾಯೆಯೇ ಎಂಬ ವ್ಯರ್ಥ ನುಡಿಯನ್ನು.

ಸಾಧು ಸು-ಜನರನು
ಬಾಧಿಸಿದಾ ಪರ-
ವಾದಿಗೆ ದೋಷವು ತಪ್ಪೀತೇ?

ಬಾಧಿಸಿ, ಬಡವರ
ಸಾಧನ ವೊಯ್ವಗೆ[1]
ವ್ಯಾಧಿಯು ಕೋಟ್ಲೆಯು ಬಿಟ್ಟೀತೇ? ||
ಆದರವಿಲ್ಲದ
ವಾದಕೆ ಪ್ರತಿ-ದನಿ—
ಯಾದರೆ, ಸೊಂಪಗೆ ಕೇಳೀತೇ?
ಶಾದದ ಕೂಪದಿ
ಶೇದಲು, ವಿಮಲತ[2]—
ರೋದಕ ಕೊಡದೊಳು ಹೊರಟೀತೇ? || 82 ||

1, ವೊಯ್ಯುವವನಿಗೆ. 2, ವಿಮಲತರ (ವಾದ) ಉದಕ.

ಅಂಗಗಳಾ ವಿಷ—
ಯಂಗಳ ತೊರೆದವ—
ಗಂಗನೆಯರ ಬಗೆ ಸೊಗಸೀತೇ?
ಮಂಗದ ಚೇಷ್ಟೆಯು
ಹಿಂಗಿದ ಮನುಜಗೆ
ಶಿಂಗರ-ಬಗೆಯ್ಯ ಸೊಗಸೀತೇ? ||
ಅಂಗಗಳಿಚ್ಛಾ[1]-
ಸಂಗತನಾದರೆ,
ಭಂಗವು ಬಾರದಲಿದ್ಧೀತೇ?
ಮಂಗಳ[2]-ಮಾನಿತ—
ನಂಘ್ರಿಯು ಕಾಣದ
ಕಂಗಳಗಾದರ[3] ದೊರಕೀತೇ? || 83 ||

1, ಇಚ್ಛೆಯ ಸಂಗತನು. 2, ಮಂಗಳವಾದ ಮಾನಿತೆಯುಳ್ಳವನ (ದೇವರ). 3, ಕಂಗಳಿಗೆ ಆದರ.

X. ಪಾಠ

A KING IN A BATTLE

ಒಬ್ಬ ಅರಸನು ಯುದ್ಧ ನಡಿಸಿದ್ದು

(ರಾಮಾಯಣ)

ಭಾಮಿನಿ-ಷಟ್ಪದಿ (1ನೇ ಶ್ಲೋಕ ನೋಡ ಬೇಕು)

ಬಿಗಿದು ಬೆಳು ವಟ್ಟೆಯು, ಕಠಾರಿಯು
ಮಿಗೆ ಕಟಿಗೆ, [1]ಸಿಂಗರಿಸಿ ಹೊನ್ನ ಆ
ಯುಗದ ಖಡ್ಗವನಕ್ಷಯದ ಮೂಡಿಕೆಯು ದಕ್ಷಿಣದಾ ||
ಹೆಗಲಿಗಾನಿಸಿ, ಹರದ ಜೆಡೆಗಳ
[2]ಜಗುಳದೋಲ್ ಬಳ ಚಾಚಿ, ಚಾಪವ [ವಿಂದಾ. || 84 ||
ತೆಗದು ಕೊಂಡ್, [3]ಎಲೆಯಂದು ಹೊರಟನು ನೃ-ಪತಿ ನಲು

1, ಹೊನ್ನಿನ ಆ ಯುಗದ ಖಡ್ಗವನ್ನು ಸಿಂಗರಿಸಿ, ಇತ್ಯಾದಿ ಅರ್ಥ ಮಾಡ ಬಹುದು; ಅಥವಾ (ತನ್ನನ್ನು) ಸಿಂಗರಿಸಿ (ಕೊಂಡು), -- ಖಡ್ಗವನ್ನೂ -- ಮೂಡಿಕೆಯನ್ನೂ ಇತ್ಯಾದಿ ಹೇಳ ಬಹುದು. 2, ಜಗುಳದೋಲ್=ಜಗುಳದ ಹಾಗೆ. 3, ಎಲೆ, (ಕೇಳು,) ಅಂದು (ಆ ಸಮಯದಲ್ಲಿ).

ಮಸಗಿ, ಮಾರ್-ಬಲದಿದಿರಿನಲ್ಲಿ ಮೋ–
ಹಿಸಿದ; ಕೇಳ್ ಐಯಹೊಗ ಹೂಂ-ಕೃತಿ
ಮಸಗೆ, [1]ಹೂಡಿದನಹಿತರೆದೆ ನಿಳಿನಿಟಲೆನಲು, ಧನುವಾ. | 85 |

1, ಹೂಡಿದನು, ಅಹಿತರ ಎದೆ ನಿಳಿನಿಟಲೆನ್ನುವ ಹಾಗೆ, ಧನುವನ್ನು.

ಧನುವ ನೇವರಿಸಿದನು, ಕೊಪ್ಪಿನ
ಕೊನೆಯನಾರ್ಕೈದು[1]ಭಯದಲಿ ಸಿಂ–
ಜಿನಿಯ ಧನಿ [2]ದೋರಿಸಿದನವನೀ-ಘಟವು ಬಿರ-ಬಿರಿಯೇ, ||
ವನ-ಧಿಗಳು ತುಳುಕಾಡೆ, ತಾರಕೆ
ತನಿ ಗೆದರೆ, ತಳ್ಳಂಕ-ಗೊಳೆ ಮೋ– [ರಾಜಾ. || 86 ||
ದಿನಿಯು, ನಗ-ಕುಲವೆಲುಗೆ. ಬೊಬ್ಬ್ಯ ಇರಿದುಬ್ಬಿದನು

1, ಭೂಮಿಯಲ್ಲಿಯೂ ಆಕಾಶದಲ್ಲಿಯೂ. 2, ದೋರಿಸಿದನು, (ಆ ಧ್ವನಿಯಿಂದ) ಅವನಿಯೆಂಬ ಘಟವು ಬಿರಬಿರಿಯುವ ಹಾಗೆ ಇತ್ಯಾದಿ.

ಅರಿದರೆದುರಾಳಿಗಳು ರಾಜನ
ಕುರುಹ; ನಿಲ್ಲದೆ, ಭರದಿ[1]ಯೊ ಕ್ಷಣ [ಇರಿದೂ, ||
ನೆರದು, ಕವಿ! ಕವಿಯೆನುತ, ಭೋಯೆಂದ್, ಉಬ್ಬಿ, ಬೊಬ್ಬ್ಯೆ
ಹರೆಯ ಹೊಯ್ಲಲಿ ಮೇರು-ಗಿರಿ ತರ-
ತರಿಸೆ, ತೂಳಿದರಸ್ತ್ರ ಶಸ್ತ್ರದ
ಹೊರಿ[2]ಗೆಯಲಿ ಹೊಳಿದರು, ಹೊಗಿಸಿದರಾನೆ ಕುದುರೆಗಳಾ. ||87||

1, ಭರದಿ (ಭರದಲ್ಲಿ) ಆ. 2, (ತಾವು ಎಸೆಯುವ) ಅಸ್ತ್ರಗಳ ಮತ್ತು ಶಸ್ತ್ರಗಳ ಮಾರ್ಗದಲ್ಲಿ (ತಾವು ಅಸ್ತ್ರ ಶಸ್ತ್ರಗಳನ್ನು ಪ್ರಯೋಗಿಸುತ್ತಾ ಇರುವಲ್ಲಿ).

ಸರಳ ಸರಿ, ಶಲ್ಲೆ ಹದ ಮಳೆ, ಮು—
ದ್ಗರದ ವೃಷ್ಟಿ, ಮುಸುಂಡಿ ಮುಸಲದ
ವರುಷ, ಧಾರಾ[1]ಸಾರಕದ ಸಿಡಿಲಂಬು ಶಕ್ತಿಗಳಾ ||
ಬಿರುಬಿನೆಗ್ಗದ ಸೋನೆ ಗುಡುಗೊಡ—
ನೆರಿ[2]-ಬಲಾಹಕ-ಪಟಲದಿಂದ್ ಅ—
ಬ್ಬರಿಸಿ ಸುರಿದುದು ರಾ[3]ಜ-ಸುಮನೋದ್ಧಾಮ-ಶಿಖರಿಯಲೀ. ||88||

1, ಧಾರಾ-ಆಸಾರಕದ (ಧಾರೆಯ ಆಸಾರಕದ) ಸಿಡಿಲು, ಅಂಬು ಇತ್ಯಾದಿ. 2, ಅರಿಗಳ ಬಲಾಹಕದ ಪಟಲದಿಂದ. 3, ರಾಜನೆಂಬ ಸುಮನಸ್-ಉದ್ಧಾಮ-ಶಿಖರಿಯಲ್ಲಿ (ರಾಜನೆಂಬ ಪುಷ್ಪವುಳ್ಳ ಅಥವಾ ಚಂದವಾದ ದೊಡ್ಡ ಗುಡ್ಡದಲ್ಲಿ).

ಬೀಸಿದು[1]ದು ಬಿರು-ಘಾಳಿ ರಾಜ-ಶ—
ರಾಸನದ ಸರಳೋಟದಲಿ; ಹೊರ
ಬೀಸಿ ಬಿದ್ದವು ಹಲವು ಮಾರ್-ಜನ-ಶಿರಸು ನೆಲಕೆಂದೂ. | 89 |

1, ಬೀಸಿತು.

ಶೀಳಿ ಬಿದ್ದವು ಬಲು ಮದೇಭ-ಘ[1]—
ಟಾಳಿ, ಘೋಟಕ-ನಿಕರ; ನೆಲದಲಿ
ಹೋಳುಗಳೆ[2]ದವು, ಕಳಚಿ ಬಿದ್ದು ನಭೀ ತಲಕೆ; ರಥದಾ ||

1, ಘಟಗಳ ಆಳಿ. 2, ಆದವು.

ಗಾಳಿ ತಿರ್ರನೆ ತಿರುಗುತ್ತಿರ್ದವು;
ಮೇಲೆ [3]ಪರಿವಾರಾಳಿಗಳ್ ಕರ-
ತಾಳದಲಿ ಕುಣಿದಾಡುತ್ತಿರ್ದವು, ಪಾಡುತ್ತವನಿ-ಪಗೇ,– || 90 ||

3, (ರಾಜನ) ಪರಿವಾರರಾದ ಆಳಿಗಳು.

ಎಲೆಲೆ, ಕವಿ! ತಿವಿ! ಕೊಲ್ಲು! ಕೊಲ್ಲಿರಿ!
ತಲೆಯ ಹೊಯಿ, ಹೊಯಿ! ಕಾಲ ಪಿಡಿದೆ-
ಪ್ಪಳಿಸು! [1]ನರನೊಟ್ಟೈಸಿ, ಹಿಂದಿರುಗುವರು, ನೋಡ್ ಎನುತಾ. ||
ಬಳಿಕ [2]ವೈರಿಗಳಧಿಕರೆಸುಗೆಯ
ಚಳ-ಚಮತ್ಕೃತಿ ನಡೆಯಲೊಬ್ಬನು
ಹಳಚಿದನು [3]ತದ್-ರಾಜನಂ, ಬಲು ರಕ್ತ [4]ಸೋರ್ವ ಅಂತೇ. || 91 ||

1, ನರನೆ (ನರನರನೆ ಎಂದು ತಮ್ಮ ಬಲವನ್ನು) ಒಟ್ಟೈಸಿ, (ಶತ್ರುಗಳು). 2, ವೈರಿಗಳ ಅಧಿಕರ (ವೈರಿಗಳಲ್ಲಿ ಶ್ರೇಷ್ಠರಾದವರ). 3, ಆ ರಾಜನನ್ನು. 4, ಸೋರುವ.

ಉರವಣಿಸಿದರು ಶತ್ರು-ರಾವ್ತರು;
[1]ಕರದ ಖಡುಗದ ನೆಗಹಿನಲಿ ನಿಡು-
ವರಿಯ ಗಜ ತೂಳಿದವು; ತೋಳಿನ ಬಾಳ ನೆಗಹಿನಲೀ, ||
[2]ಹರಿಗೆ ಖಡ್ಗ ಕಠಾರಿ ಕುಂತದ-
ಲಿರಿತಕಾರರು ಹೊಕ್ಕರೆನಿಬರ
ಚರಣ-ಘೋಷಕ್ಕೆ ಅವನಿ ಗುಡುಗುಡು-ಗುಡುಗುವೆಂದದಲೀ. ||92||

1, ಕರದ ಖಡುಗದ=ಕರ (ಸೊಂಡಿಲು) ಎಂಬ ಖಡುಗದ ಅಥವಾ ಸೊಂಡಲಿನಲ್ಲಿರುವ ಖಡುಗದ. 2, ಹರಿಗೆಯಲ್ಲಿ, ಖಡ್ಗದಲ್ಲಿ, ಕಠಾರಿಯಲ್ಲಿ ಇತ್ಯಾದಿ. ಇರಿತಕಾರರು ತೋಳಿನ ಬಾಳಿನ ನೆಗಹಿನಲ್ಲಿ ಮತ್ತು ಹರಿಗೆಯಲ್ಲಿ (ಹರಿಗೆ ಹಿಡುಕೊಂಡು) ಇತ್ಯಾದಿ.—ಕರದ ಖಡುಗದ ನೆಗಹಿನಲ್ಲಿ ಎಂಬದನ್ನು ರಾವ್ತರಿಗೆ ಹಾಕ ಬಹುದು; ಹಾಗಾದರೆ ತೋಳಿನ ಬಾಳಿನ ನೆಗಹಿನಲ್ಲಿ ಎಂಬದನ್ನು ಗಜಗಳಿಗೆ ಹಾಕ ತಕ್ಕದ್ದು (ತೋಳು=ಸೊಂಡಿಲು ಎಂಬಂತೆ ಆದೀತು).

ಆಸುರದ ಬೊಬ್ಬೆ-ಆಟ, ಹಯದುರು
ಹೇಷಿತ ಧ್ವನಿ, ಕರಿಯ ಬೃಂಹಿತ-
ಘೋಷ, ರಥ-ರಾಜಿಗಳ ಚಿತ್ಕೃತಿ, ಭಟರ ಸಿಂಹ-ರವಾ, ||

ಆ ಸಮರ-ವಾದ್ಯದ ಘಡಾವಣೆ–
ಯೊಸುರದಿ ಬೆದರಿಸಿತು, ನಡುಗಿಸಿ–
ತೊ ಸಮಯದಲಿ ರಾಜ-ಪರಿವಾರೊಳಿಯನು; ಕೇಳೂ! || 93 ||

ಮುಸುಕಿದೆರಿ-ಶರ-ಜಾಲವನು ಖಂ–
ಡಿಸಿದನೊ ಭೂ-ನಾಥ; ಮೂಗ್-ಉ–
ಬ್ಬಸವ ಮಾಡಿದನೆಸುಗೆಯಲಿ ಬಳಿಕೊಯೆದುರ್-ಬಲಕೇ. ||
ಶಶಗಳೆಂದದಲೆಂದು ವೈರಿಗ–
ಳೆಸುವ ಲಾಭಕ್ಕ ಓಡುತೋಡುತ,
ನುಸುಳಿ ಪೊಕ್ಕರು ತಮ್ಮ ಮೋರುವೆಯೊಳಗೆ ಭಯದಿಂದಾ. ||94||

XI. ಪಾಠ

COMPARISONS

ಸಾಮ್ಯಗಳು

(ದಾಸರ ಪದ)

ರಾಗ ಮುಖಾರಿ; ಝಂಪೆ ತಾಳ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ–

ಪಲ್ಲ

5	5	5	5	1ನೇ ಪದ
5	5	5	3	2ನೇ ಪದ

ಪದಗಳು

5	5	5	5	1ನೇ ಪದ
5	5	5	3	2ನೇ ಪದ, 1ನೇ ಗಣಸಾಲು (ಇದೇ ಎರಡು ಸಾರಿ)

ಅ[1]ಹುದಾದರೆಹುದೆನ್ನಿ
ಯಲವಾದರೆಲವೆನ್ನಿ!
ಬಹು ಜನರು ಕೂ[2]ಡಿದೆನು
ಪೇಳಿ ಮತ್ತೆ ಇದನೂ! || ಪಲ್ಲ ||

1, ಅಹುದು (ಹೌದು) ಆದರೆ, ಅಹುದು ಎನ್ನಿ! ಅಲ್ಲವು ಆದರೆ, ಅಲ್ಲವು ಎನ್ನಿ (ಎನ್ನಿರಿ)!
2, ಕೂಡಿದ ಅನು, ಕೂಡಿದ ವೇಳೆ.

ದೇವರಿಲ್ಲದ ದೇಶ
ಭೂ[1]ತ-ಗಣ-ಸು-ನಿವೇಶ;
ಭಾವವಿಲ್ಲದ ಭಕುತಿ-
ಯದು ಕುಹಕ ಯುಕುತೀ. ||
ಹೇವವಿಲ್ಲದ ಹೆಣ್ಣು
ಗಜುಗ ಬೆಳದಾ ಕಣ್ಣು;
ಸೇವೆಯರಿಯದ ಧಣಿಯು
ಕಲ್ಲಿನಾ ಕಣಿಯೂ. || 95 ||

1, ಭೂತಗಳ ಗಣದ ಸುನಿವೇಶ.

ಧರ್ಮ-ಹೀನತೆಯರಸು
ಮುರಿದ ಕಾಲಿನ ಗೊರಸು;
ನಿರ್ಮಲಿಲ್ಲದ ಬಳಸು
ತಾ ಕೊಳಚೆ-ಹೊಲಸೂ. ||
ಶರ್ಮವಿಲ್ಲದ ಗಂಡು
ಕರಿಯ ವನಕೆಯ ತುಂಡು;
ಮರ್ಮವಿಲ್ಲದ ಮಾತು
ಮೊಡ-ಮೊಗೆಯ ತೂತೂ. || 96 ||

ಮಕ್ಕಳಿಲ್ಲದ ಶ್ರೀಯು
ಕೊಳತ ತೆಂಗಿನ ಕಾಯ್ಯು;
ಸಾಕ್ಯ-ಹೀನತೆಯೂಟ-
ವೆದು ಕಾಳಕೂಟಾ. ||
ಒಕ್ಕಲೇನ್ ಇರದೂರು
ಕೊಳೆತು ನಾರುವ ನೀರು;
ಸೊಕ್ಕಿ ನಡೆಯುವ ಭೃತ್ಯ-
ನೆವಕೂರ-ಕೃತ್ಯಾ. || 97 ||

ಕಂಡು ಕರೆಯದ ನಂಟ
ಮೊನೆಯು ಕೆಟ್ಟಿಹ[1] ಕಂಟ-
ಪೆಂಡು ನಗದಿಹ ಮೋರೆ-
ಯೆದುವೆ[2] ಕಹಿ ಸೋರೆ. ||
ದಂಡಿಗೆಂಜುವ ಬಂಟ-
ನೊಡಕು-ಹರವಿಯು ಕಂಟ;
ಗಂಡಗೆಂಜದ[3] ನಾರಿ-
ಯೆವಳೆ ಹೆಮ್ಮಾರೀ. || 98 ||

1, ಇರುವ. 2, ಅದೇ. 3, ಗಂಡನಿಗೆ.

ಬಿಟ್ಟು ನುಡಿವಾ ಗೆಣೆಯು
ಹರಕು-ತೊಗಲಿನ ಮಿಣಿಯು;
ಕೊಟ್ಟು ಪೇಳುವ ದಾತ-
ನೆವ ಹೀನ ಜಾತಾ. ||

ಸೃಷ್ಟಿಯೊಳು ದುಸ್ಸಂಗಿ-
ಯಾಗಿ ಪರಮಾತ್ಮಾಂಘ್ರಿ[1]
ಬಿಟ್ಟು ನಡೆವಾ ನರನು
ಬರೆ ಕಾಡು-ಮರನೂ[2]. || 99 ||

1, ಪರಮಾತ್ಮನ ಅಂಘ್ರಿ(ಯನ್ನು). 2, ಮರವು.

IMPOSSIBILITIES

ಆಗದ ಕಾರ್ಯಗಳು

ರಾಗ ಮುಖಾರಿ; ಝಂಪೆ ತಾಳ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

ಪಲ್ಲ

5 | 5 | 5 | 5 | 1ನೇ ಪದ
5 | 5 | 5 | 3 || 2ನೇ ಪದ

ಪದಗಳು

5 | 5 | 5 | 5 | 1ನೇ ಪದ
5 | 5 | 5 | 1 || 2ನೇ ಪದ, 1ನೇ ಗಣಸಾಲು
5 | 5 | 5 | 5 | 3ನೇ ಪದ
5 | 5 | 5 | 3 || 4ನೇ ಪದ, 2ನೇ ಗಣಸಾಲು

ಪಾಪಿ ಬಲ್ಲನೆ ಪರರ ಸುಖ ದುಃಖದಿಂಗಿತವ?
ಕೋಪಿ ಬಲ್ಲನೆ ದಾನ-ಧರ್ಮಗಳ ಗುಣವಾ? || ಪಲ್ಲ ||

ಕತ್ತೆ ಬಲ್ಲುದೆ ಹೊತ್ತ ಕಸ್ತುರಿಯ ಪರಿಮಳವ?
ಮೃತ್ಯು ಬಲ್ಲುದೆ ವೇಳ್ಯ ಹೊತ್ತೆಂಬುದಾ? ||
ತೊತ್ತು ಬಲ್ಲಳೆ ಮಾನವೆವಮಾನವೆಂಬುದನು?
ಕೊತ್ತಿ ಬಲ್ಲುದೆ ಕದ್ದ ಕ್ಷೀರವೆಂಬುದನೂ? || 100 ||

ಮೂಢ ಬಲ್ಲನೆ ಜ್ಞಾನ-ದೃಢ-ಭಕ್ತಿ-ಮರ್ಮವನು?
ಕಾಡ ಕಪಿ ಬಲ್ಲುದೇ ಮರ್ಯಾದೆಯಾ? ||
ಬೇಡ ಬಲ್ಲನೆ ಹರಿಣಿ ಹಾಕುವಾ ಬಾಷ್ಪವನು?
ಜಾಡಿಗನು ಬಲ್ಲನೇ ಕೀರ್ತಿ-ವಾಸನೆಯಾ? || 101 ||

ಹೇನು ಬಲ್ಲುದೆ ಮುಡಿದ ಹೂವಿನಾ ಪರಿಮಳವ?
ಶ್ವಾನ ಬಲ್ಲುದೆ ರಾಗ-ಭೇದಂಗಳಾ? ||
ಮೀನು ಬಲ್ಲುದೆ ನೀರು ಸಾಳು ಸೋದ್ ಎಂಬುದನು?
ಹೀನ ಬಲ್ಲನೆ ದಾನ-ಧರ್ಮಗಳ ಗುಣವಾ? || 102 ||

ಹೇಡಿ ಬಲ್ಲನೆ ರಣದ ಸಾಹಸದ ಶೌರ್ಯವನು?
ಕೋಡಗವು ಬಲ್ಲುದೇ ರತ್ನ-ಬೆಲೆಯಾ? ||
ಬೇಡಿದುದ[1] ಕೊಡಲು ನಿಜ ಕರುಣಾಳುವೆಲ್ಲದಲೆ
ನಾಡ ದೈವಗಳು ಕೊಡ ಬಲ್ಲವೇ, ಮನುಜಾ? || 103 ||

1, ಬೇಡಿದ್ದ(ನ್ನು) ಕೊಡಲಿಕ್ಕೆ (ದೇವರು ಬಲ್ಲ).

ಕೋಣ ಬಲ್ಲುದೆ ವಿದ್ಯೆಯನ್ನ್ ಓದಿ ಕಲಿಯಲಿಕೆ?
ಗೋಣಿ ಬಲ್ಲುದೆಯೆತ್ತಿನಾ ದುಃಖವಾ? ||
ಪ್ರಾಣ ತೊಲಗಿದ ಹೆಣವು ಕಿಚ್ಚಿಗೆಂಜಲು ಬಲುದೆ[1]?
ಕ್ಷೋಣಿಯೊಳು ಕುರುಡ ಬಲ್ಲನೆ ಹಗಲನಿರುಳಾ? || 104 ||

1, ಬಲ್ಲುದೆ.

ಬದಿರ ಕೇಳುವನೆ, ಸಂಗೀತವನು ಪಾಡಿದರೆ?
ಚದುರ ಮಾತುಗಳಾಡುವನೆ ಮೂಕನೂ? ||
ಅಧರವಿಲ್ಲದವನೆಮೃತಾನ್ನವನು ಸವಿದಾನೆ?
ಮಧುರ ವಚನವ ನುಡಿವನೇ ದುಷ್ಟ ಮನುಜಾ? || 105 ||

ಭುಜ-ಬಲದಿ ಯುಕ್ತಿಯನು ಗೆಲ ಬಲ್ಲನೇ ಶೂರ?
ನಿಜ ಮುಕುತಿ[1], ಭಕುತಿ-ಸುಖವನ್ನು ಕೊಡುವಾ, ||
ಸೃಜಿಸಿದ ಮಹಾ ಮಹಿಮೆಯಿಂ ಶೋಭಿತಾತ್ಮವನು
ಭಜಿಸಲಿಕ್ಕ್ ಅರಿಯದೆವ ಕಡು ಪಾಪಿ, ಮನುಜಾ! || 106 ||

1, ಮುಕುತಿ(ಯನ್ನು ಮತ್ತು).

XII. ಪಾಠ

MORALITY PRAISED

ಪುಣ್ಯದ ಸ್ತೋತ್ರ

(ನೀತಿಸಾರದ ವಚನಗಳು)

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

4 | 4 | 4 | 1ನೇ ಪದ
4 | 4 | 4 | 4 | 4 || 2ನೇ ಪದ, 1ನೇ ಗಣಸಾಲು (ಇದೇ ಎರಡು ಸಾರಿ)

ಪುಣ್ಯಂ[1] ಗೈಯದ ಪಾಪಿಗೆ
ಪುಣ್ಯಂ ಬಳಿಕೇಕೆ, ಮರುಗಿ ಕುವಿದೊಡೆ[2], ಬರ್ಕುಂ[3]?
ಪುಣ್ಯದೊಳು ತೊಡರು ಬೇಗಂ!
ಪುಣ್ಯಂ ಶ್ರೇಷ್ಠಂ, ಕೇಳ್! ಎಲೆ, ನಿಜಮಿದು[4] ತನಯಾ! || 107 ||

1, ಪುಣ್ಯವು. 2, ಕುವಿದರೆ. 3, ಬರುವದು. 4, ನಿಜವು ಇದು.

ಪರ-ವಧುವಿಂಗ್[1] ಅಳುಪಿದವಗೆ,
ಪರರರ್ಥವ ಶೆಳಕೊಂಬುವ[2] ಪಾತಕತನದಿಂ ||
ಪರರಂ ಪೀಡಿಪ[3] ಪಾಪಿಗೆ
ಪರರರ್ಥಂ ಗತಿ-ಗೇಡ್. ಎಲೆ, ನಿಜಮಿದು ತನಯಾ! || 108 ||

1, ವಧುವಿಗೆ. 2, ಕೊಳ್ಳುವ. 3, ಪೀಡಿಸುವ.

ಮತಿ ಗೆಡಿಸುವ, ಗತಿ ಗೆಡಿಸುವ,
ಶ್ರುತಿ ಗೆಡಿಸುವ, ವಪ್ಪ ಗೆಡಿಸುವೆಂಥಾ ಕಳ್ಳಂ[1] ||
ಕ್ಷಿತಿಯೊಳು ಕುಡಿವೀ[2] ಖಳನ
ಸ್ಥಿತಿ ಕೆಡುವದು ಕೌತುಕವೇನ್? ನಿಜಮಿದು ತನಯಾ! || 109 ||

1, ಕಳ್ಳನ್ನು. 2, ಕುಡಿಯುವ ಈ.

ಮನದ ಮಲಕ್ಕ ಅಂತರ್ಯದೊ-
ಳೆನುಮತಿಸಿರೆ, ಪೊರಗೆ ತೊಳಯೆ, ಶುದ್ಧತೆಯಾಗದು. ||
ಮನದೊಳು ಭಕ್ತಿಯ ರತ್ನಂ
ಬೆಳಗಲು, ಶುದ್ಧಾಂತರ್ಯಂ. ನಿಜಮಿದು ತನಯಾ! || 110 ||

ಗಿರಿ-ದುರ್ಗಂ, ವನ-ದುರ್ಗಂ,
ಜಲ-ದುರ್ಗಂ, ಯಂತ್ರಂ, ತಂತ್ರ-ಬಲಂ ಕಾಯ್ವವೆ[1]? ||
ನಿರುತಂ ಕಾಯ್ವುದು[2] ಸತ್ಯಂ.
ಶರಣಂ ಸತ್ಯಂ, ಶರಣಂ ಸತ್ಯಂ! ನಿಜಮಿದು ತನಯಾ! || 111 ||

1, ಕಾಯುವವೇ? 2, ಕಾಯುವದು.

SUNDRY COUNSELS

ಬೇರೆ ಬೇರೆ ಬುದ್ಧೀ ಮಾತುಗಳು

(ಸೋಮೇಶ್ವರ-ಶತಕ)

ಪ್ರಸಂಗ (4ನೇ ಶ್ಲೋಕ ನೋಡ ಬೇಕು)

ಕೊಡ ಬೇಕ್ ಉತ್ತಮನಾದವಂಗೆ[1]
ಮಗಳಂ, ಸದ್-ಧಾರ್ಮಿಕಂ ದಾನಮನ್[2];
ಇಡ ಬೇಕ್ ದೇವರ ಮೇಲೆ ಭಕ್ತಿ-
ರಸಮಂ[3], ವಿಶ್ವಾಸಮಂ ರಾಯನೊಳ್. ||

1, ಆದವನಿಗೆ. 2, ದಾನಮಂ, ದಾನವನ್ನು. 3, ರಸವನ್ನು.

ಬಿಡ ಬೇಕ್, ಐ, ಧನ-ಲಾಭ ಬಂಧು-
    ಜನರೊಳ್; ದುಷ್ಟಾತ್ಮರೊಳ್ ಗೋಷ್ಠಿಯುಂ
ಬಿಡ ಬೇಕ್; ಇರ್ದ್ ಉಣ ಬೇಕ್, ಎಲೇ, ನ—
    ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! ‖ 112 ‖

ಪೊರ ಬೇಡ್ ಅಂಗಡಿ-ಸಾಲವೊರ
    ಪೊಣೆ[1]ಯುಂ, ನಿಂದ್ಯಂಗಳಂ, ಪಾಪಮಂ;
ಮರೆ[2] ಬೇಡಾ[3] ದಯೆಯನ್ನು ತನ್ನ
    ಸತಿಯೊಳ್, ನ್ಯಾಯಂಗಳೊಳ್ ಸತ್ಯಮಂ. ‖
ನೆರ ಬೇಡ್ ಬಂಡರ ಸಂಘಮಂ, ವಿ—
    ಕಟದಾತ್ಮ-ಸ್ತೋತ್ರ-ದುರ್ಭಾವರಂ;
ತೆರ ಬೇಡ್ ಬತ್ತಿಗೆ ಬಡ್ಡಿಯುಂ, ನ—
    ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! ‖ 113 ‖

1, ಪೊಣೆಯನ್ನು. 2, ಮರೆಯ. 3, ಬೇಡವೇ.

ಸುಡು, ಕಂದಾ[1], ಕರಕೆನ್ನದೊಟ—
    ವ, ಪರಾನ್ನಾಪೇಕ್ಷಿತಾ[2] ಜಿಹ್ವೆಯುಂ;
ಸುಡು ಜೋಕ್ಯ ಇಲ್ಲದ ಬಾಳ್ಕೆಯುಂ; ಸು—
    ಡು, ಸದಾ ಕಾಪಟ್ಯದ ಸ್ನೇಹಮಂ! ‖
ಸುಡು ವಾಕ್[3]-ಸ್ವಚ್ಛ-ವಿಹೀನ-ವಕ್ತ್ರ—
    ವ, ಪರ-ಸ್ತ್ರೀ-ನೋಟದಾ ಕಣ್ಗಳಂ,
ನುಡಿ[4]ದುಂ ತಪ್ಪುವ ರಾಜನಂ, ನ—
    ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! ‖ 114 ‖

1, ಕಂದನೇ. 2, ಪರರ ಅನ್ನದ ಅಪೇಕ್ಷೆಯುಳ್ಳ ಆ. 3, ವಾಕ್ಯದ ಸ್ವಚ್ಛವಿಲ್ಲದ. 4, ನುಡಿದೂ, ನುಡಿದರೂ.

RULES FOR KINGS

ಅರಸರಿಗೆ ತಕ್ಕ ಕಟ್ಟಳೆಗಳು

ಪುರ ದುರ್ಗಂಗಳ ಬಲ್ಮೆ ಮಾಡ-
    ದೆ, ಪ್ರಜಾ-ಕ್ಷೋಭಂಗಳಂ ನೋಡದೆ-
ಲ್ಲರು ವಿಶ್ವಾಸಿಗಳೆಂದು ನಂಬಿ,
    ಬಹುದಂ[1] ಪೋದಪ್ಪುದಂ[2] ಕಾಣದಾ- ||
ತುರದಿಂದ್ ಉಂಡ್, ಅತಿ ನಿದ್ರೆಗೈದು,
    ಮದನಂಗ್[3] ಆಳ್ ಆಗ್ಯ ಇಹಂ[4] ಲೋಕದೊಳ್
ಧೊರೆಯೋ? ಸೊಕ್ಕಿದ ಕೋಣನೇ, ನ-
    ರ, ನರಾ! ಕೇಳ್ ಬುದ್ಧಿಯಂ ಪೇಳ್ವುದಾ! || 115 ||

1, ಬರುವದನ್ನು. 2, ಹೋಗುವದನ್ನು. (248ನೇ ಶ್ಲೋಕದಲ್ಲಿರುವ 'ಇದ್ದಪರೆ' ಎಂಬದನ್ನೂ 183ನೇದರಲ್ಲಿ 'ಇರ್ದಪರು' ಎಂಬದನ್ನೂ ಸರಿ ನೋಡಿರಿ). 3, ಮದನನಿಗೆ. 4, ಇರುವನು.

ಧುರದೊಳ್, ತನ್ನಯ[1] ವೀರರೊಳ್, ಪ್ರ-
    ಜೆಗಳೊಳ್, ದಾಯಾದ್ಯರೊಳ್, ಭೃತ್ಯರೊಳ್,
ಪುರದೊಳ್, ಬಂಧುಗಳೊಳ್, ಸು-ಭೋಜ-
    ನಗಳೊಳ್, ವೈದ್ಯಂಗಳೊಳ್, ಯಾನದೊಳ್ಗ್, ||
ಅರಿಯೊಳ್, ಕಾಲ[2]-ನಿಯೋಗ-ವಾಕ್-ಕು-
    ಟಿಲರೊಳ್, ವಿದ್ವಾಂಸರೊಳ್, ಮಂತ್ರಿಯೊಳ್ಗ್
ಅರಸಿಂಗ್ ಎಚ್ಚರು ಬೇಕ್, ಎಲೇ, ನ-
    ರ, ನರಾ! ಕೇಳ್ ಬುದ್ಧಿಯಂ ಪೇಳ್ವುದಾ! || 116 ||

1, ತನ್ನ. 2, ಕಾಲದ ನಿಯೋಗಕ್ಕೆ ಬೇಕಾದ ವಾಕ್ಯದಲ್ಲಿ ಕುಟಿಲರಾದವರೊಳ್.

SIGNS OF A BAD CLERK

ಕೆಟ್ಟ ಶಾನಭೋಗನ ಲಕ್ಷಣಗಳು

[1]ಅಣು-ಮಾತ್ರಾನ್ನ-ದನಲ್ಲದಾಣ್ಮ –
ನೆಡೆಯೊಳ್ ಲಂಚಕ್ಕ್ ಒಡಂಬಟ್ಟು, [2]ವೆಪ್-
ಪಣಮಂ ಕೊಂಡ್, ಅತಿ ದ್ರವ್ಯಮಂ ಕೆ–
ಡಿಸಿ, ಚಾಡೀ ಕೇಳಿ, ದ್ರೋಹಂಗಳನ್ನ್ ||
ಎಣಿಸುತ್ತ್, ಎಲ್ಲರ ಬಾಳ್ಗೆ ನೀರ–
ನೆರದಾ[3]ರುಂ ಕಾಣದೇ [4]ಭಕ್ಷಿಪಾ
[5]ಗಣಕಂ [6]ಹೆಗ್ಗಣಕಂ [7]ಸಮಂ, ನ–
ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! || 117 ||

1, ಅಣು-ಮಾತ್ರ-ಅನ್ನ-ದನು (ಕೊಡುವವನು) ಅಲ್ಲದೆ, ಆಣ್ಮನ. 2, ಒಂದು. 3, ಆರನ್ನೂ. 4, ಭಕ್ಷಿಸುವ ಆ. 5, ಗಣಕನು. 6, ಹೆಗ್ಗಣಕ್ಕೆ. 7, ಸಮನು (ಸಮಾನನು).

XIII. ಪಾಠ

IT IS DIFFICULT TO SOUND HYPOCRITES

ಕಪಟಸ್ಥರನ್ನು ಶೋಧಿಸುವದು ಕಷ್ಟವಾಗಿದೆ

ಕ್ಷಿತಿಯುಂ ಶೋಧಿಸ[1]ಲಕ್ಕು, ವೀಚಿ–
ಗಳ ಲೆಕ್ಕಂ ಮಾಡಲಕ್ಕು, [2]ಆಗಸೋ–
ನ್ನತಿಯುಂ ಕಾಣಲು [3]ಬಕ್ಕು, ಸಾಗ–
ರಗಳೇಳಂ ದಾಂಟ[4]ಲಕ್ಕುಂ, ಸು-ಭಾ- ||
ಗತಿಯುಂ ಸಾಧಿಸಲಕ್ಕು, ಬೆಟ್ಟ–
ಗಳು ಚೂರ್ ಅಕ್ಕು; ಐಬೊ, ಕಾಪಟ್ಯರಾ
ಮತಿಯುಂ ಸೋಸಲಭೇದ್ಯವೈ, ನ–
ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! || 118 ||

1, ಆಗುವದು. 2, ಆಗಸದ ಉನ್ನತಿಯನ್ನೂ. 3, ಬರುವದು. 4 ಆಗುವದು.

BE CONTENT

ಇದ್ದದ್ದು ಸಾಕೆಂದು ಸುಖ ಪಡು

ಮುಕುರಂ ಕೈಯೊಳಿರಲ್ಕೆ[1], ನೀರ
ನೆಳಲೇಕ್, ಐ? ಕಾಮ-ಧೇನ್ ಇರ್ದುಗ್, ನೋ—
ಟಕೆ ಗೊಡ್ಡ್-ಆಕಳನಾಯ್ವರೇ[2]? ಗು—
ಣ-ಯುತರ್ ಪಾಲ್ ಉಂಡು, ಮೋಲ್ ಉಂಬರೇ? ||
ಶುಕನೋದಿಂದ್[3] ಅತಿ ಚೆಲ್ವೆ ಕಾಕ-
ರವ? ನಾಲ್-ನಾಟ್ಯೋಟದಿಂ ಡೊಂಬರೇ?
ಸುಕದಿಂದ್ ಉನ್ನತ ವಸ್ತುವೇ, ನ—
ರ, ನರಾ? ಕೇಳ್ ಬುದ್ಧಿಯಂ ಪೇಳ್ವುದಾ! || 119 ||

1, ಇರಲಿಕ್ಕೆ. 2, ಆಯುವರೇ. 3, ಶುಕನ ಓದಿನಿಂದ.

THE RIGHT THING AT THE RIGHT TIME

ಬೇಕಾದದ್ದು ತಕ್ಕ ಕಾಲಕ್ಕೆ ಬರ ಬೇಕು

ಉಣದಿರ್ಪರ್ಗೆ[1] ಧನವಿದ್ದಡೇನು?
ಸತಿಯೆದ್ದ್ ಏನ್, ನಂಬಿಕ್ಕೆ ಪೋದ ಮೇಲ್?
ಬಣಗಲ್ ಪೈರಿಗೆ ಬಾರದಿರ್ದ
ಮಳೆ ತಾಂ[2] ಬಂದ್ ಏನು? ಬಿಕ್ಕಟ್ಟನೊಳ್ ||
ಮಣಿದುಂ[3] ನೋಡದ ಬಂಧುವೇತ—
ಕೆಣಿಸಲ್ ಕಾಲೋಚಿತಕ್ಕೆ ಐದದಾ
ತೃಣವೇ ಪರ್ವತಮಲ್ಲವೇ, ನ—
ರ, ನರಾ? ಕೇಳ್ ಬುದ್ಧಿಯಂ ಪೇಳ್ವುದಾ! || 120 ||

1, ಉಣ್ಣದೆ ಇರುವ ಆ. 2, ತಾನು. 3, ಮಣಿದೂ, ಮಣಿದರೂ.

PLACES WHICH ARE TO BE AVOIDED

ವಾಸ ಮಾಡ ತಕ್ಕವಲ್ಲದ ಸ್ಥಳಗಳು

ಫಲವೊತ್ತ್ಯ ಇಲ್ಲದ ರಾಜ್ಯದಲ್ಲಿ,
ಪ್ರಭು ದಂಡಕ್ಕ್ ಆಶೆ ಗೈ[1]ವೆಲ್ಲಿ, ಬಲ್
ಪುಲಿಗಳ್ ಸಿಂಹಗಳಿಕ್ಕೆಯಲ್ಲಿ,
ಪರ-ಸ್ತ್ರೀಯಿರ್ದಲ್ಲಿ, ಕು-ಗ್ರಾಮದೊಳ್, ||
ಗೆಲವಂ ತೋರದೆ ದುಃಖವೊಗು—
ವೆಡೆಯೊಳ್, ಭೂತಂಗಳಿವಾಸದೊಳ್
ಸಲೆ ಬಲ್ಲರ್ ಇರ ಸಲ್ಲದೈ, ನ—
ರ, ನರಾ! ಕೇಳ್ ಬುದ್ಧಿಯಂ ಪೇಳ್ವುದಾ! || 121 ||

1, ಗೈಯುವಲ್ಲಿ.

A GOOD POET NEVER DESPAIRS

ಸತ್ಕವಿಯು ಎಂದಿಗೂ ನಿರಾಶೆಯವನಾಗುವದಿಲ್ಲ

ಚರಿ[1]ಪಾರಣ್ಯದ ಪಕ್ಷಿಗೊಂದು
ತರು ಗೊಡ್ಡ್ ಆಗಲ್, ಫಲಂ ತೀವಿದಾ
ಮರಗಳ್ ಪುಟ್ಟವೆ? ಪುಷ್ಪವೊಂದು
ಬಳಲಲ್, ಭೃಂಗಕ್ಕೆ ಪೂವ್ ಇಲ್ಲವೇ? ||
ನಿ[2]ರುತಂ ಸತ್-ಕವಿಗೋರ್ವ ಗರ್ವ-
ವಿಭು ತಾ[3]ನುಂ ಲೋಭಿಯಾಗಲ್, ನಿ[4]ಜಂ
ಧರೆಯೊಳ್ ದಾತರು ಪುಟ್ಟರೇ, ನ—
ರ, ನರಾ? ಕೇಳ್ ಬುದ್ಧಿಯಂ ಪೇಳ್ವುದಾ! || 122 ||

1, ಚರಿಸುವ. 2, ನಿರುತವು (ನಿರುತದಲ್ಲಿ). 3, ತಾನೂ, ತಾನಾದರೂ. 4, ನಿಜವು (ಯಾವಾಗ್ಯಾದರೂ).

VAIN THINGS

ವ್ಯರ್ಥವಾದ ವಿಷಯಗಳು

ಸು[1]ರ-ಚಾಪಾಯತಮಿಂದ್ರ-ಜಾಲ–
ದ ಬಲಂ, ಮೇಘಂಗಳಾಕಾರ, ಬಾ–
ಲರು ಕಟ್ಟ್ಯ ಆಡುವ ಕಟ್ಟೆ, ಸ್ವಪ್ನ–
ದ ಧನಂ, ನೀರ್-ಗುಳ್ಳೆ, ಘಾಳೀ ಸೊಡರ್, ||
ಪರಿವೃತ್ತ್ ಇ[2]ಪ್ಪ ಮರೀಚಿಕಾ-ಜ–
ಲ, ಜ[3]ಲಾವರ್ತಾಕ್ಷರಂ, ಧಾರಿಣೀ
ಶಿರಿ ಪುಲ್ಲ್-ಅಗ್ರದ ತುಂತುರ್ಯೈ, ನ–
ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! || 123 ||

1, ಸುರ-ಚಾಪ-ಆಯತಂ (ಮಳೆ ಬಿಲ್ಲು ಪಸರಿಸಿದ್ದು). 2, ಇರುವ. 3, ಜಲದ ಆವರ್ತ-(ದಲ್ಲಿಯ) ಅಕ್ಷರಂ.

GREAT THINGS ARE EFFECTED BY SMALL MEANS

ಚಿಕ್ಕ ಉಪಾಯಗಳಿಂದ ದೊಡ್ಡ ಕಾರ್ಯಗಳಾಗುವವು

ಅರೆಯುಂ ಶೀಳು[1]ವಡಾನೆ ಮೊಟ್ಟ–
ಲಿಹುದೇ? ಚಾ[2]ಣಂಗಳಿಂದ್ ಅಲ್ಲದೇ?
[3]ಕಿರಿದಾಗ್ಯ ಇರ್ದಡದೇನ್? ಉಪಾಯು-
ಪರನೋ[4]ರ್ವಂ ಕೋಟಿಗೀಡ್ ಅ[5]ಕ್ಕು. ಹೆಂ- ||
ಮರನಿರ್ದ್ ಏನ್? ಅದರಿಂದಲೆತ್ತ
ಬಹುದೇ ಬಲ್ ಭಾರಮುಂ? ಸನ್ನೆ ಸಾ–
ವಿರ ಕಾಲ್-ಆಳಿನ ಸತ್ವವ್ಯೈ, ನ–
ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! || 124 ||

1, ಶೀಳುವದಕ್ಕೆ. 2, ಚಾಣಂಗಳಿಂದ (ಶೀಳುವದಕ್ಕೆ ಆಗುವದು) ಅಲ್ಲವೇ? 3, (ಉಪಾಯವು) ಕಿರಿದಾಗಿ ಇರ್ದಡೆ ಅದು ಏನು? 4, ಒಬ್ಬನು. 5, ಆಗುವನು.

MAN MUST ACT ACCORDING TO HIS ABILITIES

ಒಬ್ಬನು ತನ್ನ ತೂಕ ನೋಡಿ ಏನಾದರೂ ಮಾಡ ತಕ್ಕದ್ದಾಗಿದೆ

ಇರಿಯಲ್[1] ಬಲ್ಲರೆ, ವೀರನಾಗು;
ಧರೆಯೊಳ್ ನಾನಾ ಚಮತ್ಕಾರವನ್ನ
ಅರಿಯಲ್ ಬಲ್ಲರೆ, ಮಂತ್ರಿಯಾಗು;
ಪ್ರಭುವಾಗ್, ಆರ್ ಎಂದೊಡಂ[2] ಕೋಪವಂ ||
ತೊರೆಯಲ್ ಬಲ್ಲರ್[3] ಉಪಾಧ್ಯನಾಗ್, ಏ[4]-
ಳರಿ-ಷಡ್-ವರ್ಗಂಗಳಂ ಗೆದ್ದ ಮೇಲ್;
ತೆರ ಬಲ್ಲರ್[5] ಪೊಣೆಯಪ್ಪುದೇ[6], ನ-
ರ ನರಾ! ಕೇಳ್ ಬುದ್ಧಿಯಂ ಪೇಳ್ವುದಾ! || 125 ||

1, ತಿಳಿದರೆ. 2, ಎಂದರೂ (ನುಡಿದರೂ). 3, ಬಲ್ಲರೆ; ಇತ್ಯಾದಿ. 4, ಎಲೆ! 5, ಬಲ್ಲರೆ. 6, ಆಗುವದೇ.

GOD'S SUPREMACY

ದೇವರ ಸರ್ವೇಶತನ

ಕಡಿದಾಡಲ್[1] ರಣ-ರಂಗದೊಳ್, ನೃ-
ಪರನೇನ್ ಏನ್ ಅಂದದೊಳ್ ಕಾದೊಡಂ[2];
ದೃಢದೊಳ್ ಗುಡ್ಡವ ಕಿತ್ತೊಡಂ; ತೊ-
ಳಲುತೇನ್ ಗ್ರಂಥಂಗಳಂ ಮಾಡಲುಂ[3]; ||
ಕಡಲೇಳಂ ಮಗುಚಿಟ್ಟೊಡಂ; ಕ-
ಲಿಯುಲುಂ ಬಲ್ ವಿದ್ಯ ಪದ್ಯಂಗಳಂ;
ಪಡೆದಿಷ್ಟ ಅಲ್ಲದೆ, ಬಪ್ಪುದೇನ್[4], ನ-
ರ, ನರಾ? ಕೇಳ್ ಬುದ್ಧಿಯಂ ಪೇಳ್ವುದಾ! || 126 ||

1, ರಣರಂಗದೊಳಗೆ ಕಡಿದಾಟ ನಡೆಯಲಾಗಿ ನೃಪರನ್ನು ಬಹಳ ಪ್ರಕಾರವಾಗಿ ಕಾಯುತ್ತಾರೆ; ಕಾದರೂ, ದೇವರು ನೇಮಿಸಿದ್ದು (ಅಥವಾ ರಾಜನು ಪಡೆದ್ದು) ಆಗುವದು; ದೇವರ ಚಿತ್ತದ ಪ್ರಕಾರ ಅವನು ಸಾಯ ಬೇಕಾದರೆ, ಸಾಯುತ್ತಾನೆ. 2, ಕಾದರೂ. 3, ಮಾಡಲೂ, ಮಾಡಿದರೂ. 4, ಬರುವದು.

THE RIGHT THING IN THE RIGHT PLACE

ಎಲ್ಲವೂ ತನ್ನ ಸ್ಥಳದಲ್ಲಿಯೇ ಚಂದವಾಗಿದೆ

ರವಿಯೊಾಕಾಶಕೆ ಭೂಷಣಂ; ರ[1]-
    ಜನಿಗಂ ಚಂದ್ರಂ ಮಹಾ ಭೂಷಣಂ;
ಕುವರಂ ವಂಶಕೆ ಭೂಷಣಂ; ಸ-
    ತಿಗೆ ಪಾತಿ-ವ್ರತ್ಯವೇ ಭೂಷಣಂ; ||
ಹವಿ ಯಜ್ಞೋಳಿಗೆ[2] ಭೂಷಣಂ; ಸ-
    ರಸಿಗೆಂಭೋ-ಜಾತಗಳ್ ಭೂಷಣಂ;
ಕವಿಯೊಾಸ್ಥಾನಕೆ ಭೂಷಣಂ, ನ-
    ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! || 127 ||

1, ರಜನಿಗೆ. 2, ಯಜ್ಞದ ಆಳಿಗೆ.

XIV. ಪಾಠ

A PRAYER IN A TIME OF FAMINE

ಬರಗಾಲದಲ್ಲಿ ಮಾಡಿದ ಪ್ರಾರ್ಥನೆ

(ದಾಸರ ಪದ)

ರಾಗ ಆನಂದಭೈರವಿ; ಝಂಪೆ ತಾಳ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

ಪಲ್ಲ

5	5	3	5 ‖	1ನೇ ಪದ
5	5	1 ‖		2ನೇ ಪದ

ಅನುಪಲ್ಲ

5	5	5	5	1ನೇ ಪದ
5	5	5	5 ‖	2ನೇ ಪದ

ಪದಗಳು

5	5	1	5	1ನೇ ಪದ
5	5	1		2ನೇ ಪದ, 1ನೇ ಗಣಸಾಲು
5	5	5	5	3ನೇ ಪದ
5	5	1		4ನೇ ಪದ, 2ನೇ ಗಣಸಾಲು

ಏನ ಮಾಡಲಿ ನನ್ನ ದೇವ? ಯೀ ಬೆಳೆಯು
ಸೋನೆಯಿಲ್ಲದ[1]ಲುರಿದುದೂ. || ಪಲ್ಲ ||
ನಾನಾ ಪ್ರಕಾರದೊಳು ಹಾನಿಯಾಗ್ಯ ಇದೆಯಿರವು;
ಹೀನರಾದೆವು ನಾವು. ಕರುಣಾಳುವೇ ಕೇಳೂ! || ಅನುಪಲ್ಲ ||

ಮೂಡ ದೆಸೆಯೊಳು ಬಂದುದು[2] ವೃಷ್ಟಿಯೊ
ಬಡಗ ದೆಸೆಯೊಳು ಸುರಿದುದೂ; ||
ಎಡೆ ಬಿಡದೆ ತೆಂಕ ಕಡೆಯಲಿ ಹೊಡೆದ ಮಳೆಯು ತಾ
ನಡುವೆ ಬಿಡುವದು ಯಾತಕೇ? || 128 ||

1, ಉರಿಯಿತು. 2, ಬಂತು.

ಕಟ್ಟೆ[1]-ಕಡು ಮದಗ-ಸಹಿತವೀಯೂರ
ಕಟ್ಟಿನೊಳು ನಾ ಕಾಣೆನೂ; ||
ಕೆಟ್ಟು ಹೋಯಿತು ಮಳೆಯು, ಹೊಟ್ಟೆಯನ್ನ ಉರಿಸುತ್ತ.
ದೃಷ್ಟಿಯಲಿ ನೋಡು ನೀನೂ! || 129 ||

1, ಬಹಳ ದೊಡ್ಡ ಮದಗದ ಸಹಿತದ ಈ ಊರ ಕಟ್ಟಿನೊಳಗೆ (ಮೇರೆಯೊಳಗೆ) ನಾ (ಮಳೆಯನ್ನು) ಕಾಣೆನು.

ಮಳೆಯಿಲ್ಲದಿಳೆಯಾರಿತು; ನಟ್ಟ ಇರ್ದ
ಫಲವೆಲ್ಲ ಬೆಳೆ ಕೆಟ್ಟಿತೂ. ||
ಸ್ಥಳದ ತೆರಿಗೆಯ ಬಿಟ್ಟು, ಕಳುಹುವನೆ[1] ಧೊರೆಯು? ತಾನ್
ಎಳದೆಳದು ಕೊಲ್ವನೆಲ್ಲಾ[2]? || 130 ||

1, (ತೆರಿಗೆಯನ್ನು ಬಿಟ್ಟೆನೆಂಬ ಸುದ್ದಿಯನ್ನು) ಕಳುಹಿಸುವನೇ. 2, ಕೊಲ್ಲುವನು.

ಕಷ್ಟ ಬಂದುದು ಜನರಿಗೆ; ಮಳೆಯೆಕಟ
ಬಿಟ್ಟು ಹೋದುದು ಭೂಮಿಯಾ. ||
ಸುಟ್ಟು ಗ್ರಾಮವು, ತಟನಿಯೆಲ್ಲನಾರಿದ ಮೇಲೆ,
ಮುಟ್ಟಿ ನೋಡು[1]ವರಿಲ್ಲವೋ? ||131||

1, ನೋಡುವವರು.

ಹದಿ[1]ನಾಲ್ಕು ಲೋಕಗಳ್ಗೆ ನೀನ್ ಐಯ್ಯ
ವುದಕವಂ ಕೊಡದಿರುವಿಯೋ? ||
ಬೆದರು[2]ತದೆ ಭೂ-ಲೋಕವು[3]ರಿವದೇ ಜನವೆಲ್ಲ—
ವುದುರದೇತಕ್ಕೆ ಮಳೆಯೂ? ||132||

1, ಅಂದರೆ ಎಲ್ಲಾ. 2, ಬೆದರುತ್ತದೆ. 3, ಉರಿಯುವದೇ.

ಎ[1]ಲ್ಲ ಬೇಡಿಯೆ ಕೊಂಬರು; ತ[2]ದ್-ಹರಕೆ—
ಗೆಲ್ಲಿಯೆಂತರ ಬಾರದೂ. ||
ಹ[3]ಲ್ಲು, ಬಾಯ್ಯ್ ಆರ್ಯ್ ಇರ್ದ ಮಕ್ಕಳಿಂಗ್ ಎಳೆ ನೀರು,
ಬೆಲ್ಲವಾಗ್ಯ ಇ[4]ಹ ಮಳೆಯೆರೇ! ||133||

1, ಎಲ್ಲವಾಗಿ (ಎಲ್ಲ ಪ್ರಕಾರವಾಗಿ) ಬೇಡಿ ಕೊಳ್ಳುತ್ತಲೇ ಇರುವರು. 2, ಆ ಹರಕೆಗೆ ಎಲ್ಲಿಯೂ. 3, ಹಲ್ಲು (ಮತ್ತು) ಬಾಯ್ಯು. 4, ಇರುವ.

ತೋಳ ಚಾಕ್ ಐಯ್ಯ ಬೇಗ! ಕಾಣಲಿ
ಮೂ-ಲೋಕದೊಡೆಯ ನೀನೂ. ||
ಕಾಲ-ಮೇಘವು ನಿನಗೆ ದೂರವಾಗುವದುಂಟೆ
ಯಾಲಸ್ಯ ಮಾಡ ಬೇಡಾ! ||134||

ಬಡ[1]ವರೆಲ್ಲರು ಕೂಡಿಯೆಯೊಪ್ಪು-ಕೈ
ವಿಡಿದು, ಬೇಡಿಯೆ ಕೊಂಡೆವೂ. ||

1, ಬಡವರೆಲ್ಲರು (ಬಡವರಾದ ನಾವೆಲ್ಲರು) ಕೂಡಿ ಕೊಳ್ಳುತ್ತಲೇ ಇದ್ದು, ಒಪ್ಪು-ಕೈ ಹಿಡಿದು (ಅಂದರೆ ಒಡಂಬಟ್ಟು).

ಕಿಡಿಲು ಮಳೆ ಮಿಂಚುಗಳು ಹೊಡ-ಕರಿಸಿ ಬಪ್ಪ ಹಾಗ್,
ಒಡೆಯು, ದಯು ದೋರೆೊ ನೀನೂ! || 135 ||

ಸ್ವಾಮಿ, ನಿನ್ನಯು ನಾಮುವು ಜನರಿಂಗೆ
ಕಾಮಿತಾರ್ಥವನೀವುದೂ. ||
ಪ್ರೇಮುಪಾಗ್ಯ ಇಹ ಮಳೆಯು ಭೂಮಿಯುಲ್ಲ್ಯ[1] ಇಳೆ ಬಿಟ್ಟು,
ನಾಮು-ಗೊಳ್ಳೆ ಐಯಿಲ್ಲಿಯೇ! ||136||

1, ಇಳಿಯುಲಿಕ್ಕೆ.

SEEK FOR GOD'S HELP IN ALL DISTRESS

ಎಲ್ಲಾ ಆಪತ್ತಿನಲ್ಲಿ ದೇವರ ಸಹಾಯವನ್ನು ನೋಡಿಕೋ

(ಸೋಮೇಶ್ವರ ಶತಕ)

ಪ್ರಸಂಗ (4ನೇ ಶ್ಲೋಕ ನೋಡ ಬೇಕು)

ಧರೆ ಬೀಜಂಗಳ ನುಂಗೆ,[1] ಬೇಲಿ
ಹೊಲನೆಲ್ಲಂ[2] ಮೇದರೇ, ಗಂಡ ಹೆಂ-
ಡಿರನೆತ್ಯುಗ್ರದಿ ಶಿಕ್ಷಿಸಲ್, ಪ್ರ-
ಜೆಗಳಂ ಭೂ-ಪಾಲಕಂ ಬಾಧಿಸಲ್, ||
ತರುವೇ ಪಣ್ಗಳ ಮೆಲ್ಲೆ, ಮಾತೆ
ವಿಷಮುಂ ಪೆತ್ತ ಅರ್ಭಕಂಗ್ ಊಡೆ, ದೇ-
ವರ ಬಿಟ್ಟೆ ಆರು ಸುರಕ್ಷಿಪರ್,[3] ನ-
ರ, ನರಾ? ಕೇಳ್ ಬುದ್ಧಿಯುಂ ಪೇಳ್ವುದಾ! || 137 ||

1, ನುಂಗಲಾಗಿ. 2, ಹೊಲವ. 3, ಸುರಕ್ಷಿಸುವರು.

ಗಿಡ ವೃಕ್ಷಂಗಳಿಗಾರು ನೀರ–
    ನೆರೆವರ್? ನಿತ್ಯಂ ಮಹಾ ಬೆಟ್ಟಗಳ್
ಕಡು ಕಾರ್ಪಣ್ಯದಿ ಕೇಳ್ವವೇ?[1] ನೆ–[2]
    ಲ, ಜಲಾಗ್ನೀ, ವಾಯುವಾಕಾಶವನ್ನ್, ||
ಉಡು-ಭಾ-ರಾಶಿಯುಮಾರು ಕಾಂಬ–[3]
    ರು? ಜಗತ್-ಪ್ರೇರೇಪಕಂ ನೀನ್ ಇರಲ್,
ಕೊಡುವರ್, ಕೊಂಬರು[4] ಮರ್ತ್ಯರೇ, ನ–
    ರ, ನರಾ? ಕೇಳ್ ಬುದ್ಧಿಯುಂ ಪೇಳ್ವುದಾ! || 138 ||

1, ಕೇಳುವವೇ? (ಅವು ತಾಳ್ಮೆಯಿಂದಿದ್ದು, ದೇವರ ಜೋಪಾನ ಕಾದು ಕೊಂಡವೆ.) 2, ನೆಲ (ವನ್ನು), ಜಲ (ವನ್ನು), ಅಗ್ನೀ (ಯನ್ನು). 3, ಕಾಣುವರು, ಅಂದರೆ ಜಾಗ್ರತೆ ತಕ್ಕೊಳ್ಳುವರು ಯಾರು? 4, (ಕಸು) ಕೊಳ್ಳುವರು.

BY GOD'S GRACE A MAN MAY BECOME GREAT

ದೇವರೊಲ್ಮೆಯಿಂದ ಒಬ್ಬನು ಒಳ್ಳೇ ಸ್ಥಿತಿವಂತನಾಗ ಬಹುದು

ಉಡು-ರಾಜಂ ಕಳೆಗುಂದಿ, ಪೇರ್ಚ–
    ದಿಹನೇ? ನ್ಯಗ್ರೋಧ-ಬೀಜಂ ಕೆಲಂ
ಶಿಡಿದುಂ, ಪೇರ್ ಮರನಾಗದೇಯೆ–
    ಳೆ ಗರುಂ ಎತ್ತ ಆಗದೇ? ಲೋಕದೊಳ್ ||
ಮಿಡಿ ಪಣ್ಣ್ ಆಗದೆ? ದೇವರೊಲ್ಮೆ–
    ಯಿರಲಿಕ್, ಕಾಲಾನುಕಾಲಕ್ಕೆ ತಾಂ
ಬಡವಂ ಬಲ್ಲಿದನಾಗನೇ, ನ–
    ರ, ನರಾ? ಕೇಳ್ ಬುದ್ಧಿಯುಂ ಪೇಳ್ವುದಾ! || 139 ||

XV. ಪಾಠ

SIGNS OF A GOOD AND OF A BAD WIFE

ಹೆಂಡಿರಲ್ಲಿ ಗುಣವಂತಳ ಮತ್ತು ಗುಣಹೀನಳ ಲಕ್ಷಣಗಳು

(ಜೈಮಿನೀ ಭಾರತ)

ವಾರ್ಧಕ-ಷಟ್ಪದಿ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

5	5	5	5	1ನೇ ಪದ,			
5	5	5	5	2ನೇ ಪದ,			
5	5	5	5	5	5	1	3ನೇ ಪದ, 1ನೇ ಗಣಸಾಲು (ಇದೇ ಎರಡು ಸಾರಿ)

ಮಾವಂಗೆ ಭಾವಂಗೆ ಮೇಣ್ ಅತ್ತೆಗೈದೆ ಸಂ—
ಭಾವಿಸುತ, ಸೇವಿಸುತ, ಕಾಂತನಂ ಸದ್-ವ್ರತದಿ[1]—
ನೋವುತಿಹ ಯುವತಿಗಿಹ-ಲೋಕದೊಳ್ ಸು-ಕೃತ ಫಲಮಾಯತ್ತ
[ಮೆಂತ್[2] ಅಲ್ಲದೇ? ||

ಪಾವಿನಂತ್[3] ಆವಿನಂತ್ ಅಡಿಗಡಿಗೆ ಮೊರದೆದ್ದು,
ಡಾವರಿಸಿ, ಸೇವರಿಸಿ, ಮನೆ-ಗೆಲಸಮಂ ಗೈಯು—
ದಾ ವನಿತೆ ಸಾವ್[4] ಅನಿತೆ; ಲೇಸ್ ಎನಿಸದಿಹಳ್[5] ತತ್-ಪತಿಗೆ, ತದ್-ಗೃಹ-
[ಜನಕ್ಕೇ! || 140 ||

1, ಸದ್-ವ್ರತದಿಂ ಓವುತ್ತ ಇರುವ. 2, ಅಂತೆ. 3, ಹಾವಿನಂತೆ. 4, ಸಾವಿನ ಅನಿತೇ. 5, ಎನ್ನಿಸದೆ ಇರುವಳೆ.

PEOPLE NOT LIKELY TO BE SUCCESSFUL

ಸುಗತಿಯನ್ನು ಹೊಂದದ ಜನರು

ಹೊಸ್ತಿಲಲಿ ಮರ-ಗೊಡ್ಡಿಯೆಂತೆ ಕುಳ್ತು[1] ಇರ್ಪವನ,
ಮಸ್ತಕವನೆರಡು ಕೈಯಿಂ ತುರಿಸಿ ಕೊಂಬುವನ[2], [ಡಿವನಾ[4], ||
ವಿಸ್ತರದ ಜೂಜುಗಳ್ ಗೆಳಸುವನ, ಪಿರಿದುಂಬುವನ[3], ಮದ್ಯಮಂ ಕು

1, ಕೂತು ಇರುವವನ (ಅಂದರೆ ಮೈಗಳ್ಳನ). 2, ಕೊಳ್ಳುವವನ (ಹೇಸಿಕೆಯುಳ್ಳವನ). 3, ಉಣ್ಣುವವನ. 4, ಕುಡಿಯುವವನ.

ಅಸ್ತಮಯದುದಯ-ಕಾಲದಿ ನಿದ್ರೆ ಗೈವನಾ[1]—
ತ್ಮ-ಸ್ತುತಿಯ ಪರ-ನಿಂದೆಯವನ, ಸಾಧಿಸಿ ಪರರ
ವಸ್ತುವಂ ಕಳುವನ, ನಿರುದ್ಯೋಗದವನ ಸಿರಿ ತೊಲಗಿದಲ್ಲದೆ[2] ಮಾ
[ಣ್ಬುದೇ?[3] || 141 ||

1, ಗೈಯುವವನ. 2, ತೊಲಗಿದ್ದು. 3, ಮಾಣುವದೇ.

EVERY MAN HAS TO BEAR HIS OWN BURDEN

ಪ್ರತಿ ಮನುಷ್ಯನು ತನ್ನ ತನ್ನ ಭಾರ ಹೊತ್ತು ಕೊಂಡಿರ ಬೇಕು

(ಸೋಮೇಶ್ವರ-ಶತಕ)

ಪ್ರಸಂಗ (4ನೇ ಶ್ಲೋಕ ನೋಡ ಬೇಕು)

ಮಡಯಂಗ್ ಉತ್ತಮ ವಿದ್ಯ ಬೆಟ್ಟ;
ಕುರುಡಂಗಂ[1] ಮಾರ್ಗವೇ ಬೆಟ್ಟ; ಕೇಳ್,
ಬಡವಂಗ್ ಎಲ್ಲರ ದ್ವೇಷ ಬೆಟ್ಟ;
ಜಡ-ದೇಹಿಂಗೇ[2] ಜರೇ ಬೆಟ್ಟ; ಮುಪ್ಪ ||
ಅಡಸಿದ್ದಾತಗೆ ಬಾಳ್ವೆ ಬೆಟ್ಟ;
ರುಣವೇ ಪೇರ್ ಬೆಟ್ಟ ಮೂ-ಲೋಕದೊಳ್;
ಕಡು ಲೋಭಿಂಗ್ ಅಣು ಬೆಟ್ಟವೇ, ನ—
ರ, ನರಾ! ಕೇಳ್ ಬುದ್ಧಿಯಂ ಪೇಳ್ವುದಾ. || 142 ||

1, ಕುರುಡನಿಗೆ. 2, ದೇಹಿಗೆ.

MAN BECOMES ESTEEMED BY HIS GOOD DEEDS

ತಾನು ಮಾಡುವ ಒಳ್ಳೇ ಕೆಲಸದಿಂದ ಮನುಜನು ಮಾನಸ್ಥನಾಗುತ್ತಾನೆ

ಪ್ರಜೆಯಂ ಪಾಲಿಸ ಬಲ್ಲ[1]ಡಾತ–
ನೆರಸಂ; ಕೈಯಾಶೆಯಂ ಬಿಟ್ಟ ಮಾ–
ನುಜ ಮಂತ್ರೀಶ್ವರ; ತಂದೆ ತಾಯಿ
ಸಲಹಲ್ ಬಲ್ಲಾತನೇ ಧಾರ್ಮಿಕಂ; ||
ಭಜಕಂ, ಸತ್ಯದಿ ಭಕ್ತಿಯುಳ್ಳ[2]–
ಡೆ; ಭಟಂ, ನಿರ್ಭೀತ ತಾನ್ ಆದಡೇ;
ನಿಜ ಮಾತ್ ಆಡುವನಾರ್ಯನೇ, ನ–
ರ, ನರಾ! ಕೇಳ್ ಬುದ್ಧಿಯಂ ಪೇಳ್ವುದಾ! || 143 ||

1, ತಿಳಿದರೆ. 2, ಇದ್ದರೆ.

THERE ARE THINGS WITHOUT ANY PARALLEL

ಅತುಲ್ಯವಾದ ವಸ್ತುಗಳುಂಟು

ಸರಿಯೇ ಸೂರ್ಯಗೆ ಕೋಟಿ ಮಿಂಚು-
ಬುಳುಗಳ್? ನಕ್ಷತ್ರಮೆಷ್ಟ ಆದೊಡಂ,
ದೊರೆಯೇ ಚಂದ್ರಗೆ? ಜೀವ-ರತ್ನ–
ಕೆಣೆಯೇ ಮಿಕ್ಕ ಆದ ಪಾಷಾಣಮಿನ್ನ ||
ಉರಗೇಂದ್ರಂಗೆ ಸಮಾನವೊಳ್ಳೆ–
ಯೆ? ಸು-ಗಂಧಕ್ಕ ಈಡೆ ಬೆಳ್ಳುಳ್ಳಿ? ಸ–
ಕ್ಕರೆಗುಪ್ಪಂ ಸರಿ ಮಾಳ್ಪರೇ[1], ನ–
ರ, ನರಾ? ಕೇಳ್ ಬುದ್ಧಿಯಂ ಪೇಳ್ವುದಾ! || 144 ||

1, ಮಾಡುವರೇ?

IT IS VERY DIFFICULT FOR A BAD MAN TO BECOME CHANGED

ನೀಚನು ಹೊಸ ಅಂದದವನಾಗುವದು ಬಲು ಕಷ್ಟವಾಗಿದೆ

ಹಿಡಿಯುಲ್, ಪಿಂಗದೆ ವತ್ಸರಂ ನ–
    ಡೆಯುದೇ? ದುರ್-ಗಂಧಮೇ, ಘಾಳಿಯೊಳ್
ತಡೆಯುಲ್, ನಾರದೆ? ನಾಯ್ಯ ಬಾಲ-
    ಸೆಡೆಯುಂ ಕಟ್ಟಲ್ಕೆ[1], ಚನ್ನ್ ಅಪ್ಪುದೇ? ||
ಸುಡೆ[2], ಚೇಳಂ ತೆಗೆಯುಲ್ಕೆ, ಸುಮ್ಮ–
    ನಿಹುದೇಯೇನ್ ಅಂದುಮೆಷ್ಟ್[3] ಆದೊಡಂ[4],
ಬಿಡ ತನ್ನ್ ಅಂದವ ನೀಚ ತಾಂ, ನ–
    ರ, ನರಾ! ಕೇಳ್ ಬುದ್ಧಿಯುಂ ಪೇಳ್ವುದಾ! || 145 ||

1, ಕಟ್ಟಲಿಕ್ಕೆ. 2, ಅದು (ಚೇಳು) ಸುಡಲಾಗಿ, ಚೇಳನ್ನು. 3, ಅಂದುಂ, ಅಂದರೂ. 4, ಆದರೂ.

IMPOSSIBILITIES

ಆಗದ ಕಾರ್ಯಗಳು

(ದಾಸರ ಪದ)

ರಾಗ ಭೈರವಿ; ತ್ರಿವಿಡೆ ತಾಳ

ಗಣಗಳ ಮತ್ತು ಗಣಮಾತ್ರೆಗಳ ಕ್ರಮ—

ಪಲ್ಲ

3	4	3	1	3	4	‖			1ನೇ ಪದ
3	4	3	4	3	4	3	1	|	2ನೇ ಪದ
3	4	3	4	3	4	3	4	‖	3ನೇ ಪದ

ಪದಗಳು

3	4	3	4	3	4	3	1	|	1ನೇ ಪದ [ಸಾರಿ)
3	4	3	4	3	4	3	1	‖	2ನೇ ಪದ, 1ನೇ ಗಣಸಾಲು (ಇದೇ ಎರಡು

ಕೇಳೊ, ಕೇಳೋ, ಮನುಜನೆ! ಕೇಳೊ, ಕೇಳೋ! ||
ಕೇಳು, ಲೋಕದ ಬಾಳನೊಗೆತನ
ಕಾಳು ಮಾಡದೆ ಬಿಡುವದೆ?
ನಾಳೆ ಯಮನಾಳುಗಳು ಬೇಗದಿ
ಕಾಲ ಹಿಡಿದೆಳದೊಯ್ಯದಿರುವರೇ? || ಪಲ್ಲ ||

ಕೋತಿ-ಕಂಠಕೆ ರತ್ನ-ಹಾರವ ಕೋತು[1] ಹಾಕಲು ಬಲ್ಲುದೆ?
ಪ್ರೀತಿಯಿಂದಲೆ ಕತ್ತೆ[2]ಘಾಲ್-ಓಗರವನಿಕ್ಕಲು, ರುಚಿಪುದೇ[3]? ||
ಜಾತಿ-ರತ್ನದ ತಕ್ಕ ಮೌಲ್ಯವ ಕುರುಬನಾ ಮನವೆರಿವುದೆ?
ರೀತಿಯಿಂದಲೆ ಪೇಳ್ವ ಧರ್ಮದ ರೀತಿ ಮೂರ್ಖಗೆ ತಿಳಿವು
[ದೇ? || 146 ||

1, ಅಂದರೆ ಪೋಣಿಸಿ (ಕೋಯು ಎಂಬದು ಅದಕ್ಕೆ ಮೂಲ). 2, ಕತ್ತೆಗೆ ಹಾಲ್ ಇತ್ಯಾದಿ. 3, ರುಚಿಸುವದೇ.

ಕುರುಡನಿಗೆ ಕರ್ಪೂರ-ದೀಪವ ಕಾಣಿಸಿದರೆವ ಕಾಣ್ಬನೆ[1]?
ಬರಿದೆ ಕಿವುಡಗೆ ಗೀತ-ವಾದ್ಯವ ಬಾರಿಸಲಿಕೆವ ಕೇಳ್ವನೇ? ||
ಕರದು ಮೋಟನ, ಬರದು ತೋರ್ ಎನೆ[2], ಬರದು ತೋರಿಸ ಬಲ್ಲನೆ?
ಕರುಣೆಯಿಲ್ಲದವಂಗೆ ದುಃಖವನೊರೆಯೆ, ಕರುಣಿಸಲಾಪ[3]
[ನೇ? || 147 ||

1. ಕಾಣುವನೆ. 2, ಎನ್ನಲು. 3, ಆಗುವನೇ, ಬಲ್ಲನೇ.

ನೀಚನಿಗೆ ಸಂಪತ್ತು ಬಂದರೆ, ನೀಚತನವನು ಬಿಡುವನೆ?
ನಾಚಿಕೆಯ ಬಿಟ್ಟ ಇರ್ಪ[1] ಮನುಜನು ಹಿಂದು ಮುಂದನು ನೋ[2]
[ಳ್ಪನೇ? ||
ಬಾಚಿ ಕೊಂಬ್ ಆ ದುರುಳ ರಾಜನು, ಬಡವನೆಂದೊಡೆ, ಬಿಡುವನೆ?
ನೀ ಚತುರನಾಗ್ಯ ಇದ್ದು ದೇವರ ನೆನಸಲೊತನು ಬಿಡುವ
[ನೇ? || 148 ||

1, ಇರುವ. 2, ನೋಡುವನೇ.

XVI. ಪಾಠ

NEAR THE SEA-SHORE

ಸಮುದ್ರ-ವರ್ಣನೆ

(ಚನ್ನಬಸವ ಪುರಾಣ)

ವಾರ್ಧಕ-ಷಟ್ಪದಿ (140ನೇ ಶ್ಲೋಕ ನೋಡ ಬೇಕು)

[1]ಮಕರ-ಕರ್ಕಟ-ಕಮಠ-ಶಾಲೂರ-ಕಿಂಚುಲುಕ-
ನಿಕರದಿಂ, [2]ತಿಮಿ-ತಿಮಿಂಗಿಳ-ಮುಖ್ಯ-ಜಲ-ಚರ-
ಪ್ರಕರದಿಂ, ಮೊಸಳೆ ನೀರ್-ಆನೆ ನೀರ್-ಪಾವು ನೀರ್-ಉಡುಗಳ
[ಸಮೂಹದಿಂದಾ, ||
ಅಕಳಂಕ ರತ್ನಂಗಳೇಳ್ಗೆಯಿಂದ್, [3]ಐತಪ್ಪ
ಸಕಲ ಭಂಗದ ಸುಳಿಯ ಸುವ್ವಳಿಗಳಿಂದ್, ಒಳಗೆ
ತಕಪಕನೆ ಕುದಿವ ವಡಬಾಗ್ನಿಯ ಕಳಾಪದಿಂದ್ ಆ ಕಡಲ್
[ಕಣ್ಗೆ ಎಸೆದುದೂ[4]. || 149 ||

1, ಮಕರ ಇತ್ಯಾದಿಗಳ ನಿಕರದಿಂ. 2, ತಿಮಿ, ತಿಮಿಂಗಿಳ ಮುಂತಾದ ಜಲಚರಗಳ ಪ್ರಕರದಿಂ. 3, ಐತರುವ. 4, ಎಸೆಯಿತು.

ಅಡಿಗಡಿಗೆ [1]ನಡೆವ ಪೇರ್ ವಡಗುಗಳ [2]ಬೆಡಗುಗಳ,
ಘುಡು-ಘುಡಿಸುತೇಳ್ವ ಮತ್ಸ್ಯಾಳಿಗಳ ಕೇಳಿಗಳ,
ಬಿಡ-ಬಿಡದೆ ನಡೆ-ತಪ್ಪ ವೀಚಿಗಳ, ರೋಚಿಗಳೆಗುಳ್ವ ನವ
[ರತ್ನಂಗಳಾ, ||
ಎಡೆಯೆಡೆಯೊಳಡಿಕಿರಿದ ದೋಣಿಗಳ ಶ್ರೇಣಿಗಳ,
ಸಿಡಿ-ಸಿಡಿದುರುಳ್ವ ಜಲ-ಬಿಂದುಗಳ ಪೊಂದುಗಳ
ತಡಿ-ತಡಿ[3]ಗೆಡರ್ವ ಜಲದೊತ್ತುಗಳ, ಮುತ್ತುಗಳ ಪದಪಿನಿಂ ಕಡ
[ಲೆಸೆದುದೂ. || 150 ||

1, ನಡೆಯುವ. 2, ಈ ಶ್ಲೋಕದಲ್ಲಿರುವ “ಬೆಡಗುಗಳ” ಮುಂತಾದ ಎಂಟು ಮುಖ್ಯವಾದ ಸಂಬಂಧವಿಭಕ್ತಿಗಳನ್ನು “ಪದಪಿನಿಂ” ಎಂಬದಕ್ಕೆ ಹಾಕ ಬೇಕು. 3, ಅಡರುವ.

A KING'S PALACE

ಅರಮನೆಯು

ನೀಲ[1] ರನ್ನಂಗಳಿಂ ನೆಲ-ಗಟ್ಟು, ಪಳಕುಗಳ
ಸಾಲ್ ಎಸೆವ ಭಿತ್ತಿಗಳ್; ವಜ್ರದೊಳ್ ಗಂಬಂಗ-
ಳೊಲಲಿತ ಪಚ್ಚೆಗಳ ತೊಲೆ, ರನ್ನ-ಬೋದುಗೆಗಳು ಪ್ರವಾಳಂಗ
[ಳಿಂದಾ; ||
ಮೇಲ್ ಎಸೆವ ಜಂತೆಗಳ್ ತೋರ್ಪ ನವ ಪುಷ್ಯರಾ-
ಗೊಳಿಯಿಂ; ಸವದ ಬಾಗಿಲ್ ಪೊಂ-ಗದಂಗಳಿಂ.
ಪೇಳೆಲೆಚ್ಚರಿಯೊದುದೆರಮನೆಯು[2] ಬಲು ಯುಕ್ತಿಯಿಂದ ನಿರ್ಮಿ
[ತವೊಗ್ಯ ಇರೇ. || 151 ||

1, ನೀಲ ರನ್ನಂಗಳಿಂ ನೆಲಗಟ್ಟೂ ಭಿತ್ತಿಗಳೂ (ನಿರ್ಮಿಸಿದ್ದವು); ವಜ್ರದೊಳ್ ಗಂಬಂಗಳು; ಆಲಲಿತ ಪಚ್ಚೆಗಳಿರುವ ತೊಲೆ (ಮತ್ತು) ರತ್ನವಿರುವ ಬೋದುಗೆಗಳು ಪ್ರವಾಳಂಗಳಿಂದ (ನಿರ್ಮಿಸಿದ್ದವು) ಇತ್ಯಾದಿ. 2, ಪೇಳಲಿಕ್ಕೆ ಅಚ್ಚರಿಯು ಆದುದು (ಆಯಿತು); ಅರಮನೆಯು ಇತ್ಯಾದಿ.

ಎಸೆದವೆಲ್ಲ್ವ ಅಲ್ಲಿ, ವಾಸ್ತು-ಕ್ರಮಂ ಬಿಡಿದು, ರಂ-
ಜಿಸುವ ಮಜ್ಜನ-ಶಾಲೆಯುಂ[1], ಸೂಪ-ಶಾಲೆ, ಶೋ-
ಭಿಸುವ ಭೋಜನ-ಶಾಲೆಯೊಮಂತ್ರ-ಶಾಲೆ, ನರ್ತನ-ಶಾಲೆ,
[ವಸ್ತ್ರ-ಶಾಲೇ, ||
ಮಿಸುಪ ಹಯ-ಶಾಲೆ, ಗಜ-ಶಾಲೆಯೋಲಗ-ಶಾಲೆ,
ಪೊಸ ಗೀತ-ಶಾಲೆಯೊಪ್ಪುವ ಶಯನ-ಶಾಲೆ. ಭಾ-
ವಿಸಲೆರಸು-ಶೀವಿಗುಳ್ಳ್[2] ಅನಿತು ಶಾಲೆಗಳೊಪ್ಪಿದವು ರನ್ನ-ರಂಜ
[ನದೊಳೂ. || 152 ||

1, ಶಾಲೆಯೂ. 2, ಉಳ್ಳ ಅಂದರೆ ಇರುವ (=ಬೇಕಾಗಿರುವ).

ಸಕಲ[1] ಕೋಶದ ಗೃಹಂಗಳ್, ತೈಲ-ಘೃತ-ಗುಡ-
ಪ್ರಕರ-ರಸ-ಭಾಂಡದುಗ್ರಾಣದೊಳ್-ವನಿಗಳುಂ,
ಸುಕರ ಧಾನ್ಯದ ಕಣಜಗಳ್, ಸರ್ವ ವಿನಿಯೋಗದವರಿಪ್ಪ
[ಚಾವಡಿಗಳೂ, ||
ಪ್ರಕಟತರ[2] ತರು ಲತೆಗಳಿಂ ರನ್ನ-ಜಗಲಿ-ರ-
ಮ್ಯಕ ಸರಸಿ-ಕೃತಕಾದ್ರಿಗಳು ತರ-ತರದೊಳಿರಲ್ಕೆ;
ಅಕಳಂಕ, ಕೇಳ್, ಈ ವನಂ ಮೆರೆದುದೆನಿತು[3] ಲೋಕದ ವನ
[ಮಮೊರೆ ಜರೆವುತಾ[4]. || 153 ||

1, ಸಕಲ ಕೋಶವುಳ್ಳ ಗೃಹಂಗಳು, ತೈಲದ (ಮತ್ತು) ಘೃತದ (ಮತ್ತು) ಗುಡದ ಪ್ರಕರವಿರುವ ರಸ-ಭಾಂಡದ ಉಗ್ರಾಣದ ಒಳ್ವನಿಗಳೂ. 2, ಪ್ರಕಟತರವಾದ ತರು (ಮತ್ತು) ಲತೆಗಳಿಂದಲೂ ರನ್ನ-ಜಗಲಿಗಳಿಂದಲೂ ರಮ್ಯಕವಾದ ಸರಸಿಯ (ಸರಸಿಯಲ್ಲಿ) ಕೃತಕ ಅದ್ರಿಗಳು. 3, ಮೆರೆಯಿತು. 4, ವನವನ್ನು ಜರೆಯುತ್ತ.

ತರ-ತರದೊಳೆಸವ[1] ಬಾಗಿಲ ಗೋಪುರಂಗಳೊಳ್
ಕರುವಿಟ್ಟ ಪುತ್ತಳಿಗಳಿಂ, ಭಿತ್ತಿ-ಭಿತ್ತಿಯೊಳ್
ಬರೆದ ನಾನಾ ತೆರದೊಳೆಸವ ಬೊಂಬೆಗಳಿಂದ, ಕಸ್ತೂರಿ ಕುಂಕು
[ಮದೊಳೂ ||
ಪೊರೆದ ಸಾರಣೆಗಳಿಂ, ಕಾರಣೆಗಳಿಂ, ಚಿತ್ರ-
ತರ ಪಟ್ಟೆ ಜಲ್ಲಿ ಕನ್ನಡಿ ಕಲಶ ಮುತ್ತುಗಳ[2]
ಪರಿ-ಪರಿಯ ರನ್ನಗಳ ಕೊಚ್ಚುಗಳ ಮೇಲ್-ಕಟ್ಟಿನಿಂ ಕರಂ
[ಚಲ್ವ ಆದುದೂ[3]. || 154 ||

1, ಎಸೆಯುವ. 2, ಮುತ್ತುಗಳ (ಮತ್ತು) ಪರಿಪರಿಯ ರನ್ನಗಳ ಕೊಚ್ಚುಗಳ ಮೇಲ್ಕಟ್ಟಿನಿಂ. 3, ಆಯಿತು (ಇದಕ್ಕೆ ಅರಮನೆಯೆಂಬದು ಆಖ್ಯೆ).

ಬಾಗಿಲ್ಗಳೆರ್ ಎಸೆದವೆರಮನೆಗೆ, ಹೇಮ-ಮಯ–
ಮಾಗಿ ತೋ[1]ರ್ಪವು; ವಿಶಾಲಂಗಳಿಂದ್ ಅವರೆವರ
ಮೇಗೆ ಮುಗಿಲಂ ಮುಟ್ಟುವುಪ್ಪರಿಗೆಗಳ್ ಮೆರದಪಾರು, ಮಣಿ-
[ಖಚಿತಮಾಗೀ; ||
ಭೂ-ಗಗನ-ಪಾತಾಳದರಮ[2]ನೆಗಳಿದರೊಡನೆ
ತೂಗೆ, ಸರಿ ಬಾರವೆಂದ್ ಎಲ್ಲರುಂ ಪೊಗಳುವೆಂ[3]ತ್.
ಆಗಲಾಗತ ಜನರು ತಮ್ಮ ಗೃಹ-ಸೌಖ್ಯಮಂ ಮರತು ಬಿಟ್ಟ್,
[ಅಲ್ಲ್ಯೆ ಇರ್ದರೂ. || 155 ||

1, ತೋರುವವು. 2, ಅರಮನೆಗಳು, ಇದರೊಡನೆ ತೂಗೆ, ಸರಿ ಇತ್ಯಾದಿ. 3, ಅಂತೆ.

A PUBLIC OFFICE

ಚಾವಡಿ

(ಜೈಮಿನೀ ಭಾರತ)

ಪಳಕುಗಳ ನೆಲೆ-ಕಟ್ಟು, ಮರಕತಂಗಳ ಜಗಲಿ,
[1]ಪೊಳೆವ ನೀಲದ ಭಿತ್ತಿ, ಬಜ್ಜರದ ಕಂಭಮುರೆ
[2]ತೊಳಪ ವೈಡೂರಿಯದ ಮದನಕ್ಕೈ, ಮಿರುಪ ಗೋಮೇಧಿಕದ
[ಬೋದಿಗೆಗಳೂ, ||
ಸಲೆ ಪುಷ್ಯರಾಗದ ತೊಲೆಗಳೆಸೆವ ಮಾಣಿಕಂ–
ಗಳ ಲೋವೆ, ಮುತ್ತುಗಳ ಸೂಸಕಂ, ಮಿನುಗುವ ಪ–
ವಳದ ಪುತ್ಥಳಿ, ಪೊನ್ನ ಪೊದಕೆ ರಂಜಿಸಿತು ಚಾವಡಿಯು ಸೊಂಪ್
[ಬಳ-ಗಡೆಯುಲೀ. || 156 ||

1, ಪೊಳೆಯುವ. 2, ತೊಳಯುವ (ಅಥವಾ ತೊಳಪಿನ.)

ಅಂಚೆಗಳ್, ಕೊಳ-ವಕ್ಕಿಗಳ್, ಜೊನ್ನ-ವಕ್ಕಿಗಳ್,
ತಂಚೆಗಳ್, ಗಿಳಿಗಳೆಣೆ-ವಕ್ಕಿಗಳ್, ಪೞಮೆಗಳ್,
ಕೊಂಚೆಗಳ್, ಕೋಗಿಲೆಗಳೆಲ್ಲ್ಯೆ ಅಲ್ಲಿ ರಂಜಿಸಿತು ಸಜ್-ಜೀವ-
[ಭಾವದಿಂದಾ. ||

ಪಂ[1]ಚಾನನಾದಿ-ಮೃಗ-ತತಿ, ಗಜ-ಹಯಾವಳಿ, ಸು-
ರಂಚಿ-ಸೃಷ್ಟಿಯೊಳೆಲ್ಲ ಮೂ-ಜಗದ ನಾನಾ ಪ್ರ-
ಪಂಚಗಳ ಚಿತ್ರ-ಪತ್ರಂಗಳೆಸೆದಿರ್ದಪಾ ಸಭೆಯೊಳ್, [2]ಮನೋ-ಹರ
[ಮೆನೇ. || 157 ||

1, ಪಂಚ-ಆನನ ಮುಂತಾದ ಮೃಗಗಳ ತತಿ, ಗಜ (ಮತ್ತು) ಹಯಗಳ ಆವಳಿ, ಸುರಂಚಿಯ (ಸುರಚತಕನ, ದೇವರ). 2, ಮನೋಹರವು ಎನ್ನಲಿಕ್ಕೆ (ಎಂಬಂತೆ.)

ನೀಲ-ಮಣಿ-ಕಾಂತಿಗಳ ಕತ್ತಲೆಯು, ಮುತ್ತುಗಳ
ಥಾಳಗಳ ಕೌಮುದಿಯು, ಮಾಣಿಕದ ರಶ್ಮಿಗಳ
ಬಾಲಾತಪದ, ವಿದ್ರುಮ-ಚ್ಛವಿಯ ಸಂಜೆ-ಗೆಂಪಿನ [1]ಪಗಲಿರುಳ್ಗಳಲ್ಲೀ||
ತೇಲದಿಹವಲ್ಲದೆ ದಿವಾ-ರಾತ್ರಿಯುಂಟ್? [2]ಎಂಬ
ಕಾಲ-ಭೇದವನರಿಯ[3]ದಾ ಸಭೆಯು ಮಿಕ್ಕ ಅರಸ-
ರೋಲಗದ ಮಂಟಪದ ಸೌಭಾಗ್ಯಕೆಂಟು ಮಡಿಯಾಗ್ಯ [4]ಇರ್ದುದೆ
[ಚ್ಚರಿಯೆನೇ. || 158 ||

1, ಆ ಬೇರೆ ಬೇರೆ ಬಣ್ಣದಿಂದ ಆಗುವ ಹಗಲಿರುಳುಗಳು ಅಲ್ಲಿ ತೇಲದೆ ಇಹವು (ಇರುವವು), ಅಲ್ಲದೆ (ಅಂದರೆ ಬೇರೆ ವಿಧವಾಗಿ). 2, ಎಂಬಂತೆ. 3, ಅರಿಯದು (ಅರಿಯ ಕೂಡದು); ಆ ಸಭೆಯು ಇತ್ಯಾದಿ. 4, ಇತ್ತು.

ಕಸ್ತುರಿ ಜವಾದಿಗಳ ಸಾರಣೆಯು[1], ಕುಂಕುಮ-ಪ-
ರಿಸ್ತರಣದಗರು-ಚಂದನ-ಧೂಪ-[2]ವಾಸಿತದ
ವಿಸ್ತರದ, ಕರ್ಪೂರ ತೈಲದಿಂದ್ ಅಲ್ಲ್ಯ ಅಲ್ಲಿಗುರಿವ ಬೊಂಬಾಳಂ
[ಗಳಾ, ||

1, ಸಾರಣೆಯು, ಪರಿಸ್ತರಣದ, ವಿಸ್ತರದ, ಬೊಂಬಾಳಂಗಳ, ಜ್ವಾಲೆಗಳ ಎಂಬ ಸಂಬಂಧ ವಿಭಕ್ತಿಗಳನ್ನು ‘ಸಭೆ’ ಎಂಬದಕ್ಕೆ ಹಾಕ ಬೇಕು. 2, ಅಗರಿನಿಂದಲೂ ಚಂದನದಿಂದಲೂ ಧೂಪದಿಂದಲೂ ವಾಸಿತ (ಸ್ಥಿತಿಯ) ವಿಸ್ತರದ, ಮತ್ತು ಇತ್ಯಾದಿ.

ಶಸ್ತ-ರತ್ನ-ಪ್ರದೀಪ-ಜ್ವಾಲೆಗಳ[1] ಸಭೆ ಸ-
ಮಸ್ತ ಸಾಭಾಗ್ಯದಿಂದ್ ಬಪ್ಪುತಿರಲಾಗ ಭೂ-
ಪ-ಸ್ತೋಮ-ಸಹಿತ ಬಂದ್, ಅರ್ಜುನನ ವರ-ಸುತಂ ಕುಳ್ಳಿ[2]ರ್ದನೋ
[ಲಗದೊಳೂ. || 159 ||

1, ಶಸ್ತವಾದ ರತ್ನಗಳ ಹೊಳಪಿನ ಜ್ವಾಲೆಗಳ. 2, ಕೂತನು.

XVII. ಪಾಠ

A FOREST ON FIRE

ಕಾಡು ಸುಟ್ಟದ್ದು

(ಭಾರತ)

ಜಾಮಿನಿ-ಷಟ್ಪದಿ (1ನೇ ಶ್ಲೋಕ ನೋಡ ಬೇಕು)

ತನು-ಗಿಡಿಯು ಧಳ್ಳ-ಉರಿಯು ನಾಲಿಗೆ
ಕೊನೆಗಳಲ್ಲ್ಯ[1] ಆಡಿದವು ಕಡು ಲಾ-
ಗಿನಲಿ; ಲಂಬಿಸಿ ಚುಂಬಿಸಿದುದುರಿ ಲಲಿತ ನಂದನವಾ. | 160 |

1, (ಟೊಂಗೆಗಳ) ಕೊನೆಗಳಲ್ಲಿ.

ಹೊದರಿನಲಿ ಭುಗು-ಭುಗಿಲು ಭುಗಿಲೆಂದ್
ಬ[1]ದದುದುರಿಯೆಂಬರವನೊಣಗಿದ
ಬಿದಿರ ಮೆಳೆಯಲಿ ಧಗ-ಧಗಿಸಿ, ಛಟ-ಛಟ-ಛಟನೆ ಛಟಿಸೀ. ||
ಕದಳಿ-ಖರ್ಜೂರಾದಿ-ತರು-ಜಾ-
ಲದಲಿ ಸಿಮಿ-ಸಿಮಿ ಸಿಮಿಸಿ, ಮಾರುತ-
ವೊ[2]ದಗೆ, ಗಹನೋದರದೊಳಗೆ ಝಾಡಿಸಿತು ಘನ-ವಹ್ನೀ. ||161||

1, ಒದೆಯಿತು ಉರಿಯು ಅಂಬರವನು, ಒಣಗಿದ ಇತ್ಯಾದಿ. 2, ಗಹನ-ಉದರ.

ಜಂಬು-ಚೂತ-ಪಲಾಶ-ವಟ-ದಾ-
ಳಿಂಬ-ಬಿಲ್ವ-ತಮಾಲ-ಚಂಪಕ-
ನಿಂಬ-ಬಕುಳ-ಕಪಿತ್ಥ-ಕುಟಜಮಶೋಕ-ಪುನ್ನಾಗಾ- ||

ತುಂಬುರೆರಳು-ಲವಂಗ-ಪೂಗ-ಕ—
ದಂಬ-ಗುಗ್ಗುಳ-ಸಾಲ-ತಿ[1]ಲಕೋ—
ಡುಂಬರಾದಿ-ದ್ರುಮ-ಕುಲವನಾಲಿಂಗಿಸಿತು ವಹ್ನೀ. || 162 ||

1, ತಿಲಕ-ಉಡುಂಬರ-ಆದಿ.

ಧರಿಣಿ-ಪತಿ, ಕೇಳ್! ಶರಭ, ಮೃಗ-ಪತಿ,
ಕರಿ-ಕಲಭ, ಶಾರ್ದೂಲ, ಸೂಕರ,
ಕರಡಿ, ಕಾಸರ, ಶಲ-ಮೃಗಾ[1]ವನ-ಖಡ್ಗ, ಗೋಮಾಯೂ, ||
ಎರಳೆ, ಮೊಲ, ಸಾರಂಗ, ವಾನರ—
ನೆರು ಕುರಂಗ ಪ್ರ[2]ಮುಖ-ಮೃಗ-ಕುಲ—
ಮೆರುಬಿ ಬಿದ್ದುದು [3]ಧಳ್ಳ-ಉರಿಯು ಬೆಳ್ಳಾರ-ವಲೆಗಳಲೀ. || 163 ||

1, ಶಲ-ಮೃಗ, ಅವನ-ಖಡ್ಗ. 2, ಮುಂತಾದ. 3, ಧಳ್ಳುರಿಯೆಂಬ ಬೆಳ್ಳಾರ-ವಲೆಗಳಲೀ.

ಶುಕ, ಮರಾಳ, ಮಯೂರ, ಟಿಟ್ಟಿಭ,
ಪಿಕ, ಚಕೋರ, ಕಪೋತ, ವಾಯಸ,
ಬಕ, ಪದಾಯುಧ, ಚಕ್ರವಾಕ, ಕಳಿಂಗ, ಕಲವಿಂಕಾ ||
ಕುಕಿಲ ಸಾರಸ, ಕಾಕ-ರಿಪು, ಚಾ—
ತಕ, ಭರದ್ವಾಜಾದಿ-ಪಕ್ಷಿ-
ಪ್ರಕರ ಬಿದ್ದುದು ಬಿಗಿದ ಕೇಸ್ [1]ಉರಿ-ಕಣ್ಣಿ-ವಲೆಗಳಲೀ. ||164||

1, ಉರಿಯೆಂಬ ಕಣ್ಣಿ-ವಲೆಗಳಲೀ.

ಝುಳಕೆ ತಿಳಿ [1]ಗೊಳದುದಕ ಕಾದ್, ಉ—
ಚ್ಛಳಿಸಿದವು; ತನಿ ಗುದಿದು [2]ಮತ್ಸ್ಯ—
ವಳಿಗಳೆಂಬುಜದೆಸಳು ಸೀದವು; ತುಂಬಿಗಳು ಸಹಿತಾ ||

1, ಆ ಕಾಡಿನಲ್ಲಿದ್ದ ಕೊಳದ ಉದಕ. 2, ಮತ್ಸ್ಯಗಳ ಆಳಿಗಳು ತನಿ ಕುದಿದು, ಅಂಬುಜದ ಎಸಳು ಇತ್ಯಾದಿ.

ಹಿಳಿದು ಸಿಡಿದವು; ಚಾರು-ಚಂದ್ರೋ-
ಪಲ-ರಚಿತ-ಸೋಪಾ[1]ನ-ರತುನಾ-
ವಳಿಯ ರಾಶಿಗಳಿದ್ದಲಾದವು ಬಿದ್ದ ಕಿಡಿಗಳಲೀ. || 165 ||

1, ಆ ಕೊಳದ ನೀರಿಗೆ ಹೋಗುವಂಥ ಸೋಪಾನಗಳ.

ಇಟ್ಟಣಿಸಿ, ಛಿಟಿ-ಛಿಟಿಸಿ, ಶಿಖಿ ಪುಟ-
ವಿಟ್ಟು[1]ದೊಣಗಿಲು ಹೊದರಿನಲಿ; ಮಿಗೆ
ತೊಟ್ಟ ಕಬ್ಬು[2]-ಹೊಗೆ-ಝುಗೆಯ ಹೊರಳಿಯ ಕಿಡಿಯ ಗಡಣದಲೀ ||
ಹುಟ್ಟಿದುರಿ ಹೆಂ-ಮರದ ಸುತ್ತಲು
ಕಟ್ಟಿ[3]ತೆಲ್ಲಿಯು ತೊಡಕಿನಲಿ ಭುಗಿ-
ಲಿಟ್ಟು, ಕವಿದುದು ತುದಿಗೆ ಬಹು ಶಾಖೋಪಶಾಖೆಗಳಾ. || 166 ||

1, ಇಟ್ಟಿತು. 2, ಕಪ್ಪು ಹೊಗೆಯ ಝುಗೆಯ ಹೊರಳಿಯ (ಹೊರಳಿಯೊಳಗಿದ್ದ) ಕಿಡಿಯ ಗಡಣದಲಿ ಹುಟ್ಟಿದ ಇತ್ಯಾದಿ. 3, ಕಟ್ಟಿತು; ಅಲ್ಲಿಯ ಇತ್ಯಾದಿ (ಆ ಉರಿ) ಭುಗಿಲಿಟ್ಟು, ಕವಿಯಿತು ಶಾಖೆ-ಉಪಶಾಖೆಗಳ ತುದಿಗೆ.

ಹೊಗೆಯ ಹಬ್ಬುಗೆಯೇರಿಯಾಗಸ-
ವುಗಿ[1]ದುದುರಿ-ನಾಲಿಗೆಯ ಗರಗೊ-
ಟ್ಟಿಗೆಯ ತೊಳಲಿಕೆ ತೆರಳಿಚಿತು ಖಗ-ಜಾತಿ-ಕೋಟಿಗಳಾ. ||
ಹಗಲ ತಡಿತಕೆ ಹೊ[2]ಕ್ಕುದೋ ಕಡೆ-
ಮುಗಿಲ? ಕಾಣೆ[3]ನು ದಿವವನೆತ್ತಣ
ಗಗನ-ಮಣಿ ನಕ್ಷತ್ರ ಚಂದ್ರಮರೆರಸ, ಕೇಳ್! ಎಂದಾ. || 167 ||

1, ಉಗಿಯಿತು. 2, (ಆ ಹೊಗೆಯು) ಹೊಕ್ಕಿತೋ. 3, ಕಾಣೆನು ದಿವವನು; ಎತ್ತಣ (ಯಾವ ಕಡೆಯಿಂದ, ಯಾವ ಪ್ರಕಾರವಾಗಿ) ಗಗನಮಣಿಯನ್ನೂ ನಕ್ಷತ್ರಗಳನ್ನೂ ಚಂದ್ರಮನನ್ನೂ (ಕಂಡೇನು?) ಅರಸ, ಇತ್ಯಾದಿ.

ಛಿಳಿ-ಛಿಳಿಲು-ಛಿಳಿ-ರವದಿ[1], ಘುಳು-ಘುಳು-
ಘುಳು-ಘುಳು-ಧ್ವನಿ-ಮಯದಿ, ಕಪಿಗಳ
ಕಿಳಿ[2]-ಕಿಳಾಯುತ-ರವದಿ, ಮೃಗ-ಸಂಕುಳದ ಕಳ-ಕಳದೀ, ||
ಹಿಳಿದುರಿವ ಹೆಬ್-ಬಿದಿರ ಗಂಟಿನ
ಠಳ-ಠಳತ್ಕಾರದಿ ದಿಶಾ-ಮಂ—
ಡಲದ ಮೂಲೆಗಳೊಡೆದುದ[3]ದ್ಭುತವಾಯ್ತು ವನ-ದಹನಾ. ||168||

1, ರವದಿಂದ (ಅಥವಾ ರವದಲ್ಲಿ). 2, ಕಿಳ-ಕಿಳಾ ಆಯುತ. 3, ಒಡೆಯಿತು.

ಆ ಮಹಾ ವನ-ವಹ್ನಿ ಭೂತ[1]-
ಸ್ತೋಮ-ಸಂಹೃತಿ-ಕರ್ಮ-ಶೌರ್ಯೋ—
ದ್ದಾಮವವಗಾಹಿಸುತ ಬರುತಿರೆ, ಮುಂದೆ ಚೂಣಿಯಲೀ ||
ಧೂಮವೀಳಿದುದು; ಹುತ್ತಿನಲಿ ನಿಸ್[2]-
ಸೀಮ-ಜನಿತ ಜ್ವಾಲೆಗಳ ಝುಳ—
ಪಾ ಮಹೋರಗ[3]-ಚಯವ ಚುಂಬಿಸಿತೆರಸ, ಕೇಳ್! ಎಂದಾ. ||169||

1, ಭೂತಗಳ (ಜೀವಿಗಳ) ಸ್ತೋಮದ ಸಂಹೃತಿಯ ಕರ್ಮಕ್ಕೆ ಶೌರ್ಯದ ಉದ್ದಾಮವನ್ನು ಅವಗಾಹಿಸುತ. 2, ನಿಸ್ಸೀಮವಾಗಿ ಜನಿತ. 3, ಮಹಾ ಉರಗ.

ಹೂಸಿ, ಹುತ್ತಿನ ಮಣ್ಣ ರಂಧ್ರಿಸಿ,
ಕಾಸಿದವು[1] ಫಣಿ-ಕುಲವ; ಮೇಣ್ ಡೊ—
ಳ್ಳಾಸದಲಿ ಡಾವರಿಸಿದವು ಕಿಡಿ[2] ಧೂತ ಧೂಮದಲೀ; ||
ಆಸುರದ ಕಬ್ಬ್-ಹೊಗೆಯು ಕವಚದ
ಕೇಸ್-ಉರಿಗಳೊಳ[3] ಬಿದ್ದುದುರಿ ಹೊರ
ಸೂಸಿ, ಹಿಡಿದವು ಹಾವುಗಳ, ಬಲು ಹೊದರ ಹೊರಳಿಗಳಾ. || 170 ||

1, ಇದಕ್ಕೆ ಜ್ವಾಲೆಗಳೆಂಬುದು ಆಖ್ಯೆ. 2, ಕಿಡಿಗಳು ಧೂತವಾಗುವಂಥ (ಹಾರ್ಯಾಡುವಂಥ). 3, ಉರಿಗಳು (ಹುತ್ತಿನ) ಒಳ ಬಿದ್ದುದು; ಉರಿಯು ಹೊರಗೆ ಸೂಸಿ, (ಓಡಿ ಹೋಗುವಂಥ) ಹಾವುಗಳನ್ನೂ ಹೊದರಿನ ಹೊರಳಿಗಳನ್ನೂ ಹಿಡಿದವು.

ಹೆಡೆಯ ಮಣಿಗಳ ಕಂಡು, ಸೂಸಿದ
ಕಿಡಿಗಳೆಹಹಾಯೆನಲು; ಶಿರಗಳ
ಕೊಡಹಿ, ಮರುಗಿದರೆರಗಿಯುರು, ಮರಿಗಳಿಗೆ ಮೈ ಚಾಚೀ; ||
ಕಡು ಹೊಗೆಯ ಕೇಸ್-ಉರಿಯ ಕಿಡಿಗಳ
ಗಡಣದಲಿ ಕೌರ್ ಎದ್ದು, ಮೈಗಳ
ಕೊಡಹಿ, ಬಿಸು-ಸುಯ್ಯುತ್ತ, ಮುಗ್ಗಿದವೆಹಿಂಗಳೆರಿಯೊಳಗೇ. ||171||

XVIII. ಪಾಠ

A HUNTING PARTY

ಬೇಟೆಯಾಡಿದ್ದು

(ಜೈಮಿನೀ ಭಾರತ)

ವಾರ್ಧಕ-ಷಟ್ಪದಿ (140ನೇ ಶ್ಲೋಕ ನೋಡ ಬೇಕು)

ತಪ್ಪ-ತಪ್ಪಲೊಳೆಲ್ಲಿಗೆಲ್ಲಿ, ಮಂಜುಗಳೆಸೆವ
ಕಪ್ಪ-ಕಪ್ಪನೆಯ ಗಿರಿಗಳ ಪರ್ಬುಗೆಗಳೆಂತೆ,
ಬಪ್ಪ ಬಪ್ಪ ಎಳೆ ನಾಯ್ಗಳಂ ಹಾಸೊಳಾಂತು[1] ಬಂದುದು ಶಬರ-ಸೇ[2]
[ನೆ. ಬಳಿಕಾ ||
ಸೊಪ್ಪು-ಸೊಪ್ಪುಗಳ ಮೊಳೆ-ಮೊಳೆಗಳಂ ಸೋವುತ್ತ,
ತಪ್ಪ-ತಪ್ಪದೆ ಶರ-ಶರಂಗಳಂ, ತೆಗದೆಚ್ಚು[3],
ತೊಪ್ಪ-ತೊಪ್ಪನೆ ಮೃಗ-ಮೃಗಂಗಳಂ ಕೆಡಹಿದರ್ ಕಾನನದೊ
[ಳೇಂ[4] ವೇಳ್ವೆನೂ? ||172||

1, ಆತು (ಆನು ಎಂಬದು ಅದಕ್ಕೆ ಮೂಲ). 2, ಇದು ಆಖ್ಯೆಯಾಗಿದೆ. ಕಪ್ಪು ಮೈಯವರಾದ ಶಬರರು ಬರುವದು ಕಪ್ಪು ಗಿರಿಗಳ ಪರ್ಬುಗೆಗಳಂತೆ ಕಾಣಿಸಿತು. 3, ಎಸೆದು. 4, ಏನು ಹೇಳುವೆನು?

ಚಾಪ ಬಾಣಂಗಳಂ ಪಿಡಿದು ಕೊಂ[1]ಡವರೆಲ್ಲ-
ದಾಪ-ಗಾಪ-ಗಗಳಮತಿಕ್ರಮಿಸುತೋಡುತಿಹ
ಚಾಪಲ-ಭ್ರೂ-ಲತೆಯ ವನ-ಲ[2]ಕ್ಷಣಾನನ-ಪುಳಿಂದಿಯರ್ ತಮ್ಮ
[ತಮ್ಮಾ ||

ಓಪರಂ ಬಳಿ-ವಿಡಿದು, ಬರುತಿರ್ದರಾಗ ಸ-
ಲ್ಲಾಪದಿಂದ್, ಎಸೆವ ಹರಿ ಹರಿಣ ಕರಿ ಚಮ[3]ರಿಗಳ
ರೂಪಂಗಳವಯವದೊಳಾರಾಜಿಸಲ್ಕೆ, ಅವಕೆ ತಾವೆ ದೇಹಂಗ
[ಳಾಗೀ. || 173 ||

1, ಅಂದರೆ ಗಂಡಂದ್ಯರಲ್ಲದೆ, ಆಪ-ಗ ಆಪ-ಗಗಳಂ ಅತಿಕ್ರಮಿಸುತ ಇತ್ಯಾದಿ. 2, ವನ-ಲಕ್ಷ್ಮಣದ ಆನನವುಳ್ಳ. 3, ಚಮರಿಗಳಾದಿ ಮೃಗ-ರೂಪಗಳು (ಆ ಪುಳಿಂದಿಯರ) ಅವಯವದೊಳ್, ಅವಕ್ಕೆ (ಆ ಅವಯುವಗಳಿಗೆ) ತಾವೆ (ಆ ರೂಪಗಳು ತಾವೆ) ದೇಹಗಳಾಗಿ, ಆರಾಜಿಸಲ್ಕೆ (ಆರಾಜಿಸುವಂತೆ).—ಆ ಹೆಂಗಸರು ಚಂದಾದ ಹರಿ ಮುಂತಾದ ಮೃಗಗಳಿಗೆ ಹೋಲಿದರಷ್ಟೇ.

ಸೊಕ್ಕ-ಆನೆಗಳ ಸೊ[1]ಗಡನುರ್ವ ಕತ್ತುರಿಯ ಮೃಗ-
ದಿಕ್ಕೆಗಳನೆಲ್ಲ್ಯ ಅಲ್ಲಿ ಪುಣುಗಿನ ಜವಾದಿಗಳ
ಬೆಕ್ಕುಗಳ ಬಿಡಯುವಾ[2]ಡ್ಯ ಉಂಬ್ ಹೊಲಬನೆರಸುವ ಕಿರಾ[3]ತರಂ
[ಗ-ಚ್ಛವಿಗಳೂ, ||
ಅಕ್ಕರಿಂದ್ ಅವರವರ ತನು-ಪರಿಮಳಂಗಳ್ಗೆ
ತುಕ್ಕುವೆಳೆ ದುಂಬಿಗಳ ಬಳಗಂಗಳೆಂಬ್ ಅಂತೆ,
ಪೊಕ್ಕು ಪೊಕ್ಕ ಅಡವಿಯೊಳ್ ಕಣ್ಗೆ ಕಾಣಿಸುತಿರ್ದವೇನ್ ಎಂಬೆ
[ನೆಚ್ಚರಿಯನೂ? || 174 ||

1, ಸೊಗಡನ್ನೂ - - - ಇಕ್ಕೆಗಳನ್ನೂ - - - ಹೊಲಬನ್ನೂ ಅರಸುವ ಕಿರಾತರ ಛವಿಗಳು - - - - ಕಾಣಿಸುತಿರ್ದವು ಎಂಬಂತೆ ಗ್ರಹಿಸ ಬೇಕು. 2, ಆಡಿ ಕೊಳ್ಳುವ. 3, ಆ ಕಿರಾತರ ಅಂಗಗಳ ಛವಿಗಳು ಕಣ್ಣಿಗೆ ಕಾಣಿಸುತ್ತಿದ್ದವು. ಎಲ್ಲಿಯೆಂದರೆ, ಅವರು ಪೊಕ್ಕು ಪೊಕ್ಕ ಅಡವಿಯೊಳು. ಅವರೊಳಗೆ ಯಾತರಂತೆ ಕಾಣಿಸಿದವಂದರೆ, ಹೇಳಿದಂಥ (ಕಪ್ಪಾದ) ಎಳೆ ದುಂಬಿಗಳ ಬಳಗಗಳಂತೆ.

ಇದೆ ಪಂದಿ ಕೆದರಿದ ನೆಲಂ! ನೋಡ್, ಎಲಿದೆ[1] ದಂತಿ
ಕದಡಿದ ಕೊಳಂ! ತೋಱ್, ಎಲಿದೆ ಪುಲಿಯೊಗಿದ ಮೃಗದ
ಮಿದುಳಿತ್ತಲಿದೆ ಸಿಂಗಮೊರಗಿದಾನೆಯ ತಲೆಯ ಮುತ್ತ್, ಉದುರಿ
[ನೆತ್ತರೊಡನೇ! ||
ಇದೆ ವನ-ಮಹಿಷನೊದ್ದಿ ಕೊಂಡ ಮರ-ದಿಗುಡಿತ್ತ–
ಲಿದೆಕೊ ಸಾರಂಗಮಿಕ್ಕಡಿ ಗೈದ ಪಾವ್! ಇತ್ತ–
ಲಿದೆ ಪುಲ್ಲೆಗಳ ಪಕ್ಕೆ-ಮರಿಗಳಿಕ್ಕೆಗಳೆಂದು, ಪರಿದರ್[2] ಪುಳಿಂದರಂ
[ದೂ. || 175 ||

1, ಎಲೆ, ಇದೆ (ಈ ಸ್ಥಳವೆ). 2, ಪರಿದರು.

ನಡೆ! ಪಜ್ಜೆ ವಿಡಿ! ಪೋಗು! ತಡೆ! ನಿಲ್ಲು! ಜಡಿ! ಬೊಬ್ಬೆ-
ಗೊಡು! ಪೊದರೊಳೊಡಗು! ಕೈ-ಗೆಡದಿರೆಸೆ! ನಿಡು ಸರಳ
ತೊಡು! ಕೆಲಕೆ ಸಿಡಿಯದಿರ್! ಪೊಡೆ! ಸಾರ್ಚು! ತುಡುಕು! ಮೊ
[ಗಸೆಡುಗು! ಮರಕೆಡರೊಡರ್ಚು! ||
ಅಡಗಿ ಪೊಯಿ! ಜಡಿ! ಕೋಲನಿಡು! ಮುಂದು-ಗಡೆ ನಾಯಿ
ವಿಡು! ಕೂಡೆ[1] ಪಡಿ-ತಳಿಸು! ಸೆಡೆಯದಿರ್! ಕೆಡೆಪೆಂಬ[2]
ನುಡಿಗಳೆಡಿಗೆಡಿಗೆ ಕಿವಿಗಿಡಿದುದೆಲ್ಲ[3] ಎಡೆಯೊಳೆಂದ್ ಅಡವಿಯೊಳ್,
[ಕಡು ಪೊಸತೆನೇ. || 176 ||

1, (ಉಳಿದವರ) ಸಂಗಡವೇ. 2, ಕೆಡುಹು! ಎಂಬ. 3, ಇಡಿಯಿತು (ನುಡಿಗಳೆಂಬದು ಆಖ್ಯೆ).

ಉಬ್ಬಿದುರದೇರ[1] ದೆಗದೊಡಲ, ಬಾಗಿದ ಬೆನ್ನ,
ಹಬ್ಬುಗೆಯ ಪಚ್ಚಳದ, ಸೆಳೆದ ಬಾಲದ ಕೊನೆಯ,
ಕೊಬ್ಬಿದ ಕೊರಳ, ಸಂಣ ಜಂಘೆಗಳ, ಕೊಂಕ್ ಉಗುರ, ಮಡಿ-ಗಿ
[ವಿಯ, ಕಿಡಿ-ಗಣ್ಗಳಾ, ||

1, ಉಬ್ಬಿದ ಉರದ, ಏರ (ಏರನ್ನು).

ಹೆಬ್ಬೆಲ್ಲ, ವಿಡು-ವಾಯ್ವ್ಯ, ಜೋಲ್ವ ಕೆಂ-ನಾಲಿಗೆಯ
ಗಬ್ಬಿ[1]ನಾಯ್ಗಳ ಹಾಸನುಗಿದು, [2]ಬಿಡೆ; ಪಂದಿಗಳ–
ನೆಬ್ಬರಿಸಿ, [3]ತುಡುಕಿದವು; ಕೇಸರಿಗೆ[4]ಡರ್ದು, ಮೇಲ್ ವಾಯ್ದು,
[ಪುಲಿಯಂ ಕೊಂದವೂ. || 177 ||

1, ನಾಯಿಗಳು. 2, ಬಿಡಲಾಗಿ (ಬೇಟೆಗಾರರೆಂಬದು ಆಖ್ಯೆ). 3, ಇದಕ್ಕೆ ನಾಯಿಗಳೆಂಬದು ಆಖ್ಯೆ. 4, ಅಡರಿ.

ಬಿಡದೆ ಕುತ್ತುಗರ್ಗಳಂ [1]ಸೋವಿದರ್; ತೀವಿದರ್
ಗಿಡಗಳ; ಪೊದರ್ಗಳಿಂದ್ ಎಬ್ಬಿಸಿದರುಬ್ಬಿಸಿದ–
ರೊಡನೊಡನೆ ಖಗ-ಮೃಗ-ವ್ರಾತಮಂ; ಪಾತಮಂ ಮಾಡಿದರ್ ಕೂ
[ಡೆ ಕೂಡೇ ||
ಸಿಡಿ-ಗುಂಡು ಬಡಿ-ಗೋಲ್ಗಳುರುಬೆಯಿಂದ್, ಇರುಬೆಯಿಂದ್
ಇಡುವ ರಣೆ ನೇಣ್ ಉರುಲ್-ಗೊಲೆಗಳಿಂ, ಬಲೆಗಳಿಂ
[2]ಜಡಿದಾರ್ದು ಬೊಬ್ಬೆಯಬ್ಬರದಿಂದ, ಶರದಿಂದ ಕಾಡೊಳ್ ಕಿರಾತ
[ರೆಂದೂ. || 178 ||

1, ಸೋವಿದರು (ಈ ಮುಂತಾದ ಕ್ರಿಯಾಪದಗಳಿಗೆ ಕಿರಾತರೆಂಬದು ಆಖ್ಯೆ). 2, ಜಡಿದು, ಆರ್ದು (ಆರಿ, ಸಾರಿ, ಕೂಗಿ).

ಕುತ್ತುರೊಳ್ ಪುದುಗಿರ್ದ ಪುಲಿ ಪೊರಮಡಲ್; ಕಂಡು,
ಕಿತ್ತು ಕೂರ್-ಗಣೆಗಳಂ, ಪೂಡಿ, ಲುಬ್ಧಕರೀರ್ವ–
ರಿತ್ತ ಅತ್ತಲಿರ್ದು, ಸರಿಸದೊಳೆಚ್ಚ[1]ಡೆದರೊಡಲನುಚ್ಚಳಿಸಿದೆಂಬು
[ತಾಗೀ, ||
ಇತ್ತಂ[2]ಡಮುಂ ವ್ಯಾಘ್ರದೊಡನಿಳೆಗು[3]ರುಳ್ದರುದ್–
ವೃತ್ತದಿಂದ್ ಉಭಯ ಜನಮೇಕಾರ್ಥ ಕೆ[4]ಳಸಿದೊಡೆ,
ಮತ್ತೆ ಲೇಸ್ [5]ಆದಪುದೆ? ಜಗದೊಳೇ ಮೂವರುಪಹತಿ ಚಿತ್ರ
[ಮೆಲ್ಲ ಎಂದನೂ. || 179 ||

1, ಎಸೆದರೆ, (ಎಸೆದಾಗ); ಹುಲಿಯು ಇತ್ತೂ ಅತ್ತೂ ಇದ್ದ ಲುಬ್ಧಕರಿಬ್ಬರೆಂಬದು ಇದಕ್ಕೆ ಆಖ್ಯೆ. 2, ಇತ್ತಂಡವೂ. 3, ಉರುಳಿದರು (ಆ ಲುಬ್ಧಕರು). 4, ಕೆಳಸಿದರೆ. 5, ಆಗುವದೆ?

ನಳಿ ತೋಳ, ಯುವ-ಸೊಕ್ಕ, ಕಾಡ್-ಹಂದಿ-ದುಪ್ಪ-ಪರಿ—
ಮಳ-ಗಾತ್ರದೆಳೆ-ಕುಂತಳದ, ನೌಲ್-ನಡೆಯ ಶಬರಿ
ಹಳುವದೊಳ್ ತನ್ನ ಕಾಂತನ ಬಳಿಯ ಬರಲೊಂದು ಸಿಂಗಮೆತ್ತಿ
[ಭರದೊಳೆದ್ದು, ||
ಬಳಿಕವಳ ಹೊಂಚುತಲೆ ನೋಡಿ, ಕೆಂ-ನಯನಮಂ
ತಳೆದು, ಮತ್ತ್ ಆಕೆಯ ಸು-ವೀರ್ಯಮಂ ಲಕ್ಷಿಸದೆ,
ಮುಳಿದೆಡರಲಾ ಕೇಸರಿಯನ್ನೆಚ್ಚು, ಕೆಡಹಿದಂ[1] ಕ್ರೋಧದಿಂದ್
[ಆ ವ್ಯಾಧನೂ. || 180 ||

1, ಕೆಡಹಿದನು.

ಮರಿಗೆ ಮರೆಯಾಗಿ ಮೈಯೊಡ್ಡಿ, ಮಡಿದವು ಕೆಲವು[1];
ಬರಿಯ ಬಿಲ್ಲ್-ದನಿಗೆ, ರಮಣನ[2] ತಾಗಿ, ತಾಂ[3] ಬೆದರಿ,
ನೆರೆ ಮೋಹದಿಂ[4] ಪೊರಳ್ದವು ಕೆಲವು; ರಾಪು-ಗೊಂಡ್ ಓಡಿದಿನೆಯ
[ನನೆಗೆಲ್ದು[5], ||
ಮರುಗಿ, ದುಃಖಾಸ್ತ್ರ ತಿವಿದಿಳೆಗೆ ಬಿದ್ದವು ಕೆಲವು;
ಬಿರು ಸರಳ್ ತಮ್ಮ ಕೂಪರರನ್ನು ದಾಟಿ ಬರೆ,
ಗುರಿಯಾಗಿ ತೊರದವೆಸುವಂ ಕೆಲವು ಪುಲ್ಲೆಗಳ್; ಬೇಡರೆಸೆವೆಸು
[ಗೆಯಿಂದಾ. || 181 ||

1, ಕೆಲ್ಲವು ಪುಲ್ಲೆಗಳು. 2, ರಮಣನ ಬಳಿಯಲ್ಲಿದ್ದು. 3, ತಾವು. 4, (ತಮ್ಮ ರಮಣನು ಮೃತವಾದಾನೆಂಬ) ಮೋಹದಿಂದ (ನೊಂದು). 5, ಅಗಲಿ.

ಪುಲಿ ಕರಡಿ ಕರಿ ಸಿಂಗ ಸಾರಂಗ-ಮರಿ ಪಂದಿ
ಮೊಲ ಹುಲ್ಲೆ ಕಾಡ್-ಎಮ್ಮೆ ಚಮರಿಗಳ್ ಮೊದಲಾದ
ಪಲವು ಮೃಗ-ಜಾತಿಯಂ, ಕ್ರೌಂಚ ಶಿಖಿ ತಿತ್ತಿರಿ ಕಪೋತಾದಿ ಪ
[ಕ್ಷಿಗಳನೂ, | 182 |

ಕರಿಯ ಕುಂಭ-ಸ್ಥಳದ ಮುಕ್ತಾಫಲಂಗಳಂ,
ಬರುಹಿಗಳ ಗರಿಗಳಂ, ಚಮರಿ-ವಾಲಂಗಳಂ,
ದ್ವಿರದ-ನವ-ದಂತಾಂಕುರಂಗಳಂ, ಕತ್ತುರಿಯ ಕೋಶಗಳನೆಡ
[ವಿಯೊಳಗೇ ||
ಇರದೆತ್ತಿ ಕೊಂಡು ಬರುತಿರ್ದಪರು[1] ಶಬರರು,
ಸ್ವರ ಗೈದು, ಕಾಲ್ ದಣಿದು, ಮೈ ಬೆವರಿ, ಬಾಯಿಯಾರ್ದ್ರ್ಯ,
ಉರ ಬೆಂದು; ಬೊಗಳುತಿಹ, ತೇಗುತಿಹ, ಮೂಸುತಿಹ ನಾಯಿಗಳ
[ಮೇಳದೊಡನೇ. || 183 ||

1, ಇರುವರು (115ನೇ ಶ್ಲೋಕದಲ್ಲಿ 'ಪೋದಪ್ಪುದ' ಎಂಬದನ್ನೂ 212ನೇದರಲ್ಲಿ 'ಇರ್ದಪರೆ' ಎಂಬದನ್ನೂ 228ನೇದರಲ್ಲಿ 'ಬಂದಪುದು' ಎಂಬದನ್ನೂ ಸರಿ ನೋಡಿರಿ).

XIX. ಪಾಠ

A BATTLE

ಯುದ್ಧವು

ಧರಣಿ-ಮಂಡಲವಂ[1] ಚತುರ್-ಬಲಂ[2], ಪಕ್ಷಿಗಳ
ಸರಣಿ-ಮಂಡಲವಂ ಧ್ವಜ ಚ್ಛತ್ರ ಚಾಮರಂ,
ತರಣಿ-ಮಂಡಲವಂ ಚಮೂ[3]-ಪದ-ಹತೋದ್ಧೂತ-ರೇಣು-ವ್ರಜಂ
[ಮುಸುಕಲೂ;- | 184 |

1, ಮಂಡಲವನ್ನು. 2, ಬಲವು. 3, ಚಮೂ-ಪದದಿಂದ ಹತವಾಗಿ ಉದ್ಧೂತ ರೇಣುವಿನ ವ್ರಜವು.

ಅರ್ಬುದ ಗಜಂ, ಪತ್ತು ಕೋಟಿ ಸು-ವರೂಥಮೆರ–
ಡೆರ್ಬುದ ತುರಂಗಮಂ ಕೂಡಿದ ಪದಾತಿ-ಮೂರ್-
ಅರ್ಬುದಂ ಜೋಡಿಸಿದುದಾ[1]ಹವ[2]-ಪ್ರೌಢರ್ ಸುಬುದ್ಧಿ ಮೊದಲಾದ
[ಭಟರೂ; ||

1, ಜೋಡಿಸಿತು, ಜೋಡಣೆ ಆಯಿತು; ಇದಕ್ಕೆ ಗಜಂ, ಸುವರೂಥಂ, ಪದಾತಿಯ ಮೂರು ಅರ್ಬುದಂ ಎಂಬದು ಆಖ್ಯೆ. 2, ಆಹವದಲ್ಲಿ ಪ್ರೌಢರು (ಯಾರಂದರೆ) ಸುಬುದ್ಧಿ ಮುಂತಾದ ಭಟರು.

ಸರ್ಬ ಸನ್ನಾಹದಿಂದ್ ಬಿತ್ತರಿಸಿತೆತ್ತಣ ಚ-
ತುರ್-ಬಲಮೊ? ಮಿಡಿತೆಗಳ ವಿಸ್ತಾರ ಮೇಘಮೆನೆ,
ಪರ್ಬಿದುದು ನೆಲದೆಗೆಲಕೆರ್ಜುನನ ವರ-ಸುತಂ ತರಿಸಿದಂ ಮಣಿ-ರ
[ಥವನೂ. || 185 ||

1, ಅಗಲಕ್ಕೆ.

ಚಿತ್ರ-ಶೋಭಿತಮಾದ, ಮಣಿ-ಮಯ ವರೂಥಮಂ
ಚಿತ್ರಾಂಗದೆಯ ತನೂ-ಭವನೆಡರ್ದಂ. ಕೂಡೆ
ಚಿತ್ರಮಾದುದು ಸಮರಮೆರಡು ಧಟ್ಟನ ಚೂಣಿ ಸಂದಣಿಸಿತುರವ
[ಣಿಯೊಳೂ. ||
ಮಿತ್ರ-ಮಂಡಲವನೊಡದೈದುಮೆತ್ತಿ ಭರದಿಂದ್ ಅ-
ಮಿತ್ರ-ಭಟರಂ[1] ತಾಗಿದರ್ ಕಡು ಗಲಿಗಳೆಗ
[2]ಮಿತ್ರ-ಭಾವದ ನೇಹದಿಂದ ಮರುಗದೆ ಮಾಣದಂಭೋ-ರುಹಂಗ
[ಳೆನೆಲೂ[3]. || 186 ||

1, ಭಟರನ್ನು. 2, ಅಂಭೋ-ರುಹಳು (ಮಿತ್ರ-ಮಂಡಲದ ಕಷ್ಟವನ್ನು ನೋಡಿ, ತಾವು ಸೂರ್ಯನ ಮೇಲೆ ಪಡುವ) ಮಿತ್ರ-ಭಾವವುಳ್ಳ ನೇಹದಿಂದ ಇತ್ಯಾದಿ. 3, ಎಂಬಂತೆ.

ತೇರ ಮಂಗಡದ ಜರ್ಝಾ-ರವಂ, ಗಜದ ಘಂ-
ಟಾ-ರವಂ, ಹಯದ ಹೇಷಾ-ರವಂ, ನಡೆವ ಸೇ-
ನಾ-ರವಂ, ವಾದ್ಯದ ಮಹಾ ರವಂ, ಬಹಳ ಕಹಳಾ-ರವಂ, ಸಂಗ
[ಡಿಸಿದಾ ||
ಜ್ಯಾ-ರವಂ, ಭಟರ ಬಾಹಾ-ರವಂ, ದಳದ ಬಂ-
ಭಾ-ರವಂ, ರಣ-ಕಿಲಕಿಲಾ-ರವಂ, ಪಟಹ-ಢ-
ಕ್ಕಾ-ರವಂ, ಪುದಿದ ನಾನಾ ರವಂ ಕಿವಿಗೆತ್ತಿ ಕಠೋರಮಂ[1] ತೀವಿ
[ತೆಂದೂ. || 187 ||

1, ಕಠೋರವಾಗಿ (ಅಥವಾ ಕಠೋರವನ್ನು=ಭಯಂಕರವಾದದ್ದನ್ನು.)

ಸಿಂಧ ಸೀಗುರಿ ಛತ್ರ ಚಾಮರ ಪತಾಕೆಗಳ್
ಸಂದಣಿಸಿ, ಗಗನಮಂ ಮುಸುಕಲ್ಕೆ, ತವೆ ಮೂಡಿ–
ದಂಧಕಾರಂಗಳಂ ಕೆಡಸಿದವು ರತ್ನಾಭರಣ-ಕಾಂತಿಗಳ್ ಭೂ-ಪರಾ[1]; ||
ಕೆಂ-ಧೂಳ್ ಅಡರ್ದು, ನಭಮಂ ಮುಸುಕಿತಾಗೆ[2] ವರ-
ಸಿಂಧು-ಪ್ರವಾಹಮುತ್ತುಂಗ-ಶೋಣಾಚಲದ
ಬಂಧುರ-ತಟ-ಪ್ರದೇಶದೊಳೊಪ್ಪು-ವಜ್ಜರದ ನಿಧಿಯೆಂಬ ತೆರನಾಗ
[ಲೂ[3]. || 188 ||

1, ಭೂಪರ ರತ್ನಾಭರಣಗಳ ಕಾಂತಿಗಳು. 2, ಆಗ (ಆ ರತ್ನಾಭರಣಗಳ ಮತ್ತು ಅಡರಿದ ಕೆಂ-ಧೂಳಿನ ನಾನಾ ಕಾಂತಿಗಳ ದೆಸೆಯಿಂದ ಹ್ಯಾಗಾಯಿತೆಂದರೆ) ಗಂಗೆಯು ಪ್ರವಾಹವು ಉತ್ತುಂಗವಾದ ಶೋಣ-ಅಚಲವೆಂಬ ತನ್ನ ಬಂಧುರವಾದ ತಟದ ಪ್ರದೇಶದೊಳಗೆ (ನಾನಾ ಬಣ್ಣವುಳ್ಳ) ಒಪ್ಪು-ವಜ್ರದ ನಿಧಿಯಂತಿರುವ ತರವಾಯಿತು. 3, ಆಗುವಂತೆ.

ಚೂಣಿಯೊಳ್ ಬೆರಸಿ, ಪೊಯ್ದ್ ಆಡಿದರ್[1] ತಮ-ತಮಗೆ;
ಬಾಣ ತೋಮರ ಪರಶು ಚಕ್ರಾಸಿ[2] ಮುದ್ಗರ ಕೃ–
ಪಾಣ ಡೊಂಕಣಿ ಕುಂತ ಸುರಗಿ ಶಲ್ಯಹ ಶಕ್ತಿ ಮೊದಲಾದ ಕೈದು
[ಗಳೊಳೂ, ||
ಕೇಣಮಿಲ್ಲದೆ, ಚಾರಿ[3]-ಚಳಕ-ಚಾಳೆಯು, ಚದುರ್-
ಪಾಣಿ-ಲಾಘವ, ಪಂಥ-ಪಾಡುಗಳನರಿದು, ಬಿಂ–
ನಾಣದಿಂ ಘಾಯ ಗಾಣಿಸಿದರೆತಿ ಬಲರೆಲ್ಲಿ ನಾನಾ ಪ್ರಹಾರದಿಂ
[ದಾ. || 189 ||

1, ಇದಕ್ಕೆ ಮುಂದಗಡೆ ಇರುವ ಬಲರು (ಬಲವುಳ್ಳವರು) ಎಂಬದು ಆಖ್ಯೆ. 2, ಚಕ್ರ ಅಸಿ. 3, ಚಾರಿಯ ಚಳಕವಾದ ಚಾಳೆಯ (ನ್ನು) ಇತ್ಯಾದಿ ಅರಿದು (ತಿಳಿದು).—'ಕೈದುಗಳೊಳು' ಎಂಬದನ್ನು 'ಪೊಯಿದಾಡಿದರು ತಮ ತಮಗೆ' ಎಂಬದಕ್ಕೆ ಹಾಕ ಬೇಕೋ? ಕೈದುಗಳೊಳು, ಕೇಣವಿಲ್ಲದೆ, ಘಾಯ ಗಾಣಿಸಿದರು' ಎಂತ ಹೇಳ ಬೇಕೋ? ಪೂರ್ಣ ನಿಶ್ಚಯವಿಲ್ಲ. ನಮ್ಮ ವಿರಾಮ ಚಿನ್ಹೆಯ ಪ್ರಕಾರ (,) 'ಕೈದುಗಳೊಳು' ಎಂಬದು ಘಾಯ ಗಾಣಿಸಿದರೆಂಬದಕ್ಕೆ ಹೋಯಿತು.

ತೂೞಿಸಿದರಾನೆಯಂ ಜೋಧರುರವಣಿಸಿ; ದು–
ವ್ವಾೞಿಸಿದರುಬ್ಬ್ಯ ಎದ್ದು, ರಾವುತರ್ ತೇಜಿಯಂ;
ಕೇೞಿಸಿದರಾಹವದ ನಾಟ್ಯಮಂ ರಂಗದೊಳ್ ಚಟುಳ-ಪಟು-ಭಟ
[ರಥಿಕರೂ; ||
ಏೞಿಸಿದರಾಳ್ತನದ ಪಂಥಮಂ ಕಾಲಿವರ್;
ಬೀೞಿಸಿದರಹಿತರಂ; ಪೊಯ್ದ್[1] ಆಡಿ, ತಲೆಯಂ ನಿ–
ವಾೞಿಸಿದರಾಳ್ದಂಗೆ, ಕೈದುಗಳ ಹೋರಟೆಯ ಖಣಿ-ಕಟಿಲ-ರಭಸದಿಂ
[ದಾ. || 190 ||

1, (ತಲೆಗಳನ್ನು) ಹೊಯ್ದಾಡುತ್ತಾ ಇದ್ದು, (ಹೊಯ್ದು ಕತ್ತರಿಸಿದ) ತಲೆಯನ್ನು.

ಕಾರ್-ಮುಗಿಲ ಶಿಡಿಲ ರವದಂದಮಾಗ್ಯೆ [1] ಇರೆ ಕರದ
ಕಾರ್ಮುಕ-ಧ್ವನಿ, ಮಿಂಚಿನಂತೆ ಪೊಳ-ಪೊಳವ ಪೊಂ-
ದೇರ್ ಮೆರೆಯೆ,—ಶರ-ವರುಷಮಂ ಕರವುತಿರ್ದರಾ[2] ವುಭಯ-ದಳ-
[ವೀರ-ಭಟರೂ. || 191 ||

1, ಇರಲಾಗಿ. 2, ಕರಸುತ್ತ ಇದ್ದರು.

SCENES ON A BATTLE FIELD

ರಣಾಂಕಣದಲ್ಲಿ ತೋರಿದ್ದು

(ಚನ್ನಬಸವ ಪುರಾಣ)

ನಿಡು ಸರಳ ಸಾರದಿಂ ಘೋರದಿಂ ಭಾರದಿಂದ್
ಅಡಗೆಡದ ಸೇನೆಯಿಂದ್ ಆನೆಯಿಂ, ಬೇನೆಯಿಂದ್
ಬಡನೆ ಧರೆಗುರ್ಳ್ವರಿಂ[4] ನರ್ಳ್ವರಿಂ, ತೆರ್ಳ್ವರಿಂ ತಮ-ತಮಗೆ ಕಂಡ
[ಕಡೆಗೇ, ||

1, ಉರುಳುವರಿಂದ.

ಕಡಿವಡ ಕೊರಳಿಂದ ಕರುಳಿಂದ, ಮರುಳಿಂದ
ಪೊಡೆಯೊಡದ ಶೂರರಿಂ, ಮಾರರಿಂ, ಹಾರರಿಂ,
ಮಡಲಿರಿದ ಭೀತಿಯಿಂ ಘಾತಿಯಿಂ, ಹೇತಿಯಿಂದ್ ಆ ರಣಾಂಗಣಮೆ[1]
[ಸದುದೂ. || 192 ||

1, ರಣ-ಅಂಗಣಂ.

ಕಡಿದ ತಲೆ-ಶೀಳ್ಗಳಿಂ ತೋಳ್ಗಳಿಂ, ಬಾಳ್ಗಳಿಂದ್
ಎಡೆಗೆಡೆದ ರುಂಡದಿಂ ಮುಂಡದಿಂ ಖಂಡದಿಂದ್,
ಇಡಿದ ಕರ-ಜಾತದಿಂ, ನಾತದಿಂ, ಭೂತದಿಂ, ಪ್ರೇತದಿಂ, ಯಾತುವಿಂ
[ದಾ, ||
ಉಡಿದ ಗಜ-ರಾಜಿಯಿಂದ್, ಆಜಿಯಿಂ, ವಾಜಿಯಿಂದ್,
ಎಡೆ ವಿಡಿದ ಘೂಕದಿಂ ಕಾಕದಿಂ, ಶೋಕದಿಂ,
ಸಡಿಲೊ[1] ರಣ-ಚೋರರಿಂ ವೀರರಿಂ ಧೀರದಿಂದ್ ಆ ರಣಾಂಗಣಮೆಸ
[ದುದೂ. || 193 ||

1, ಸಡಿಲುವ ಚೋರರು ಭಯದಲ್ಲಿ ಸಡ್ಲಾದರು, ವೀರರೂ ಧೀರರೂ ಧೈರ್ಯದಲ್ಲಿ ಸಡ್ಲಾದರು.

ಕೆಟ್ಟು ಓಡಿದರ್ ಕೆಲ[1]-ಕೆಲರ್, ಗಜ ರಥಂಗಳಂ
ಬಿಟ್ಟು ಓಡಿದರ್ ಕೆಲ-ಕೆಲರ್, ಕೈದುಗಳನೆವನಿ-
ಗಿಟ್ಟು ಓಡಿದರ್ ಕೆಲ-ಕೆಲರ್, ಜೀವದಾಶೆಯಿಂ ಹೆಣ-ರಾಶಿ-ರಾಶಿಗಳನೂ||
ಮೆಟ್ಟ್ಯ ಓಡಿದರ್ ಕೆಲ-ಕೆಲರ್, ಬಿರುದನಾಗಲ್ ಬಿ-
ಸುಟ್ಟು ಓಡಿದರ್ ಕೆಲ-ಕೆಲರ್, ಬೆದರಿ ರಣಕೆ ಬೆಂ-
ಗೊಟ್ಟು ಓಡಿದರ್ ಕೆಲ-ಕೆಲರ್, ಶತ್ರು-ಕಣೆ ತಾಗದೆಳದ[2] ಭಟ-ವೀರರೊ
[ಳಗೇ. || 194 ||

1, ಕೆಲವರು ಕೆಲವರು. 2, ತಾಗದೆ.

XX. ಪಾಠ

ENCAMPMENT OF AN ARMY

ಪಾಳೆಯವು

(ಚನ್ನಬಸವ ಪುರಾಣ)

ಮೇಲೆ ಮೇಲ್ ಐತಂದು, ಕೋಟೆಯಂ ಪತ್ತಿ, ಹೊರ
ಪಾಳೆಯವನೀಕ್ಷಿಸುತ್ತ್ ಇಪ್ಪ[1]ರ್ಗೆ ಕಾಣಿಸಿತು,
ಪೇಳಲೇನ್ ಅಕ್ಕ[2]ರಿಯನಿಡಿಕಿರಿದ ಬಣ್ಣ-ಗೂಡಾರಗಳ ಸಾಲ್ಗಳಿಂ
[ದಾ. | 195 |

1, ಇರುಪವರಿಗೆ. 2, ಅಚ್ಚರಿಯನ್ನು? ಇಡಿಕಿರಿದ ಇತ್ಯಾದಿ.

ಪೊಳವ ಗೂಡಾರಗಳ ಬುದ್ಬುದದ, ಪೋಪ ಬ-
ಪ್ಪ ಲಘು ವಾಜಿಗಳ ತೆರೆಗಳ, ಕರಿಯ ಗಿರಿಯ, ಜ[1]ನ-
ಜಲಚರದ, ಮಿನಗುವಾಯುಧದ ನೊರೆಗಳ, ವಾದ್ಯದಾರ್ಭಟೆಯ
[ಪೇರ್ ಮೊರಹಿನಾ, ||
ಚ[2]ಲಿಪ ಕೇತನ-ತತಿಯ ಸುಳಿಯ, ಸಬಳದ ಸಾಲ
ತೊಳ-ತೊಳಪ ಪವಳ-ವ[3]ಳ್ಳಿಗಳ[4]ಭಯ-ರಸ-ಸಮು-
ನ್ಮಿಳಿತ ವರ-ರಾಜ-ಸೇನಾ-ಸಮುದ್ರವನಾಗ ಪುರ-ಜನಂ ನಿಟ್ಟಿಸಿದು
[ದೂ. || 196 ||

1, ಜನವೆಂಬ ಜಲ-ಚರದ. 2, ಚಲಿಸುವ. 3, ಪವಳ-ವಳ್ಳಿಗಳ ಎಂಬ ಸಂಬಂಧವಿಭಕ್ತಿಯನ್ನು ಬುದ್ಬುದದ ಮುಂತಾದವುಗಳ ಸಂಗಡ ಸಮುದ್ರವನ್ನು ಎಂಬದಕ್ಕೆ ಹಾಕ ಬೇಕು. 4, ಅಭಯದ ರಸದಿಂದ ಸಮುನ್ಮಿಳಿತವಾದ (ತುಂಬಿದ್ದಾದ,) ವರರಾಜನ ಸೇನೆಯೆಂಬ ಸಮುದ್ರವನ್ನು. (ಪಾಳೆಯದಲ್ಲಿ ಸಮುದ್ರದ ಸಾಮ್ಯ ತೋರಿತು).

ಎರಡು ತರದೊಳಗೊಪ್ಪುವಂಗಡಿಯ ಮುಂ[1]ಗಡಿಯ
ಸುರಿದ ಧಾನ್ಯದ ರಾ[2]ಶಿಯೊತ್ತುಗಳ ಜೊತ್ತುಗಳ,
ಕರಿ-ತುರಗ-ನಿಚಯದೆಡೆಯಾ[3]ಟಗಳ ಘಾಟಗಳ, ಪೊಂ-ದೇರ ಸಂದಣಿ
[ಗಳಾ, ||

1, ಮುಂದಗಡೆಯ(ಲ್ಲಿರುವ). 2, ಒತ್ತಾಗಿಯೂ ಜೊತ್ತಾಗಿಯೂ ಸುರಿದ ಧಾನ್ಯದ ರಾಶಿಗಳ ಎಂತ ಹೇಳ ಬಹುದು. 3, ಮೇಲಕ್ಕೂ ಕೆಳಯಕ್ಕೂ ಆಡುತ್ತಿರುವ ಘಾಟಗಳ.

ಅರಮನೆಗೆ ಪೋಪ ನೃಪರೆಂದಳದ ಗೊಂದಳದ,
ಪರಿಚರರ ವಿವಿಧ-ಬಿರುದಾವಳಿಯ ಗಾವಳಿಯ,
ಪರಮ-ಭೀಷಣ-ಪಟು-ಭಟಾಳಿಗಳ ಕೇಳಿಗಳ ಪಾಳಿಯಂ ಕಣ್ಗ ಎಸೆ
[ದುದೂ. || 197 ||

A FINE TANK

ಚಂದಾದ ಕೊಳವು.

(ಜೈಮಿನೀ ಭಾರತ)

ಪರಿಶೋಭಿಸಿತು[1] ಮುಂದೆ ಹಂಸ-ಕಾರಂಡ-ಮಧು-
ಕರ-ಕೋಕ-ಮಧುರ-ಮೃದುತರ-ಕಲ-ಸ್ವನ-ಮದೋ-
ತ್ಕರ-ಕಮಲ-ಕುವಲಯ-ವಿರಾಜಿತ, ಶ್ರೀಕರಂ ಪದ್ಮಾಕರಂ; ಚೆಲ್ವ[2]
[ಎನೇ. | 198 |

1, ಇದಕ್ಕೆ ಪದ್ಮ-ಆಕರಂ ಎಂಬುದು ಆಖ್ಯೆ. ಹಂಸಗಳ ಮತ್ತು ಕಾರಂಡಗಳ ಮತ್ತು ಮಧುಕರಗಳ ಮತ್ತು ಕೋಕಗಳ ಮಧುರವಾದ (ಮತ್ತು) ಮೃದುತರವಾದ ಕಲವೆಂಬ ಸ್ವನವುಳ್ಳ ಮದೋತ್ಕರದಿಂದಲೂ ಕಮಲಗಳಿಂದಲೂ ಕುವಲಯುಗಳಿಂದಲೂ ವಿರಾಜಿತವಾದಂಥ ಇತ್ಯಾದಿ. 2, ಚೆಲ್ವು ಎನ್ನುವಂತೆ.

ಲಸದಮಲ-ರತ್ನ-ಸೋಪಾನದಿಂ, ಮೀನದಿಂ,
ಬಿಸವನಾಸ್ವಾದಿಸುವ ಚಕ್ರದಿಂ, ನಕ್ರದಿಂ,
ದೆಸೆ-ದೆಸೆಗೆ ಬೀರ್ವ ತನಿ ಗಂಪಿನಿಂ, ತಂಪಿನಿಂ, ತೊಳಪ[1] ಹಿಮಕರ-
[ಕಾಂತದಾ ||
ಪೊಸ ಸಣ್ಣಿಗೆಯೊಳಿಡಿದ ಪುಳಿನದಿಂ, ನಳಿನದಿಂದ್,
ಬಸದು ಬಿನದಿಪ[2] ಹಂಸ-ಕೇಳಿಯಿಂದ್, ಓಳಿಯಿಂದ್
ಎಸೆವ ನೀರ್-ವಕ್ಕಿಗಳ ಸಂಗದಿಂ, ಭೃಂಗದಿಂದ್ ಆ ಕೊಳಂ[3] ಕಣ್ಗ
[ಎಸೆದುದೂ. || 199 ||

1, ತೊಳಪಿನ (ಅಥವಾ ತೊಳೆಯುವ). 2, ಬಿನದಿಸುವ (ವಿನಾದ ಮಾಡುವ). 3, ಇದು ಆಖ್ಯೆಯಾಗಿದೆ.

ತಳದೊಳೊಪ್ಪುವ[2] ಪಸುರೆಸಳ ರೋಚಿಯಿಂ, ನಡುವೆ
ತೊಳಪ ಕೆಂ-ದಳದ ದೀಧಿತಿಯಿಂದ, ಮೇಲೆ ಕಣ್-
ಗೊಳಿಪ[3] ಹೊಂ-ಗೇಸರದ ಕಾಂತಿಯಿಂದ್, ಎರಗುವಸಿತಾಳಿಯ[4] ಮ
[ರೀಚಿಯಿಂದಾ ||
ಹೊಳ-ಹೊಳವ ಕೋಕನದ ಪಂಕ್ತಿಗಳ ಬಂಣಮುಜ್[1]-
ಜ್ವಳದಿಂದ್ರ-ಚಾಪದಾಕಾರಮಂ ಸಂತತಂ
ಪಳಿವಂತೆ[5] ಕೊಳದೊಳಾರಾಜಿಸಿತು ತುಹಿನ-ಗಿರಿ-ಗಾಡಿನಂತರ್ಯ
[ದೊಳಗೇ. || 200 ||

1, ಬಣ್ಣವು; ಇದು ಈ ಪೂರ್ಣ ಶ್ಲೋಕದ ಅನ್ವಯ.—ರೋಚಿಯಿಂದಲೂ - - - ದೀಧಿತಿಯಿಂದಲೂ - - - ಕಾಂತಿಯಿಂದಲೂ - - - ಮರೀಚಿಯಿಂದಲೂ ಹೊಳಹೊಳೆಯುವ ಕೋಕನದಗಳ ಪಂಕ್ತಿಗಳ ಬಣ್ಣವು, (ತಾನು) ಉಜ್ಜ್ವಳದ ಇಂದ್ರಚಾಪದ ಆಕಾರವನ್ನು ಸಂತತವೂ ಪಳಿಯುವಂತೆ, ಆರಾಜಿಸಿತು. 2, ಬುಡದೊಳಗೆ, ಕೆಳಗಡೆ. 3, ಗೊಳ್ಳಿಸುವ. 4, ಅಸಿತವಾದ ಅಳಿಯ. 5, ಪಳಿಯುವಂತೆ.

ಕಲ[1]-ಹಂಸಮಾಕೀರ್ಣಮಾಗ್ಯ ಇರ್ದು ಕಾಳಗದ
ಕಳಮೆಲ್ಲ, ವಿಷ[2]-ಭರಿತಮಾಗ್ಯ ಇರ್ದು ಸರ್ಪ-ಸಂ-
ಕುಲಮೆಲ್ಲ, ಕುಮುದ[3]-ಯುತಮಾಗ್ಯ ಇರ್ದು ಖಳರೆಂತರಂಗದೊಳಾ
[ಪಮೆಲ್ಲಾ, ||
ಅಳಿದುಳಿದ ಭಂಗ[4]-ಮಯಮಾಗ್ಯ ಇರ್ದು ಮುರಿದ ನೃಪ-
ದಳಮೆಲ್ಲ, ಬಹು-ವಿಚಾರ[5]-ಸ್ಥಾನಮಾಗ್ಯ ಇರ್ದು,
ತಿಳಿಯಲ್ಕೆ, ಉಪದ್ರವ-ಸ್ಥಳಮೆಲ್ಲಮೆನಿಸಿರ್ದುದಾ ವಿಮಲ ಸರಸಿ[6]
[ಕಣ್ಗೇ. || 201 ||

1, ಕಲ ಅಂದರೆ ಮೃದುವಾದ ಧ್ವನಿ. 2, ವಿಷ ಅಂದರೆ ನೀರು ಮತ್ತು ಸರ್ಪವಿಷ. 3, ಕುಮುದ ಅಂದರೆ ಕೆಟ್ಟ ಆಶೆ ಮತ್ತು ನೈದಿಲೆ. 4, ಭಂಗ ಅಂದರೆ ನಾಶನ ಮತ್ತು ನೀರಿನ ತೆರೆ. 5, ವಿಚಾರ ಅಂದರೆ ವಿಧವಿಧದ ವಸ್ತು ಮತ್ತು ನ್ಯಾಯವಿಚಾರ, ದುಃಖ. 6, ಇದು ಅನ್ವಯಾಗಿದೆ.—ಈ ಶ್ಲೋಕದಲ್ಲಿ ಶ್ಲೇಷಾಲಂಕಾರವು ಅಂದರೆ ಒಂದೇ ಮಾತಿನಲ್ಲಿ ಎರಡು ಅರ್ಥವಿರುವಂಥಾದ್ದು ಕಾಣುತ್ತದೆ (232ನೇ ಶ್ಲೋಕ ಸರಿ ನೋಡ ಬಹುದು); ಶ್ಲೋಕದ ಆರಂಭದಲ್ಲಿ ಎರಡು ಅರ್ಥವಾಗುವಂತೆ ಮೊದಲು ಇದ್ದ ಹಾಗೆಯೇ ಓದಿ, ಆ ಮೇಲೆ ಕಲಹಂ ಸಮಾಕೀರ್ಣಮಾಗಿ (ಕಲಹವು ಬಹಳ ತುಂಬಿದ್ದಾಗಿ) ಎಂಬಂತೆ ಓದ ಬೇಕು.

A BEAUTIFUL RIVER

ರಮ್ಯವಾದ ನದಿ

ತೆರ-ತೆರದ ಕಲ್ಲೋಲ-ಮಾಲೆಗಳ ಲೀಲೆಗಳ,
ಬೆರ-ಬೆರವ ರಾಜ-ಹಂಸಾಳಿಗಳ ಕೇಳಿಗಳ,
ಪರಿ-ಪರಿಯ ನೀರ್-ವನಿಗಳಾಕರದ ಸೀಕರದ, ನೊರೆಯ ಬೊಬ್ಬು
[ಳಿಯ ಸುಳಿಯೂ, ||
ಮೊರೆ-ಮೊರೆದು ಘೂರ್ಣಿಸುವ ಪರಿವುಗಳ ಮುರಿವುಗಳ,
ತಿರು-ತಿರುಗಿ ಸುಳಿವ ಜಲ-ಜಂತುಗಳ ಗಂತುಗಳ,
ನೆರ-ನೆರದು ಪೋಯುತಿಹ ಮೀಯುತಿಹ [1]ನಾವಿಕರ ಗಂಗೆಯೆಂತಿ
[ಶೋಭಿಸಿದುದೂ. || 202 ||

1, ನಾವಿಕರ ಎಂಬ ಸಂಬಂಧವಿಭಕ್ತಿಯನ್ನೂ ಅದಕ್ಕೆ ಹಿಂದೆ ಇರುವ ೬ ಮುಖ್ಯವಾದ ಪದಗಳನ್ನೂ ಗಂಗೆಯೆಂಬದಕ್ಕೆ ಹಾಕ ಬೇಕು.

ತೆಂಗ್, ಎಳೆ ಕವುಂಗು, ಪನಸ, ದ್ರಾಕ್ಷೆ, ಜಂಬು, ನಾ–
ರಂಗ, ಜಂಬೀರ, ಖರ್ಜೂರ, ಕಿತ್ತಳೆ, ಮಾತು–
ಳಂಗ, ತಿಂತ್ರಿಣಿ, ಚೂತ, ನೆಲ್ಲಿ, ಬಿಲ್ವ, ಕಪಿತ್ಥಮೆಂಬ ನಾನಾ ತ[1]ರು
[ಗಳೂ ||
ತೊಂಗುವ ಫಲಾವಳಿಯ ಭಾ[2]ರಂಗಳಾವಗಂ
ಪಿಂಗದಿವನಿಳೆಗಿಳಿಪ ಬೇಕ್ ಎಂದು ಬಾಗಿ, ಬಂದ್
ಅಂಗನೆಯರಿಂಗ್ ಎಸೆದವಿಕ್ಕೆಲದೊಳಾ ನದಿಯ ರಮ್ಯ-ತಟ-ಬನಗ
[ಳೊಳಗೇ. || 203 ||

1, ಇದು ಆಶ್ಯೆಯಾಗಿದೆ. 2, ಭಾರಗಳ (=ಭಾರಗಳನ್ನು) ಯಾವಾಗಲೂ ಪಿಂಗದೆ, ಇವನ್ನು (ಈ ಫಲಗಳ ಭಾರಗಳನ್ನು) ಇಳೆಗೆ ಇಳಿಸ ಬೇಕೆಂತ ಬಾಗಿ, (ನೀರಿಗೆ) ಬಂದ ಇತ್ಯಾದಿ.

A FOREST

ಒಂದು ಹಳುವ

ಇಳಿದು ರಥದಿಂದ, ಮಂದಾಕಿನಿಗೆ ಪೊಡಮಟ್ಟು,
ಬಳಿಕ ನಾವಿಕರೊಡನೆ ನಾವದೊಳ್ ಗಂಗೆಯಂ
ಕಳೆ[1]ದೆವಯವೆನಾಮಯಕರ ನೀರೊಳ್ ಮಿಂದು, ಪಯೋ[2]ಣಸ್ಥನೆದ್ದು,
[ತದನೂ ||
ಬಳಗೊಳಗೆ ಮರುಗಿ, ಬಿಸು-ಸುಯ್ದು, ಚಿಂತಿಸುತ ಮುಂ-
ದಳೆದುಗ್ರ-ಮೃಗ-ಪಕ್ಷಿ-ಗಣದಿಂದ ಘೂರ್ಣಿಸುವ
ಹಳುವಮಂ ಪೊಕ್ಕನಡಿಯಿ[3]ಡುವಡೆಸದಳಮೆಂಬ ಕರ್ಕಶದ ಮಾ
[ರ್ಗದಿಂದಾ. || 204 ||

1, ಕಳೆದು, ಅವಯವ-ಅನಾಮಯಕರವಾದ. 2, ಇದು ಆರ್ಷೆಯಾಗಿದೆ. 3, ಇಡುವಡೆ, ಇಡುವದಕ್ಕೆ.

ಶಕುನಿ-ಚಿತ್ಕಾರ-ಘೋಷಣ-ಮಯಂ, ತೃಣ-ಮಯಂ,
ವಿ[1]ಕಿರದುಪಲಾಳಿ-ಕರ್ಕಶ-ಮಯಂ, ಶಶ-ಮಯಂ,
ಪ್ರಕಟ-ಕಂಟಕ-ಶೀರ್ಣ-ತರು-ಮಯಂ, ರುರು-ಮಯಂ, ವಿವಿ[2]
[ಧೋಗ್ರ-ಜಂತು-ಮಯವೂ, ||
ನಕುಲ-ಮೂಷಕ-ಸರೀಸೃಪ-ಮಯಂ, ದ್ವಿಪ-ಮಯಂ,
ಸಕಲ-ಭೂ-ವಿಷಮ-ಸಂಕುಲ-ಮಯಂ, ಬಿಲ-ಮಯಂ,
ವೃಕ-ಶೂಕರ-ವ್ಯಾಘ್ರ-ಚಯ-ಮಯಂ, ಭಯ-ಮಯಂ ತಾನ್ ಎನಿ
[ಸಿ, ಕಾ[3]ಡ್ ಇರ್ದುದೂ. || 205 ||

1, ವಿಕಿರದ ಉಪಲ-ಆಳಿ. 2, ವಿವಿಧ ಉಗ್ರ. 3, ಇದು ಪೂರ್ಣ ಶ್ಲೋಕದ ಆರ್ಷೆಯಾಗಿದೆ.

XXI. ಪಾಠ

DAWN

ಪ್ರಾತಃಕಾಲ

ಸ್ವರ ಗೈದವೆನಿತರೊಳ್ ಚರಣಾಯುಧಂ; ಖಳ-ಜ–
ನರ ಮನಂ ಬೆಚ್ಚಿದುದು; ಮೂಡ ದೆಸೆ ಬೆಳಗಿತು; ಪ–
ಸರಿಸಿದುದು ತಂ-ಗಾಳಿ; ಖಗ-ನಿಕರವು[1]ಲಿದೆದ್ದವರಳಿದವು ತಾವರೆ
[ಗಳೂ; ||
ಮೊರದವೊರಡಿ; ನೆರೆದವೆಣೆ-ವಕ್ಕಿ; ತಾರೆಗಳ್
ಪ[2]ರೆದವಿಡಿದಿರ್ದ ಕತ್ತಲೆ ತೊಲಗಿತುತ್ಪಲಂ
ಕೊರಕಿದುದು; ಜನದ ಕಣ್ಣ-ಎವೆ ದೆರೆದುದೊದರಿದರು ನೇಗಿಲಂ
[ಬಡಿವ ಜನರೂ. || 206 ||

1, ಉಲಿದು (ಉಲಿಯುತ್ತಾ ಆಕಾಶಕ್ಕೆ) ಎದ್ದವು; ಅರಳಿದವು ಇತ್ಯಾದಿ. 2, ಪರದವು; ಇಡಿದು ಇರ್ದ ಇತ್ಯಾದಿ.

ಅರಳಿದ [1]ಶೋಣಾಬ್ಜಗಳ ಛಾಯೆಗಳೆ[2]ಡೆರ್ದವೆನೆ,
ಭರದಿಂದ ಕತ್ತಲೆಯ ಮೇಲೆ [3]ಬಹ ರವಿಯ ರಥ-
ತುರಗ-ಖುರ-ಪುಟದಿಂದಲೇಳ್ವ ಕೆಂ-ಧೂಳ್ಗಳೆನೆ, ಪ್ರಾಚೀನ ಗಿರಿಗ
[ಳಲ್ಲೀ ||
ಸರಸದಿಂ ಬೇಗೆ ಬಿಸಿಲಿಂ ಬೆಂದ ಪುಲ್ಲ ಮೊಂದ್
ಉರುಪುರಿದು ಖ-ಮುಖದಲಿ ಬಿಂಬಿಸಿದುದೆನಲು, ವಿ–
ಸ್ತರದ [4]ಸಂಧ್ಯಾ-ರಾಗವೈದೆ ರಂಜಿಸುತಿರ್ದುದೆಂದು ಮೂಡಣ
[ದೆಸೆಯೊಳೂ. || 207 ||

1, ಶೋಣ (ಕೆಂಪು ಬಣ್ಣದ) ಅಬ್ಜಗಳ. 2, ಅಡರಿದವು ಎಂಬಂತೆ. 3, ಬರುವ. 4, ಸಂಧ್ಯೆಯ ರಾಗಂ (ಬಣ್ಣಂ); ಇದು ಆಖ್ಯೆ.

EVENING-TIME

ಸಾಯಂಕಾಲ

ಅರಸ, ಕೇಳ್! ಆದುದೆನಿತರೊಳೆಸ್ತಮಯ-ಸಮಯ;
ಮರವಿಂದೆಲರ್ಗಳೊಳ್ ಶಿರೆಯೊದವಾರಡಿಗ[1]—
ಳಿರದೆ ಪರಿದವು ಬಿಸಿಲ ಬೀಡುಗಳ್; ಗೂಡು-ಗೊಂಡವು ಕೂಡೆ [ಪಕ್ಷಿ-ಜಾತೀ; ॥
ಪಿರಿದೆನಿಪ[2] ಕತ್ತಲೆಯ ರಾಶಿಯಂ ಪೊತ್ತು[3] ಕೊಂಡ್
ಉರಿವ ಬೆಂಕಿಯ ಕಡೆಯಲುಳಿದ ಕೆಂ-ಗೆಂಡಮೆನೆ,
ತರಣಿ-ಮಂಡಲಮೆಸೆದುದಪರ ದಿಗ್-ಭಾಗದೊಳ್ ಕೊರಗಿದವು ಕೋ [ಕಂಗಳೂ. ॥ 208 ॥

1, ಆರಡಿಗಳು; ಇರದೆ ಪರಿದವು ಇತ್ಯಾದಿ. 2, ಎನ್ನಿಸುವ. 3, ಕತ್ತಲೆಯ ರಾಶಿಯನ್ನು (ಒಂದು ದೊಡ್ಡ ಭಾರದಂತೆ) ಹೊತ್ತು ಕೊಂಡು ಉರಿವ ಕೆಂಗೆಂಡವೆಂಬಂತೆ ಸೂರ್ಯನು (ಮಂದವಾಗಿ) ಎಸೆದುದು; ಅಪರ ಇತ್ಯಾದಿ.

ಸುಲಲಿತಾಂಬರ-ಮಣಿ-ವಿಭೂಷಣವನುಳಿದು, ಮಂ—
ಗಳ-ರಂಗಮಂ ತಾಳ್ದು, ತಾರಾಭರಣವನಾಂ—
ತಳೊ[1] ಸಂಜೆ-ರಾಣಿಯೆನೆ, ಕೆಂಪ್ ಇಡಿದುಡು-ಗಣಂಗಳೆಸೆದವಾಗಸ [ದೊಳಾಗ[2] ॥
ನಳಿನಾಳಿ, ನಾಳಿನಳಿ-ಕುಲ-ಕೀರ-ವಿಸರ-ಪರಿ—
ಮಳ-ಸಾರ-ಮಧುವೆಂದು ಬಾಗಿಲ್ಗಳಂ ಪೂಡಿ
ಕೊಳುತಿರ್ಪವೆಂಬ್ ಅಂತೆ, ಮುಗಿವುತಿರ್ದವು; ಕೂಡೆ ತೀವಿದವು [ಕತ್ತಲೆಗಳೂ. ॥ 209 ॥

1, ಇದು ಆಖ್ಯೆಯಾಗಿದೆ. ಸಂಜೆಯೆಂಬ ರಾಣಿಯು ಸುಲಲಿತವಾದ ಅಂಬರ-ಮಣಿಯ (ಸೂರ್ಯನ) ವಿಭೂಷಣವನ್ನು ಉಳಿದು (ಬಿಟ್ಟು), ಮಂಗಳದ (ಮಂಗಳವೆಂಬ ಗ್ರಹದ) ರಂಗವನ್ನು (ಬಣ್ಣವನ್ನು) ತಾಳಿ (ಉಟ್ಟುಕೊಂಡು), ತಾರೆಗಳ ಆಭರಣವನ್ನು ಆಂತಳೋ? (ಆತಳೋ? ತಕ್ಕೊಂಡಳೋ?) ಎಂಬಂತೆ, ಕೆಂಪು ಇಡಿದು ಇತ್ಯಾದಿ. 2, ಆಗ ನಳಿನ-ಆಳಿ, (ಇದು) ನಾಳಿನ (ನಾಳೆ ಬರುವ) ಅಳಿ-ಕುಲದ ಕೀರವಾದಂಥ, ವಿಸರವಾದ ಪರಿಮಳದ ಸಾರವಾದಂಥ ಮಧುವೆಂದು, ಬಾಗಿಲುಗಳನ್ನು (ಎಸಳುಗಳೆಂಬವುಗಳನ್ನು) ಪೂಡಿ ಕೊಳ್ಳುತ್ತಿರುವವೆಂಬ ಹಾಗೆ, ಇತ್ಯಾದಿ.

MOON-RISE

ಚಂದ್ರೋದಯ

ಸುತ್ತ-ಸುತ್ತಲುಮೆಂಧಕಾರಮೊಗ್ಗ್ಯೆ ಇರುತಿರಲ್,
ಚಿತ್ತವಿಸು, ತಂಬ್-ಎಲರ್ ಬೀಸಿದೊಡೆ ಪ್ರಜ್ವಲಿಸಿ
ಮೆತ್ತ್[1] ಉರಿವ ಕಿಚ್ಚಿನೇಳಿಗೆಯೆಂತೆ, ಮೂಡಿದಂ ಚಂದ್ರಮಂ ಚೆ
[ಲ್ವಿನಿಂದಾ. | 210 |

1, ಮತ್ತು, ಮತ್ತಾಗಿ (ಸಂತೋಷವಾಗಿ).

ಮುರುಗಿದವು ಕೋಕ ಕೋಕನದಂಗಳೆಂ[1]ಗ, ಬಾಯ್ದೆ
ದೆರದವು ಚಕೋರ-ಕೋರಕ-ಕುಮುದ-ರಾ[2]ಜಿಗಳ್,
ತುರುಗಿದ ತ[3]ಮಿಸ್ರಮೆಾಲೋಕ-ಲೋಕ-ಸ್ಥಿತಿಗೆ ತೊಲಗಿದವು ದೆಸೆ-ದೆ
ಸೆಯೊಳೂ, ||
ಮೊರದುದು ಸಮುದ್ರಮುದ್ದ್ರವದ ಪೆರ್ಚ್ಚುಗೆಯಿಂದ–
ಲೊ[4]ರೆತುದುಡು-ಕಾಂತ-ಕಾಂತ-ಪ್ರತತಿ, ಟಿಟ್ಟಿಭ-
ಸ್ವರಟಿಟ್ಟಿಟಿಟ್ಟಿಕರಿಸಿದುದೊಂಟಿ ದಾರಿಗರ ಕಿವಿಗೆ, ಚಂದ್ರೋದ
[ಯದೊಳೂ. || 211 ||

1, ಯಾಕಂದರೆ ಇವು (ತಮ್ಮನ್ನು ಅಗಲಿ ಹೋದ) ಸೂರ್ಯನ ಮಿತ್ರರು. 2, ಇವು ಚಂದ್ರನ ಕಿರಣಗಳಿಂದ ಬದುಕುತ್ತವೆಂಬ ಕಥೆ ಅದೆ. 3, ತಮಿಸ್ರಂ (ತಮಿಸ್ರಗಳು ಚಂದ್ರನ) ಆ ಲೋಕದ (ದೃಷ್ಟಿಯ, ಚಂದ್ರನು ದೃಷ್ಟಿಸುವ) ಲೋಕದ ಸ್ಥಿತಿಗೆ (ಮೇರೆಗೆ), ಅಂದರೆ ಚಂದ್ರನಿಗೆ ದುರಾದ ಲೋಕದ ಪ್ರದೇಶಕ್ಕೆ, ತೊಲಗಿ ಹೋದವು. ಆ ಲೋಕವೆಂಬದಕ್ಕೆ ಪ್ರಕಾಶವೆಂಬ ಅರ್ಥವು ಸಹ ಅದೆ; ಈ ಪ್ರಕಾರವಾಗಿ ಆ ವಚನದ ಅರ್ಥ ಮಾಡ ಬೇಕಾದರೆ, ತಿಮಿಸ್ರಂ ಪ್ರಕಾಶವುಳ್ಳ ಲೋಕ-ಸ್ಥಿತಿಗೆ ತೊಲಗಿದವು (ಆ ಸ್ಥಿತಿಯನ್ನು ತೊಲಗಿ ಬಿಟ್ಟವು) ಎಂತ ಆಗುತ್ತದೆ. 4, ಒರೆಯಿತು (ಒರ್ತಿಯಾಯಿತು) ಉಡು-ಕಾಂತನ (ಉಡುಗಳ ರಾಜನ, ಚಂದ್ರನ) ಕಾಂತಗಳ (ಕಲ್ಲುಗಳ) ಪ್ರತತಿ. (ಚಂದ್ರ-ಕಾಂತಗಳೆಂಬ ಕಲ್ಲುಗಳು ಚಂದ್ರನ ಕಿರಣಗಳು ತಾಗಿ ನೀರನ್ನು ಬಿಟ್ಟು ಕೊಡುತ್ತವೆಂಬ ಕಥೆ ಅದೆ).

ತನೆ ಶಾಂತಮಮೃತ-ರೂಪಂ,[1] ಶೈತ್ಯ-ವರ್ಧನಂ,
ಭುವನ-ಪ್ರಕಾಶಂ, ಜನಾವಲೋಕ-ಪ್ರಿಯಂ,
ಧವಳಂ, ಸು-ವೃತ್ತಂ, ಗಗನ-ಮುಖ-ಸುಭೂಷಣಂ, ಶಶ-ಬಿಂಬ
[ಮೆಂಪದ-ಗಾಮಿ, ||
ನವ-ನವಾಗಮವಾದ ರಾಜನಭ್ಯುದಯದೊಳ್
ಕುವಲಯ-ಶ್ರೀ ವಿರಾಜಿತಮಪ್ಪು[2]ದೇನ್ ಕೌತು—
ಕವೆ? ಜಾರ ಚೋರರ್ಗಳೆಡೆಗ[3]ದಿರ್ದಪರೆ? ಪೇಳ್! ಎನ[4]ಲಿಂದು ಮೆ
[ರದನೆಂದೂ. || 212 ||

1, (ಹಾಲಿನ) ರೂಪವುಳ್ಳವನು. ಶಾಂತಂ, ಅಮೃತ-ರೂಪಂ ಇತ್ಯಾದಿ ವಿಶೇಷಣಪದಗಳು 'ಆದ, ಎಂಬ' ಅನುಬಂಧಕ್ರಿಯಾಪದದಿಂದ 'ರಾಜನ' (ಚಂದ್ರನ) ಎಂಬದಕ್ಕೆ ಹೋಗುತ್ತವೆ. 2, ಆಗುವದು. 3, ಇರುವರೇ? (183ನೇ ಶ್ಲೋಕ ನೋಡಿರಿ). 4, ಎನ್ನಲು, ಎನ್ನುವಂತೆ.

SPRING-TIME

ವಸಂತ-ಕಾಲ

(ಭಾರತ)

ಕಾಮಿನಿ-ಷಟ್ಪದಿ (1ನೇ ಶ್ಲೋಕ ನೋಡ ಬೇಕು)

ತೆಗೆದುದೆ[1]ಗ್ಗದ ತಂಪು; ನದಿ ಸರ—
ಸಿಗಳ ತಡಿಯಲಿ ಹೆ[2]ಜ್ಜೆಯೊದುದು;
ಹಗಲು ಹಾವಸೆ ಹ[3]ರೆದುದೊಕ್ಕರಿಸಿದುದು ಹಿ[4]ಮ ಜಲವಾ; ||
ಸೊಗಸಿದವು ನೆಳಲುಗಳು; ದೂ[5]ರಕೆ
ಶೆಗಳಿಕೆಗಳೇರಿದವು; ತಂ-ಗಾ—
ಳಗೆ ವಿಹಾರಿಸಿ, ವ್ಯೆಯು ತೆ[6]ತ್ತುದು ಕೂಡೆ ಜನ-ನಿಕರಾ. || 213 ||

1, ತೆಗೆಯಿತು (ತೆಗೆಯಲ್ಪಟ್ಟಿತು). 2, (ಅಲ್ಲಿ ತಂಪು ಅವೆಂತ ಜನರ) ಹೆಜ್ಜೆ ಆಯಿತು. 3, (ಬಿಸಲಿಗೆ) ಹರಿಯಿತು. 4, ಇದು ಕರ್ತೃವಿಭಕ್ತಿ. 5, ವಿಸ್ತಾರಕ್ಕೆ, ವಿಸ್ತಾರವಾಗಿ. 6, ತೆತ್ತಿತು (ಕೊಟ್ಟಿತು).

ಮೊರವ ತುಂಬಿಯ ಗಾಯಕರ, ನಯ
ಸರದ ಕೋಕಿಲ-ಪಾಠಕರ, ಬಂ–
ಧುರದ ಗಿಳಿಗಳ ಪಂಡಿತರ, ಮಾ-ಮರದ ಕರಿ-ಘಟೆಯಾ, ||
ಅರಳಿದಂಬುಜ-ಸತ್ತಿಗೆಯ, ಮಂ–
ಜರಿಯ ಕುಸುಮದ ಚಾಮರದ ಚಾ–
ತುರ-ವಸಂತ-ನೃಪಾಲ[1] ನಡೆದನು ಜನರ ಮೈ ಮೇಲೆ. || 214 ||

1, ಚಾತುರವಾದ ವಸಂತವೆಂಬ ರಾಜನು; ಗಾಯಕರ, ಪಾಠಕರ ಇತ್ಯಾದಿ ಮುಖ್ಯ ಸಂಬಂಧವಿಭಕ್ತಿಗಳನ್ನು ಇವನಿಗೆ ಹಾಕ ಬೇಕು.

ಫಲಿತ ಚೂತದ ಬಿಣ್ಪುಗಳ, ನೆರೆ
ತಳಿತಶೋಕೆಯ ಕೆಂಪುಗಳ, ಪರಿ–
ದಳಿತ ಕಮಲದ ಕಂಪುಗಳ, ಬನ-ಬನದ ಗುಂಪುಗಳಾ, ||
ಎಳೆ ಲತೆಯ ನುಣ್ಪುಗಳ, ನವ ಪರಿ–
ಮಳದ ಪವನದ ಸೊಂಪುಗಳ ವೆ[1]–
ಗ್ಗಳಿಕೆ ಝಳಪಿಸಿ, ಹೊಯ್ದು, ಸೆಳದುದು ಜನದ ಕಣ್ ಮನ
[ವಾ. || 215 ||

1, ಇದು ಆಖ್ಯೆಯಾಗಿದೆ; ಇದಕ್ಕೆ ಆ ಮುಖ್ಯ ಸಂಬಂಧವಿಭಕ್ತಿಗಳನ್ನು ಹಾಕ ಬೇಕು.

ಪಸರಿಸಿತು ಮಧು-ಮಾಸ; ತಾವರೆ–
ಯೆಸಳ ದೋಣಿಯ ಮೇಲೆ ಹಾಯ್ದವು
ಕುಸುಮ-ರಸದುಬ್ಬರದ ತೊರೆಯನು[1] ಕೂಡೆ ತುಂಬಿಗಳೂ; ||
ಒಸೆರೊ[2] ಮಕರಂದದ ತುಷಾರದ
ಕೆಸರೊಳದ್ದವು[3] ಕೊಂಚೆಗಳು, ಪಗ–
ಲೆಸೆವ ದಂಪತಿ-ಪಕ್ಕಿ, ಸಾರಸ, ರಾಜ-ಹಂಸೆಗಳೂ. || 216 ||

1, ತುಂಬಿಗಳು ತಾವರೆಯ ಎಸಳಾಗಿರುವ ದೋಣಿ ಹತ್ತಿ, ಕುಸುಮ-ರಸದ ಉಬ್ಬರದ ತೊರೆಯನ್ನು ಹಾಯ್ದವು (ದಾಟಿದವು). 2, ಒಸರುವ. ತೊರೆಯೂ ಅದರ ಕೆಸರೂ ಹೂವುಗಳ ಜೇನುತುಪ್ಪದಿಂದ ತುಂಬಿತ್ತು ಎಂಬಂತೆ. 3,=ಅದ್ದಿದವು, ಮುಣುಗಿದವು.

ಜಗವ ಹೊರೆದುದು[1] ಬಹಳ ಪರಿಮಳ-
ದೊಗು-ಮಿಗೆಯ ತಂ-ಗಾಳಿ; ವನ ವೀ-
ಥಿಗಳ ವಳಯುವ ಹೊಕ್ಕು[2], ಮರಳಿದುದಿಲ್ಲ[3]; ತಂ-ನೆರಳಾ ||
ಸೊಗಸಿನೆಡೆಯಲ್ಲ್ಯ ಎಲರ ಕೇಳಿಯು,
ಖಗಗಳಿಂಪಿನ ನುಡಿಯ ಗಾನವು
ತೆಗೆದವೊಸರ ಪಟ್ಟ ದಾರಿಗರಖಿಳ ತಾಪವನೂ. || 217 ||

1, ಹೊರೆಯಿತು (ಉದ್ಧಾರ ಮಾಡಿತು). 2, ಇದಕ್ಕೆ ಸಹ ‘ತಂಗಾಳಿ’ ಎಂಬುದು ಅಧ್ಯಾ. 3, ಮರಳಲಿಲ್ಲ (ಹಿಂದಿರುಗಲಿಲ್ಲ).

XXII. ಪಾಠ

THE WINTRY AND COLD SEASONS

ಹೇಮಂತ ಶಿಶಿರಗಳ ಕಾಲ

(ಜೈಮಿನೀ ಭಾರತ)

ವಾರ್ಧಕ-ಷಟ್ಪದಿ (140ನೇ ಶ್ಲೋಕ ನೋಡ ಬೇಕು)

ಹೇಮಂತ[1]-ಶೈಶಿರದ ಮಾಗಿ ಮಡಲಿಡೆ, ತರಣಿ
ಸೋಮನಂತ್[2] ಇರೆ, ಬಿಸಿಲ್ ಬೆಳ-ದಿಂಗಳೋಲ್ ಆಗೆ;
ತಾಮರಸ-ರಾಜಿ ನಸಿದವು, ಕುಗ್ಗಿದವು ಕೋಗಿಲೆಯ ಕೊರಳ್-ಸು
[ಧ್ವನಿಗಳೂ. | 218 |

1, ಹೇಮಂತದ (ಮತ್ತು) ಶೈಶಿರದ. 2, ತಣ್-ಗದಿರ ಅಂದರೆ ತಂಪಾದ ಕಿರಣವುಳ್ಳ ಚಂದ್ರನಂತೆ.

ಬಾಲಕರು[1] ಚಿತ್ರದೆಸುವಾಸನಾ-ಪುಷ್ಪದಿಂ,
ರೋಲಂಬ-ರಾಜಿ ಸೊಕ್ಕ್-ಆನೆಗಳ ಸೊಗಡಿಂದ
ಕಾಲವಂ ಕಳೆವೊಲಾದುದು, ಪೂಗಳಿಲ್ಲದೆ; ನುಸುಳ್ದವಿನ[2]-ಶಶಿ-ರುಚಿ
[ಗಳೂ. ||

1, ವನದಲ್ಲಿ ಹೂವುಗಳಿಲ್ಲದೆ, ಬಾಲಕರು ಚಿತ್ರದ ಅಸುವಾಸನೆಯ ಹೂವಿನಾಟದಿಂದ ಮತ್ತು ರೋಲಂಬ-ರಾಜಿಯು ಸೊಕ್ಕಾನೆಗಳ ಸೊಗಡನ್ನು (ಹೂವಿನದು ಎಂತ ನೆನಸಿ) ಮುತ್ತಿ ಕೊಳ್ಳುವ ಆಟದಿಂದ ಕಾಲವನ್ನು ಕಳೆಯುವ ಓಲು (ಹಾಗೆ) ಆಯಿತು. 2, ಪೂಗಳನ್ನು ಕಾಣದ ದುಃಖದಿಂದ ನುಸುಳಿದವು ಎಂತ ಕವಿಯು ಊಹಿಸಿದಂತೆ ಕಾಣುತ್ತದೆ.

ಜ್ವಾಲೆ ಶೀತಳವಾದುದಗ್ನಿಯುಂ ಬಿಟ್ಟು ಕೈ
ಕಾಲುಗಳು ದಿನ-ಮಣಿಯು ನಸು ಬಿಸಿಲ ಬಯಸಿದವು;
ಮೂ-ಲೋಕಮಂ ಮಾಗಿ ನಡುಗಿಸಿತು, ಮೇಣ್ ಉಡುಗಿಸಿತು ಪೇ
[ರ್ಚಿದೈಕಿಲಿಂದಾ. || 219 ||

ನೆರೆ ಲೋಭಿ ವಿತ್ತಮಂ ಸುವಿಧಾನಮಂ ಗೇದ್, ಅ—
ತಿರ ಲಾಭಮಂ ಸಂತತಂ ಕರ-ಸ್ಥಮೆಂದೆಂಬ
ತೆರದಿಂದಲೆಡಿದ ಶೈಶಿರದ ಶೀತಳಕೆ ಪಗಲಿರುಳು ತಮ್ಮ[1] ಗೂಡುಗಳ
[ನೂ ||
ಪೊರಮಟ್ಟು ಪಾರಲೊಲ್ಲದೆ, ವಾಯಸ-ಪ್ರತತಿ
ಗರಿಗಳಂ ಪೊ[2]ದಿಸಿ, ಮುಗ್ಗುಲೊಳೆಟ್ಟು ಕೋಗಿಲೆಯು
ಮರಿಗಳಂ, ಮೈಯೊಳ್ ಪುದುಗಿ ಕೊಂಡು, ಮರುಕದಿಂದ್ ಐದೆ
[ಪಾಲಿಸುತಿರ್ದಪ್ಪೂ. || 220 ||

1, (ವಾಯಸಗಳು) ತಮ್ಮ. 2, (ಕೋಗಿಲೇ ಮರಿಗಳ ಮೇಲೆ) ಪೊದಿಸಿ.

ಭುವನಮಂ ತೀವ್ರ[1] ಇರ್ದ ಹಿಮವನುಂ ತಮವನುಂ
ತವಿಸುವುತ್ಸವದಿಂದಲೆವಗಡಿಸಿ, ಜವ-ಗೆಡಿಸಿ,
ಭವಣಿ-ಗೊಂಡ್, ಅಭ್ರದೊಳ್ ತೊಳಲುತ್ತ ಬಳಲುತ್ತ ಬಂ[2]ದೊಡಂ;
[ಮ[3]ತ್ತೆ ಬಿಡದೇ ||
ಕವಿಯಲ್; ಪ್ರತಾಪದೇಳಿಗೆ ನಂದಿ, ಮಿಗೆ ಕುಂದಿ,
ರವಿ ತಣ್ಣಗಾ[4]ದುದೆನೆ ಕಾಣಿಸಿತು. ಮಾಣಿಸಿತು
ತವೆ ತನ್ನ ದಯೆಯುರಿಯು ಬಲ್ಲರೊಳ್ ನಲ್ಲರೊಳ್ ಮುನಿಸನಾ ಶೈಶಿರ
[ದೊಳೂ. || 221 ||

1, ಹಿಮವನ್ನೂ. 2, ಬಂದರೂ (ಈ ವರೆಗೆ ರವಿಯೆಂಬುದು ಅಧ್ಯಾ.) 3, ಮತ್ತೆ ಹಿಮವೂ ತಮವೂ ಬಿಡದೆ ಕವಿಯಲಾಗಿ. 4, (ರವಿಯು ತನ್ನ) ಮುನಿಸನ್ನು ಮಾಣಿಸಿತು ತನ್ನ ದಯೆಯನ್ನು ಅರಿಯ ಬಲ್ಲವರೊಳಗೂ ನಲ್ಲರೊಳಗೂ (ತನ್ನ ಕಿರಣಗಳು ಛಳಿಯಲ್ಲಿ ಬಹಳ ಹಿತವೆಂತ ತಿಳುಕೊಳ್ಳುವ ಗೆಳೆಯರೊಳಗೆ).

SPRING-TIME (BY A DIFFERENT AUTHOR)

ವಸಂತ-ಕಾಲ

(ಜೈಮಿನೀ ಭಾರತ)

ಬಂದ್ ಎಡೆಯೊಳುಂ[1] ತನಗೆ ನಿಲವಿಲ್ಲದತಿ ವೇಗ-
ದಿಂದ ನಿರುತಂ ಪ್ರಬಲವಾಗಿ ಬೀಸುವ ಗಾಳಿ,[2]
ಚಂದನ-ದ್ರುಮಂಗಳಂ ತೊಡರ್ದಹಿಗಳಾಹಾರಮಂ ಕೊಂಡು ಕೊಂ
[ಡು, ಮಿಕ್ಕು, ||
ಮಂದತ್ವಮಂ ತಳೆದು, ಮಲಯಾಚಲದ ಸೀಮೆ-
ಯಿಂದ, ಸರಸಿಜದೊಳ್ ಭ್ರಮಿಸುವ ಮರಿ-ದುಂಬಿಗಳ
ವೃಂದಮಂ ಕೂಡಿ ಕೊಂಡ್, ಎಳೆವೆಲರ್ ಬಂದುದೈ, ಕೊಳ-ಕೊಳದ
[ನೀರ್ ಬರಸುತಾ. || 222 ||

1, ಬಳಗೂ. 2, (ಅಂಥ) ಗಾಳಿಯು, ಚಂದನ-ದ್ರುಮಂಗಳನ್ನು ತೊಡರಿದ ಅಹಿಗಳು (ಅದರಲ್ಲಿ ತಮ್ಮ) ಆಹಾರವನ್ನು (ಘಾಳಿ ಅವುಗಳ ಆಹಾರವೇ ಎಂಬ ಕಥೆ ಅದೆ) ಕೊಂಡು ಕೊಂಡ ಮೇಲೆ, ಮಿಕ್ಕು (ತಕ್ಕಷ್ಟು ಉಳಿದದ್ದಾಗಿ), ಮಂದತ್ವಮಂ ತಳೆದು (ತಳೆದ ಬಳಿಕ), ಬಂದು ಎಳೇ ಎಲರು ಮಲಯ-ಅಚಲದ ಸೀಮೆಯಿಂದ ಇತ್ಯಾದಿ.

ಮಿರುಗುವ ತಳಿರ್-ದೋರಣಂಗಳಂ ಕಟ್ಟಿಸುತ,
ಮರಿ-ಗೋಗಿಲೆಗಳ ಬಾಯ್ಗಳ ಬಲಿದ ಬಂಧನದ
ಸೆರೆಗಳಂ ಬಿಡಿಸುತ್ತ*, ತುಂಬಿಗಳ ಬಳಗಕ್ಕೆ ಕಮಲಗಳ ಸೂರೆ
[ವಿಡುತಾ, ||
ಕಿರುವೆಲರೊಳೆತ್ತಲುಂ ಸಾರಿಸುತ, ಬಾಳೆಗಳ-
ನೆರಗಿಸುತ, ಮದನ-ರಸಮಂ ಪೇರ್ಚಿಸಿ, ವಸಂತ[1]
ಪೊರಮಟ್ಟು, ಮಾಗಿಯನ್ನ್ ಉಡುಗಿಸಿ, ಸಮಸ್ತ ವನ-ರಾಷ್ಟ್ರಮಂ[2]
[ಕೈ[3]ಕೊಂಡನೂ. || 223 ||

* 218ನೇ ಶ್ಲೋಕ ನೋಡಿರಿ. 1, ಇದು ಪೂರ್ಣ ಶ್ಲೋಕಕ್ಕೆ ಆಖ್ಯೆಯಾಗಿದೆ. 2, ವನವೆಂಬ ರಾಜ್ಯವನ್ನು. 3, ಕೈದು ಕೊಳ್ಳುವದು=ಹಿಡು ಕೊಳ್ಳುವದು.

[1]ಪೊಸ ಮಾವ್ ಅಶೋಕೆಯೊಳ್, ಮರಿ-ದುಂಬಿ ಕೋಗಿಲೆಯೊ–
ಳೆಸೆವ ಸಂಪಗೆ ಪೊಚ್ಚ ಪೊಂ-ದಾವರೆಯೊಳು, ಪವ–
ಡಿಸಿದ ಮಲ್ಲಿಗೆಯಲರ್ ಬೆಳತ ಬೆಳ-ದಿಂಗಳೊಳ್, ಗಿಳಿ-ವಿಂಡು ಬನ-
[ಸಿರಿಯೊಳೂ ||
ಮಸದವೊಂದ್ ಬಂದರೊಳ್ ಮಧು-ಮಾಸಕುದಯಾದ್ರಿ-
ದೆಸೆಯಂತೆ [2]ಪತ್ರಿಯಂತೆ [3]ಧನದಂತೆ [4]ಜಸದಂತೆ
[5]ಪಸುರು-ವೆಳಗಂತೆ ಕೆಂಪ್ ಅಸಿತಂ ಪಳದಿ ಪಳುಕು ಪಚ್ಚೆಗಳ ಬಣ್ಣ
[ದಿಂದಾ. || 224 ||

1, ಪೊಸ ಮಾವು ಅಶೋಕೆಯೊಳ್ (ಮಸೆಯಿತು), ಮರಿ-ದುಂಬಿಯು ಕೋಗಿಲೆಯೊಳ್ (ಮಸೆಯಿತು), ಎಸೆವ ಸಂಪಗೆಯು ಪೊಚ್ಚ ಪೊಂದಾವರೆಯೊಳ್ (ಮಸೆಯಿತು) ಇತ್ಯಾದಿ, ಮಧು-ಮಾಸಕ್ಕೆ (ಆ ಮಾಸದ ದೆಸೆಯಿಂದ), ಉದಯ-ಅದ್ರಿಯ ದೆಸೆಯಂತೆ (ಇದು ಕೆಂಪಾಗಿದೆ). 2, ಇದು ಕಪ್ಪಾಗಿದೆ. 3, ಇದು ಹಳದಿ ಆಗಿದೆ. 4, ಕೀರ್ತಿಯು ಪಳುಕಿನಂತೆ ಬಿಳೇದಾಗಿದೆ. 5, ಮದಿವೆಯಲ್ಲಿ ಸುಡುವ ಚಂದ್ರಜ್ಯೋತಿಯಂತೆ.

ತಳಿತೆಸೆವ ತರುಗಳ ನೆಳಲ್ಗಳಂ [1]ಸಾರ್ದು, ಶೀ–
ತಳದ ನಿರ್ಮಲ ವಾರಿಯುಂ ನೀಂಟಿ, ನವ್ಯ ಪರಿ–
ಮಳದಿಂದ ಸೊಗಸು ತೀಡುವ ತೆಳುವೆಲರ್ಗೆ ಮೈಯೊಡ್ಡಿದರು ಮಾ
[ರ್ಗಸ್ಥರೂ. | 225 |

1, ಸಾರಿ.

[1]ಆ ಚೈತ್ರ-ಮಾಸಮೆಸೆದುದು ಧರ್ಮ-ಜನ-ಕೀರ್ತಿ
ಭೂ-ಚಕ್ರಮಂ ಮುಸುಕಿದಂತೆ, ಬೆಳ್-ದಿಂಗಳಿರೆ;
ಯಾಚಕರನೆತ್ತಲುಂ ಕೂಗಿ ಕರೆವಂತ್, [2]ಉಲಿಯೆ ಕೋಗಿಲೆಗಳೆಳೆಯ
[ಜನದಾ ||

1, ಆ ಚೈತ್ರ-ಮಾಸಂ ಎಸೆದುದು ಎಂಬದನ್ನು ಮುಂದಿನ ಒಂದೊಂದು ಸಾಮ್ಯಕ್ಕೆ ಹಾಕಬೇಕು. 2, ಉಲಿಯೆ ಕೋಗಿಲೆಗಳು; ಇಳೆಯ ಜನದ ಇತ್ಯಾದಿ.

ಲೋಚನಕುದಯಿಪ[1] ಪೊಸತೆಂತೆ[2], ಚೂತಾಂಕುರಂ
ಗೋಚರಿಸೆ; ಪಾತಕ-ಕ್ಷಯದಂತೆ, ಮಾಗಿಯ[3] ವಿ–
ಮೋಚನಂ ಕಾಣಿಸಲ್; ಪುಣ್ಯ-ವಾಸನೆಯಂತೆ, ದಕ್ಷಿಣದ ವಾಯು[4]
[ಸುಳಿಯೆ. || 226 ||

1, ಉದಯಿಸುವ. 2, ಅದ್ಭುತದಂತೆ. 3, ವಸಂತವು ಮಾಗೀ ಕಾಲವನ್ನು ಪರಿಹರಿಸುತ್ತದಲ್ಲ? 4, ಇದು ಚಂದನಗಂಧವುಳ್ಳದ್ದು.

THE HOT SEASONS

ಗ್ರೀಷ್ಮ-ಕಾಲ

ಅಲ್ಲಿಂದ ಮುಂದೆ ನಡೆದುದು ಗ್ರೀಷ್ಮ-ಕಾಲದೊಳ್
ಸಲ್ಲಲಿತ ವಾಜಿ; ದಿನ-ಮಣಿಯುರಿಗೆ ಭೂ-ತಳದೊ–
ಳೆಲ್ಲಿಯುಂ ಕೆರೆ ತೊರೆಗಳೊರತೆ ಬತ್ತುದು[1], ನೀರ್ ನೆಳಲ್ಗಳನರಸೆ[2]
[ಪಾಂಥರೂ; ||
ಘಲ್ಲಿಸುವ ಬೇಸಿಗೆಯ ಬಿಸಿಲಿಂದ ಮೂ-ಜಗಂ
ತಲ್ಲಣಿಸಿತಿಳೆಯ[3] ಕಾಹ್ ಏರಿದುದು; ಸೂರ್ಯನ ವಿ–
ಪುಲ್ಲಿತ ಕ್ರೋಧಾಕ್ಷಿಯುರಿಯ ಬಾಣಂಗಳಿಂದ್ ಹಾರದಲೆ ಮಾಣವು,
[ಕಣಾ. || 227 ||

1, ಬತ್ತಿತು. 2, ಅರಸುವಂತೆ. 3, ತಲ್ಲಣಿಸಿತು; ಇಳೆಯ ಇತ್ಯಾದಿ.

ಒಂದು[1] ಕಡೆಯೊಳ್ ಸೋವಲೊಂದು ಕಡೆಯೊಳ್ ತಮಕೆ
ನಿಂದು ಮರೆಯಾಗ್ಯ್ ಇಪ್ಪುದಿನ್ನ್ ಇದಂ ಕರಗಿಸುವೆ–
ನೆಂದು, ಕನಕಾಚಲವನುರುಪುವನೊ[2] ತರಣಿ ಕಿರಣದೊಳೆನೆ, ಬಿಸಿಲ್
[ಗರೆಯಲೂ; ||

1, ಇವು ತರಣಿಯ ಮಾತುಗಳು, ಹ್ಯಾಗಂದರೆ—(ನಾನು ಕನಕಾಚಲದ) ಒಂದು ಕಡೆಯೊಳಗೆ (ತಮವನ್ನು) ಸೋವಲು, (ಅದು ಅಂದರೆ ಆ ಕನಕಾಚಲವು) ಒಂದು ಕಡೆಯೊಳಗೆ ತಮಕ್ಕೆ ನಿಂತು ಮರೆಯಾಗಿ (ಆಶ್ರಯವಾಗಿ) ಇರುವದು; ಇನ್ನು ಇದನ್ನು (ಈ ಪರ್ವತವನ್ನು) ಇತ್ಯಾದಿ. 2, ಉರಿಸುವನೋ ತರಣಿ (ತನ್ನ) ಕಿರಣದೊಳು? ಎಂಬಂತೆ.

ಬೆಂ[1]ದು, ಬೆಂಡ್ ಆಗಿ, ಕುಲ-ಶೈಲಂಗಳಾಸರಿಂ
ಕಂದರದ ವೊಗದಿಂದ ಬಿಡುವ ಬಿಸು-ಸುಯ್ಯ್-ಎಲರ್
ಬಂ[2]ದಪ್ಪುದೆನಲ್ಕೆ, ಜಳದಿಂ ಬಿಡದೆ ಬೀಸುತ್ತಿರ್ದುದು ಗಾೞಿ ಬೇಸಿಗೆಯೊ
[ಳೂ. || 228 ||

1, ಕುಲ (ಒತ್ತೊತ್ತಾಗಿರುವ) ಶೈಲಗಳು ಬೆಂದು, ಬೆಂಡು ಆಗಿ, ಆಸರಿಂದ (ತಮ್ಮ ಬಾಯಿಯಾದ (ಕಂದರದ ವೊಗದಿಂದ ಬಿಡುವ ಬಿಸುಸುಯ್ಯು ಎಂಬ ಎಲರು ಇತ್ಯಾದಿ. 2, ಬರುವದು, ಬರುತ್ತದೆ (115ನೇ ಶ್ಲೋಕದಲ್ಲಿ 'ಪೋದಪ್ಪುದಂ' ಎಂತ ಸರಿ ನೋಡ ಬಹುದು).

ಅವನಿಯೊಳ್ ಸಕಲ ಭೂ-ಭೃತ್-ಕುಲದ ಸೀಮೆಗಳ-
ನೆವಗಡಿಸಿ ಪೊಕ್ಕು ನಿಖಿಳ ಪ್ರಾಣಿಗಳ್ಗೆ ತಾ-
ಪವನೊದಗಿಸುವ ದುರ್ಧರ-ಗ್ರೀಷ್ಮ-ರಾಜಂ ನೆಗಳ್ದ ಚತುರಂಗ
[ಮೆನಲೂ, ||

ರವಿಯ ಕಡು ಗಾ[1]ಯ್ಪುಗಳ್-ತೇರ್ ಐಸಲೊತ್ತರಿಸಿ,
ಕವಿದವು; ಬಿಸಿಲ್-ಗುದುರೆಗಳ್, ಕಾಡ್ ಉರಿಯು ಕರಿಗ-
ಳೆವಧಿಯಿಲ್ಲದೆ ಮುಸುಕಿದವು; ಬಹಳ ತ[2]ರು-ಗಳಿತ-ದಳ-ದಳೊಳಗ
[ಳಿಳಿದವೂ. || 229 ||

1, ಗಾಯ್ಪುಗಳಾದ ತೇರು ಐಸಲೆ (ಅಹಹಾ!). 2, ತರುಗಳಿಂದ ಗಳಿತವಾದ ದಳಗಳ (ಎಲೆಗಳ) ದಳವಾದ (ದಂಡಾದ) ಆಳಿಗಳು.

XXIII. ಪಾಠ

THE RAINY SEASON

ವರ್ಷ-ಕಾಲ

(ಜೈಮಿನೀ ಭಾರತ)

ಭೂ-ಭುಜ-ಲಲಾಮ, ಕೇಳ್! ಅರ್ಜುನನ ವರ-ತುರಗ-
ಮೊ ಭೀಷಣ ಸೀಮೆಯಂ ತಳೆದು ಬರೆ; ಮುಂದೆ
ಶೋಭಿಸಿತು ವರುಷಾಗಮಂ, ಧರೆಯು ಬೇಸಿಗೆಯ ಬೇಸರಂ ತವೆ
[ತವಿಸುತಾ. ||

[1]ಲಾಭಿಸುವ ಚಾತಕ-ಪ್ರೀತಿಯಂ ಕಂಡ್, ಅಸೂ-
ಯಾ-ಭರವನೆಂಚೆಗಳ್ ತಾಳಲಾರದೆ, ಘನ-
ಕ್ಷೋಭದಿಂದ್ ಓಡಿದವು, ಪರರ ಸಿರಿಯಂ ಸೈರಿಸದ ವಿಜಾತಿಯ
[ಜನೆ[2]ಮೆನೇ. || 230 ||

1, ಮಳೆಯುಳ್ಳ ಮೋಡಗಳು ಬರುವದರಿಂದ ಚಾತಕಕ್ಕೆ ಪ್ರೀತಿ ಹುಟ್ಟುತ್ತದೆ, ಲಾಭ ಬರುತ್ತದೆ; ಯಾಕಂದರೆ ಅದು ಮೋಡದ ನೀರನ್ನು ಮಾತ್ರ ಕುಡಿಯುತ್ತದೆಂಬ ಕಥೆ ಅದೆ. 2, ಜನದಂತೆ (ಜನವು ಎಂಬಂತೆ).

ಎದ್ದವು ಮುಗಿಲ್ಗಳೇಳ್ ದೆಸೆಗಳೊಳ್, ಥರ-ಥರದೊ-
ಳೆದ್ದವು ಗಿರಿಗಳಂತೆ; ದುರ್ಭಿಕ್ಷ-ತಾಪದಿಂದ್
ಉದ್ದೀಪ್ತ ಚಕ್ಷುಗಳ ದಿಕ್ಕುಗಳು ಮಿಂಚಿದವು, ಮಳೆ ತಡ[1]ವರಾರ್?
[ಎನ್ನುತಾ ||
ಉದ್ದಂಡ ರೋಷದಿಂ ದೋಷ-ಭರ ಮರ್ತ್ಯರಂ
ಗದ್ದಿಸುವ ತೆರದಿಂದ ಮೊಳಗಿದವು; ಹಂಸಾಳಿ
ಸಾ[2]ರ್ದವಾಗಸಕೆ; ಚಾತಕ ಶುಕ ದ್ವಿಪ ಕೃಷಿಕ ಶಿಖಿಗಳ್ಗೆ ಮುದ
[ಮೊದವಿತೂ. || 231 ||

1, ತಡವವರು (ತಡಿಸುವವರು). 2, ಸಾರಿದವು.

ವರ ನವಿಲ ಸಾಖ್ಯ-ನೃತ್ಯದಿ ರಾ[1]ಜ-ನಂದನದ
ಧರಣಿಯಂ, ಕುವಲಯಾನಂದಕರವಾದ ಘನ-
ಪರಿಶೋಭೆಯಿಂದ ಚಂದ್ರೋದಯವನಾಲೋಕ-ಚಂಚಲೋದ್ಭಾ
[ಸದಿಂದಾ ||

1, (ಯಾವಾಗಲೂ ಮಳೆಗಾಲಕ್ಕೆ ಸುಖ ಪಡುವ—247ನೇ ಶ್ಲೋಕ ನೋಡಿರಿ— ನೌಲುಗಳಿರುವದೊಂದು) ರಾಜನಂದನದ ಧರಣಿಯನ್ನು (ಪೋಲ್ದು), ಕುವಲಿಯುಗಳ ಆನಂದಕರವಾದ ಘನವುಳ್ಳ ಪರಿಶೋಭೆಯಿಂದ ಚಂದ್ರನ ಉದಯವನ್ನು (ಪೋಲ್ದು), ಆಲೋಕದ (ದೃಷ್ಟಿಗೆ ಬೀಳುವ ಅಥವಾ ದೃಷ್ಟಿಯ) ಚಂಚಲೆಯ ಅಥವಾ ಚಂಚಲದ (ಚಂಚಲೆಯ ಅಂದರೆ ಮಳೆಯಿಂದ ಹುಟ್ಟಿದ ಸಿರಿಯ; ಚಂಚಲದ ಅಂದರೆ ಅಸ್ಥಿರತ್ವದ) ಉದ್ಭಾಸದಿಂದ(ಮತ್ತು) ತರುಣಿಯ (ಬಿಳೇ ಗುಲಾಬೀ ಹೂವಿನ ಅಥವಾ ಹೆಣ್ಣು ಮಗಳ) ಕಟಾಕ್ಷದಿಂದ (ಪ್ರಕಾಶದಿಂದ ಅಥವಾ ಇತ್ತೊ ಅತ್ತೊ ಹುಡುಕಿ ಹೋಗುವ ಕಣ್ಣಿನ ನೋಟದಿಂದ (ಮತ್ತು) ರಾಜಹಂಸಗಳ ಪ್ರಭೆಯ ಹರಣದಿಂದ (ಅಷ್ಟರಿಂದ) ಹರಿಶ್ಚಂದ್ರನ ತಾಪವನ್ನು (ಪೋಲ್ದು).

ತರುಣಿಯು ಕಟಾಕ್ಷದಿಂ ರಾಜಹಂಸ-ಪ್ರಭಾ-
ಹರಣದಿ ಹರಿಶ್ಚಂದ್ರ[1]-ರಾಯ-ತಾಪವನಧಿಕ-
ತರ ವಾಹಿನೀ[2] ಘೋಷದಿಂ ನೃ-ಪನ ಯಾತ್ರೆಯಂ ಪೋಲ್ದು, ಕಾರ್[3]
[ಎಸೆದಿರ್ದುದೂ. || 232 ||

1, ಹರಿಶ್ಚಂದ್ರರಾಯನು ತನ್ನ ಹೆಂಡತಿಯನ್ನು ಕಳಕೊಂಡನು; ಅದರ ಪ್ರಕಾರ ರಾಜಹಂಸಗಳ ಪ್ರಭೆಯು ಹರಣವಾಗಿತ್ತು. ಕಳಕೊಂಡು ಹೋದ ಆ ತರುಣಿಯು ಅವನನ್ನು ದೃಷ್ಟಿಯ ಅಸ್ಥಿರವಾದ ಉದ್ಭಾಸದಿಂದಲೂ ಕಟಾಕ್ಷದಿಂದಲೂ ಹುಡುಕಿ ಕೊಂಡಳು. ಈ ತಾಪಕ್ಕೆ ಆ ಮಳೆಗಾಲದ ಲಕ್ಷಣಗಳು ಹೋಲಿದವು. 2, ವಾಹಿನಿ ಅಂದರೆ ನದಿ ಅಥವಾ ದಂಡು.—ಈ ಶ್ಲೋಕದಲ್ಲಿ ಶ್ಲೇಷಾಲಂಕಾರವು ಅಂದರೆ ಒಂದೇ ವಾಕ್ಯದಲ್ಲಿ ಎರಡು ಅರ್ಥವಿರುವ ಅಲಂಕಾರವು ಕಾಣುತ್ತದೆ. 3, ಇದು ಪೂರ್ಣ ಶ್ಲೋಕದ ಆಖ್ಯೆಯಾಗಿದೆ; ಕಾರು ಹೇಳಿದ್ದನ್ನು ಪೋಲ್ದು (ಅಂದರೆ ಪೋಲಿ), ಎಸೆದು ಇರ್ದುದು.

ಜಾತ ನವ ಶಾಡ್ವಲದ ಸೊಂಪ್ ಇಡಿದೆಸೆವ ನೆಲದ,
ಪೂತ್ ಎಸೆವ ಜಾಜಿಗಳ ವರ-ಕುಟಜ-ರಾಜಿಗಳ,
ಕೇತಕಿಯ ಧೂಳಿಗಳ ಕೆದರುತಿಹ ಗಾಳಿಗಳ, ಲಸದಿಂದ್ರ-ಗೋಪ-
[ಚಯದಾ, ||
ಕಾತ್ ಎಳೆಯ ಮಾವುಗಳ ಬನ-ಬನದ ಠಾವುಗಳ,
ನೂತನ ಸುವಾರಿಗಳನೆಡೆ ಗೊಂಡ ದಾರಿಗಳ[1]
ಭೂ-ತಳದ ಶಿರಿ ಮೆರೆಯೆ, ಮುಗಿಲ್ಗೈದೆ ಮಳೆ ಗರೆಯೆ; ವರುಷ-ಋ
[ತು ಚೆಲ್ವ ಆದುದೂ. || 233 ||

1, ಈ ಸಂಬಂಧವಿಭಕ್ತಿಯೂ ಇದಕ್ಕೆ ಹಿಂದೆ ಇರುವ 5 ಮುಖ್ಯವಾದವುಗಳೂ ಭೂತಳದ ಎಂಬದಕ್ಕೆ ಹೋಗುತ್ತವೆ.

ANOTHER DESCRIPTION OF THE RAINY SEASON

ವರುಷ-ಕಾಲದ ಮತ್ತೊಂದು ವರ್ಣನೆ

(ಭಾರತ)

ಭಾಮಿನಿ-ಷಟ್ಪದಿ (1ನೇ ಶ್ಲೋಕ ನೋಡ ಬೇಕು)

ಒಡ್ಡು ಮೊರದುದು ಮೇಘ-ಘಟೆ; ಬಿಸಿ-
ಲೊಡ್ಡು ಮುರಿದುದು; ಚಂದ್ರ ಸೂರ್ಯರ-
ನೆಡ್ಡವಿಸಿ, ಕರಿ ಡಾಲ ಹಿಡಿದವು ಮುಗಿಲ ಚೂಣಿಗಳೂ; ||
ಖಡ್ಡಿ[1] ತಡವುದೆ ಕಡಲನುಡು-ಗಣ-
ದೊಡ್ಡು ಕಾಣೆನು; ಮುಗಿಲ ಬಾಯಿಗೆ
ಲಡ್ಡುಗೆಗಳಾದವು ಸಮಸ್ತ ಗ್ರಹ ಸು-ತಾರೆಗಳೂ. || 234 ||

1, ಖಡ್ಡಿ ತಡವುದೆ ಕಡಲನ್ನು? ಉಡು ಇತ್ಯಾದಿ.

ಆಳ ಕರೆ! ಕಟಕವನು ಸೂರ್ಯನ
ಮೇಲೆ ಬರ ಹೇಳ್! ಎಂಬ ಮೇಘ-ನೃ-
ಪಾಲಕನ ಡಂಗುರವೊ? ಮೊಳಗುವ ಶಿಡಿಲಿನಬ್ಬರವೋ?- ||
ಆಲಿ-ಕಲ್ಗಳೊ? ಮುಗಿಲ ಮುಂಗುಡಿ
ಯೊಳ ಹೊಯ್ಲಲಿ ಬೀಳ್ವ ತಾರಾ-
ಮಾಲೆಗಳೊ? ಜೀಮೂತ-ಲತೆ ಲಂಬಿಸಿದುದಂಬರವಾ[1]. || 235 ||

1, ಅಥವಾ ಅಂಬರದಿಂದ.

ಮಿಂಚಿದುದು ದೆಸೆಗಳಲಿ; ಗಮನಕೆ
ಮುಂಚಿದವು ಹಂಸಗಳು; ನಭದಲಿ
ಹೊಂಚಿದುದು ಜೀವನಕೆ ಜೀವನ-ವಿರಹಿ-ನಿಕುರುಂ[1]
[ಬಾ. | 236 |

1, ಜೀವನ-ರಹಿತವಾಗಿದ್ದ ನಿಕುರುಂಬ (ಅಂದರೆ ಚಾತಕಗಳು; 230ನೇ ಶ್ಲೋಕ ನೋಡಿರಿ).

ಜನ-ಪ, ಕೇಳ್, ಐ! ಕಾರ್-ಮುಗಿಲ ಮುಂ-
ಬನಿಗಳೊಳು ವಹಿಲದಲಿ[1], ಕೇರಳ
ಜನಪದದ ತೌಳವದ ಕೊಂಕಣ ವಿಷಮ-ವೀಥಿಯಲೀ ||
ಜಿನುಗಿನಲಿ ಬಹು ಮಳೆಗಳಲಿ ನೆನ-
ನೆನದು, ಸಾಗರ-ತೀರದಲಿ ಬಂ-
ದನು ಕಿರೀಟಿ, ವಿಚಾರಿಸುತಲಾ ದ್ವಾರಕೀ-ಪುರವಾ. || 237 ||

1, ವಹಿಲದಲ್ಲಿ (ಬೇಗದಲ್ಲಿ); ಇದಕ್ಕೆ ನಡೆಯಲಾರಂಭಿಸಿ ಎಂಬಂಥಾ ಒಂದು ಕ್ರಿಯಾಪದವನ್ನು ಭಾವಿಸಿ ಕೊಳ್ಳ ಬಹುದು, ಅಥವಾ ಆ ಮುಂಬನಿಗಳೊಳು ಬೇಗದಲ್ಲಿ ನೆನ-ನೆನದು, ಕೇರಳ ---- (ಮತ್ತು) ನೆನ-ನೆನದು ಎಂತ ಹೇಳ ಬಹುದು.

AUTUMN

ಶರತ್-ಕಾಲ

(ಜೈಮಿನೀ ಭಾರತ)

ವಾರ್ಧಕ-ಷಟ್ಪದಿ (140ನೇ ಶ್ಲೋಕ ನೋಡ ಬೇಕು)

ತುರಗಂ ನಡೆದುದು ಮಣಿ-ಪುರದಿಂ ಶರದ್-ದಿನದೊ[1]-
ಳರಸಂಚೆ ಸಂಚರಿಸ ತೊಡಗಿದವು; ನದಿಗಳು-
ಬ್ಬರವುಡುಗಿ ತಿಳಿದು ಪರಿದವು; ಬೆಳೆತುದಾಗಸಂ[2]; ಮೆರದವುಡು-
[ರಾಜಿ; ಕೂಡಾ ||
ತರಣಿ ಶಶಿಗಳ ಕಿರಣವೈದೆ ನಿರ್ಮಲವಾದ[3]-
ವರವಿಂದದೆಲರನೆರಸಿದವಳಿಗಳೆಲ್ಲಿಯುಂ[4],
ಪರದೆಯುಂ ರಂಗದ ಸ್ಥಳದಿಂದ ಶಳದಂತೆ, ಗಿರಿ-ನಿಕರಮೊಸೆದಿರ್ದು
[ದೂ. || 238 ||

1, ಶರದ್-ದಿನದೊಳು; ಅರಸು-ಅಂಚೆ (ರಾಜ-ಹಂಸೆ) ಇತ್ಯಾದಿ. 2, ಬೆಳೆಯಿತು, ಬೆಳಗಿತು. 3, ಆದವು; ಅರವಿಂದದ ಇತ್ಯಾದಿ. 4, ಅರಸಿದವು ಅಳಿಗಳು; ಎಲ್ಲಿಯುಂ, ಇತ್ಯಾದಿ.

ಕರ-ಕರದ ತಮ್ಮ ಮೆಳ್-ವನಿಗಳಿಂ ಶಶಿ-ಕಾಂತ—
ದೊರತೆ ಮೊನಲುರೆ ವೆಗ್ಗಳಿಸೆ[1] ನಾಚಿ ಬೆಳ್ಪು ಆದ
ತೆರದಿಂ ಮುಗಿಲ್ಗಳಿರೆ, ಬೆಳ್-ದಿಂಗಳೊಪ್ಪಿದುದು ಬೆಳಸು[2]ಗಳ ಪ
[ಣ್ಣ-ದೆನೆಗಳಾ ||
ಮಿರುಪ ಹೊಂ-ಬಣ್ಣದ ಹರಿದ್ರ-ಲೇಪನದಿಂದ
ಮೆರೆವ ಪೈ-ಶಿರಿಯ ಮಾಂಗಲ್ಯದಿಂ ಭೂ-ಮಾತೆ
ನೆರೆ ಶೋಭಿಸುವ ಶರತ್-ಕಾಲದೊಳ್ ತಿರುಗಿತರ್ಜುನ-ಹಯಂ
[ಧರೆಯ ಮೇಲೇ. || 239 ||

1, ವೆಗ್ಗಳಿಸಲಿಕ್ಕೆ (ತಮಗಿಂತ ಹೆಚ್ಚಾದ್ದಕ್ಕೆ). 2, ಇದನ್ನು ಹಿಡಿದು ಶೋಭಿಸುವ ಎಂಬದರ ವರೆಗೆ ಭೂ-ಮಾತೆ ಎಂಬದು ಅಖ್ಯೆ ಆಗಿದೆ (ಭೂ-ಮಾತೆ ಅಂದರೆ ತಾಯಿಯಾದ ಭೂಮಿ; ಇದು ಬೆಳೆಗೆ ಗರ್ಭವಾಗಿರುವದರಿಂದ ಕಾವ್ಯದಲ್ಲಿ ಆ ಹೆಸರು ತಕ್ಕದ್ದು).

XXIV. ಪಾಠ

A BEAUTIFUL COUNTRY

ಒಂದು ಚಲೋ ಶೀಮೆಯ ವರ್ಣನೆ

(ಜೈಮಿನೀ ಭಾರತ)

ಭೂ[1]-ವಧೂ-ರಮಣ, ಕೇಳ್ ಐ, ಮುಂದೆ ನಡೆಸುವ ಕ-
ಥಾ-ವಿಸ್ತರವನಿನ್ನು ಪಯಣ-ಗತಿಯಿಂದ ಭ-
ದ್ರಾವತೀ-ದೇಶವಂ ಪೊಕ್ಕರನಿಲಜ[2], ವೃಷಧ್ವಜ, ಘಟೋತ್ಕಚ-
[ತನುಜರೂ. | 240 |

1, ಭೂಮಿಯೆಂಬ ವಧುವಿನ ರಮಣನೇ ಅಂದರೆ ರಾಜನೇ. 2, ಅನಿಲಜನು (=ಭೀಮನು), ವೃಷಧ್ವಜನು ಮತ್ತು ಘಟೋತ್ಕಚನ ಮಗನು (=ಮೇಘನಾದನು) ಎಂಬವರು.

ಎಲ್ಲಿ[1]ಯುಂ ಪರಿವ ಪೇರ್ ದೊರೆಯಿಂದ, ಕೆರೆಯಿಂದ-
ಲೆಲ್ಲಿಯುಂ ಕುಸುಮದಾಗರದಿಂದ, ಸರದಿಂದ-
ಲೆಲ್ಲಿಯುಂ ರತ್ನ-ಮಯದಿಳೆಯಿಂದ, ಬೆಳೆಯಿಂದ, ಮಣಿ[2]-ಕೃತಕ-
[ಶೈಲದಿಂದಾ, ||

1, ಎಲ್ಲಿಯಾದರೂ. 2, ಮಣಿಯಿಂದ ಕೃತಕವಾದ ಶೈಲದಿಂದ.

ಎಲ್ಲಿಯುಂ ಸುೞಿವ ಗೋ-ವ್ರಜದಿಂದ, ಗಜದಿಂದ-
ಲೆಲ್ಲಿಯುಂ ಕತ್ತುರಿಯ ಮೃಗದಿಂದ, ಖಗದಿಂದ-
ಲೆಲ್ಲಿಯುಂ ವಿರಚಿತ ಭವನದಿಂದ, ಜನದಿಂದಲೆಂ ನಾಡ ಸಿರಿ[1] ಮೆರ
[ದುದೂ. || 241 ||

1, ಇದು ಆಖ್ಯೆಯಾಗಿದೆ.

ಅಂಚೆ-ವಿಂಡ್ ಆಡದ ಕೊಳಂ, ಕೊಳಂಗಳೊಳಗೆ ಪ-
ೞಂಚಿ ಸುೞಿಯದ ಗಾೞಿ, ಗಾೞಿಗಳ ಬೞಿ ವಿಡಿದು
ಸಂಚರಿಸದೆಳೆ ದುಂಬಿ, ದುಂಬಿಗಳ ಬಿಡಯುಕಿಂಪ್ ಎನಿಸದೆೞ್ಚ ಅಲ
[ರೆಲರ್ಗಳಾ ||
ಗೊಂಚಲೆರಗಿಸದ ಲತೆ[2], ಲತೆಗಳೆಡರದ ತಳ್ಕಿ-
ನಿಂ ಚಿಗುರದೆಂ ಮಾವು, ಮಾವುಗಳ ಚೆಂ-ದಳಿರ್
ಮಿಂಚದ ಬನಂ, ಬನಗಳಂ ಬಳಸದೂರ್ಗಳಿಲ್ಲ[1]ದೆಡೆಯಿಲ್ಲ್[3] ಆವಿಳೆ
[ಯೊಳೂ. || 242 ||

1, ಇಲ್ಲದ ಎಡೆ ಎಂಬದು ಮುಖ್ಯ ಆಖ್ಯೆಯಾಗಿದೆ. ----- ಕೊಳಂ, ---- ಗಾೞಿ, ---- ದುಂಬಿ, ---- ಅಲರು, ---- ಲತೆ, ---- ಮಾವು, ---- ಬನಂ, ---- ಊರ್ಗಳು ಎಂಬವುಗಳು ಇಲ್ಲದ ಎಂಬದಕ್ಕೆ ಆಖ್ಯೆಯಾಗಿವೆ. 2, ಲತೆಗಳು ಅಡರದ (ಮತ್ತು) ತಳ್ಕಿನಿಂದ ಚಿಗುರದ ಆ ಮಾವು. 3, ಇಲ್ಲ ಆ ಇಳೆಯೊಳು.

ಬೆಳೆಯದ ಪೊ[1]ಲಂಗಳಂ, ಬೆಳ್-ದಾವರೆಗಳೆಲರ್
ದಳೆಯದ ಕೊಳಂಗಳಂ, ಮ[2]ಣಿ-ಶಿಲಾ-ರೋಚಿಯಿಂ
ಪೊಳೆಯದೆಚಲಂಗಳಂ ತರುಣಾರುಣ-ಪ್ರಭೆ ಚೆಂ-ಮುಖಂ ನಗು
[ವೆಂತ್ ಇರೇ, ||

1, ಇದು ಮುಂತಾದ ಮುಖ್ಯ ದ್ವಿತೀಯಾವಿಭಕ್ತಿಗಳನ್ನು ಅರಸಲು ಎಂಬದಕ್ಕೆ ಹಾಕಬೇಕು. 2, ತರುಣವಾದ ಅರುಣದ ಪ್ರಭೆಯು ಚೆಂಮುಖವು ನಗುವ ಹಾಗೆ ಇರಲಾಗಿ ಮಣಿಯುಳ್ಳ ಶಿಲೆಗಳ ರೋಚಿಯಿಂದ ಪೊಳೆಯದ ಅಚಲಂಗಳಂ.

ತಳೆಯದ ಬನಂಗಳಂ, ಕಿವಿಯೊಳಿಡಿದೊಸರಂ
ಕಳೆಯದ ಸ್ವನಂಗಳಂ, ಮನಕೆನವರತ ಸುಖಂ
ಮೊಳೆಯದ ಜನಂಗಳಂ ಮುಳಿದರಸಲಾಂ[1] ಕಾಣೆನೊ ಮಹೀ-ಮಂಡ
[ಲದೊಳೂ. || 243 ||

1, ಆಂ ಅಂದರೆ ನಾನು.

ಉರ್ವರೆಯ ಶಾಲಿಗಳ ಪಾಲ್-ದೆನೆಗೆ ನಭದಿಂ ಮು-
ಗುರ್ವ ಗಿಳಿ-ವಿಂಡುಗಳನುಲಿಯಿಂದ ಪಾಮರಿಯ[1]-
ರೆರ್ವಿಸಿದೊಡಿರದೆ ಬಾಂದಳಕೆ ಮಗುಳೇಳ್ವ ಪೋಲ್, ಕಲಮಂಗಳೆ
[ಕ್ಕೆಲದೊಳೂ ||
ಕೊರ್ವಿ ನಳ-ನಳಿಸಿ ನಿಳ್ದ ಉರೆ ಬೆಳದ ರಸದಾಳಿ-
ಗರ್ವುಗಳ ಸೋಗೆಗಳ ಪಸುರು[2] ಪೊಗರಾಗಸಕೆ
ಪರ್ವುತಿಪ್ಪ ಆ ನಾಡೊಳೆಲ್ಲಿಯುಂ ದಾರಿಗರ ಕಣ್ಗೆ ಕೌತುಕಮೊದು
[ದೂ. || 244 ||

1, ಪಾಮರಿಯರು ಗಿಳಿ-ವಿಂಡುಗಳನ್ನು ಎರ್ವಿಸಿದೊಡೆ (ಎಬ್ಬಿಸಿದರೆ), ಇವುಗಳು ಇರದೆ ಇತ್ಯಾದಿ. 2, ಪಸುರಾದ ಪೊಗರು ಆಗಸಕ್ಕೆ ಪರ್ವುತ್ತಿಪ್ಪ ಆ ನಾಡೊಳು ಎಲ್ಲಿಯೂ.

ತಂಬ್-ಎಲರ ಸೊಗಸಿಂಗೆ ತಲೆ ದೂಗುವಂತೆ, ತಳಿ-
ದಂಬುಜದ ಪರಿಮಳಕೆ ಶಿರವನೊಲೆವಂತೆ, ಮರಿ-
ದುಂಬಿಗಳ ಗಾನಕ್ಕೆ ಕೊರಳನೊಲದಾಡುವಂತ್ ಒಯ್ಯೊಯ್ಯನೊಲ[1]
[ದಾಡುವಾ, ||
ಪೊಂ-ಬಣ್ಣಮೆಸೆವ ಕಳಮ-ಸ್ತ್ರೀಯ ಪರಿಚರ್ಯ-
ಮಂ ಬಿಡದೆ ಮಾಳ್ಪ ಕೆಳದಿಯರೆನಲ್ ಕೀರ-ನಿಕು-
ರುಂಬಮಂ ಸೋವಲಿಕ್ಕ್ ಅಲ್ಲ್ಯ ಇರ್ದ ಪಾಮರಿಯರೊದಗಿದವ
[ರಿಗೆ ತೋರ್ಪರೂ[2]. || 245 ||

1, ಹೇಳಿದ ಪ್ರಕಾರವಾಗಿ ಒಲದಾಡುವ (ಮತ್ತು) ಪೊಂಬಣ್ಣವು ಎಸೆಯುವ ಕಳಮವೆಂಬ ಸ್ತ್ರೀಯ ಪರಿಚರ್ಯವನ್ನು ಬಿಡದೆ ಮಾಡುವ ಕೆಳದಿಯರ ಹಾಗೆ (ಇರುವ) ಕೀರಗಳ ನಿಕುರುಂಬವನ್ನು (ಆ ಕೀರಗಳು ಕಳಮದ ಗೆಳತಿಯರು; ಅವು ಗುಂಪುಗುಂಪುಗಳಾಗಿ ಬಂದು, ತಿನ್ನಲಿಕ್ಕೆ ಬೆಳೆಯ ಮೇಲೆ ಬೀಳುವವು). 2, ತೋರುವರು.

A BEAUTIFUL GARDEN

ಚಂದವಾದ ತೋಟ

ತರುಣ-ಪಲ್ಲವದ ವಿಸ್ತಾರದಿಂ, ನೇರದಿಂ
ಸ್ವರ ಗೈವ ಕಲ್[1]-ಪಿಕೋಚ್ಚಾರದಿಂ, ಸಾರದಿಂ
ಸುರಿವ ಪೂ-ದೊಂಗಲ ತುಷಾರದಿಂ, ಸ್ವೈರದಿಂ ಸಲ್ಲಾಪ ಕೆಳಸಿ
[ಬಳಸೀ ||
ಮೊರೆವ ತುಂಬಿಗಳ ಝೇಂಕಾರದಿಂ, ತೋರದಿಂ
ಪರಿಪಕ್ವಮಾದ ಫಲ-ಭಾರದಿಂ, ಕೀರದಿಂ
ಕರಮೆಸವುತಿಪ್ಪ ಸಹಕಾರದಿಂ ತೀರ[2]ದೆಲ್ಲ್ಯ ಎಲ್ಲಿಯುಂ ನಂದನ
[ದೊಳೂ. || 246 ||

1, ಕಲವುಳ್ಳ ಪಿಕದ ಉಚ್ಚಾರದಿಂ. 2, ತೀರದು, ತೀರುವದಿಲ್ಲ (ಆಖ್ಯೆ ಇದರಲ್ಲೇ ಅದೆ).

ಮಿಗೆ ಮುತ್ತಿ ಮೊರೆವ ತುಂಬಿಗಳ ತಿಂಥಿಣಿಯನೇ
ಮುಗಿಲೆಂದು, ಸುಳಿವ ಗಾಳಿಗೆ ಬಿಡದೆ ನರ್ತಿ[1]ಪ ಲ–
ತೆಗಳ ಕುಡಿ-ಗೊನರ ನುಣ್-ಬೊಗರನೇ ಮಿಂಚ್ ಎಂದು, ಸೊಗ
[ಯಿಸುವ ಪೂಗಳಿಂದಾ ||
ಪೊಗುವ ಮಕರಂದ-ಬಿಂದುಗಳನೇ ಮಳೆಗಳೆಂದ್,
ಒಗೆವ ಸಂತಸದೊಳಾವ[2]ಗಮಿದ್ದು ಕುಣಿವ ಸೋ[3]–
ಗೆಗಳ ಬಳಗಂಗಳಂ, ಮಗನೆ, ಕಂಡ್ಯ ಐ, ತಳಿತ ನ[4]ಗರೋಪವ
[ನದೆಡೆಯೊಳೂ? || 247 ||

1, ನರ್ತಿಸುವ. 2, ಯಾವಾಗಲೂ. 3, ಸೋಗೆಗಳ ಅಂದರೆ ಶಿಖಿಗಳ; ಹಿಂದಿನದೆಲ್ಲಾ ಇವಕ್ಕೆ ವಿಶೇಷಣವಾಗಿ ಹೇಳಿ ಅದೆ. ಮಳೆಗಾಲಕ್ಕೆ ಮೆಚ್ಚುವ (231ನೇ ಶ್ಲೋಕ ನೋಡಿರಿ) ನವಿಲುಗಳು ಹೇಳಿದ ಕಾರಣಗಳಿಂದ ಒಗೆವ (ಹುಟ್ಟುವ) ಸಂತೋಷದೊಳಿದ್ದು ಕುಣಿಯುತ್ತವೆ. 4, ನಗರದ ಉಪವನದ.

ಕುದ್ದಾಲ-ಹತಿಯನುರೆ ತಾೞ್ದ್[1] ಎಂಮನಿನ್ನೆಗಂ[2]
ಮುದ್ದು ಗೈದ್ ಈ ಮಾತೆ ಬೆಳೆಯಿಸಿದಳೆಂದು, ತುರು—
ಗಿದ್ದ ತನಿ ವಣ್ಗಳಿಂದ್ ಎಸೆವ ಪೇರ್ ಗೊನೆಗಳಂ ಸಲೆ ಸಮರ್ಪಿಸ
[ಲಾಶಿಸೀ, ||
ಎದ್ದ್ ಇರದೆ, ಬಾಗಿದವು ಕದಳಿಗಳ್[3] ಧರಣಿಗೆನ—
ಲಿದ್ದಪರೆ[4] ಮರದು ಮಮತಾರ್ಥಮಂ ಮಾಡಿದರ[5]—
ನುದ್ಧಾಮ ಗುಣಮುಳ್ಳ ಜೀವಿಗಳ್? ತನುಜ, ನೋಡ್! ಎಂದನಾ
[ಭೀಮನೆಂದೂ. || 248 ||

1, ತಾಳಿ. 2, ಇನ್ನೆಗೂ, ಈ ವರಿಗೂ. 3, ಕದಳಿಗಳು ಧರಣಿಗೆ ಎಂನಲು (ಎಂಬ ಹಾಗೆ); ಕದಳಿಗಳು ಎಂಬದು ಹಿಂದಿನದಕ್ಕೆ ಆಖ್ಯೆಯಾಗಿದೆ; ಅವು ಭೂಮಿಯೆಂಬ ಉಪಕಾರ ಮಾಡಿದ ಮಾತೆಗೆ ತಮ್ಮ ಗೊನೆಗಳನ್ನು ಕೊಡಲಿಕ್ಕೆ ಬಾಗಿದವು; ಅದರಂತೆ ಉದ್ಧಾಮ ಗುಣವುಳ್ಳ ಜೀವಿಗಳು ತಮಗೆ ಪ್ರೀತಿ ಮಾಡಿದವರನ್ನು ಮರತು ಇರುವರೇ? (ಮರತು ಬಿಡುವದುಂಟೇ?) 4, ಇರುವವೇ (115ನೇ ಶ್ಲೋಕದಲ್ಲಿರುವ 'ಪೋದಪ್ಪುದಂ' ಎಂಬದನ್ನು, 179ನೇದರಲ್ಲಿರುವ 'ಆದಪುದು' ಎಂಬದನ್ನು ಸರಿ ನೋಡಿರಿ). 5, ಮಾಡಿದವರನ್ನು.

ಕಡು-ಗೆಂಪ್ ಎಸೆವ ತಳಿರ ತನಿ-ಗೆಂಡಮಂ ಕಲಕಿ[1],
ನಡೆದು, ಮೊನೆ-ಮುಗುಳ ಶಸ್ತ್ರಂಗಳಂ ಪಾಯ್ದು, ಮಾ-
ಮಿಡಿಯ ರಾಜಿಪ[2] ವಜ್ರ-ಮುಷ್ಟಿಯಂ ಪಿಡಿದು, ಲತೆಗಳ ಕೊನರ
[ಚಾಟಿಯಿಂದಾ ||
ಬಡಿದು, ಕೋಗಿಲೆಯ ನಿಡು ಸರದ ಬೊಬ್ಬೆಯೊಳಾಲ್ದು,
ಬಿಡದೆ, ಬನ-ರಾಣಿಯೋಲಗದೊಳುತ್ಸವದಿಂದ—
ಲಡಿಗೆಡಿಗೆ ತೂಣ-ಗೊಂಡವನೆಂತ್ ಎಸೆವ ಮಂದ ಮಾರುತವ
[ನೋಡ್! ಎಂದನೂ. || 249 ||

1, ಕಲಕಿ, ನಡೆದು, ಪಾಯ್ದು, ಪಿಡಿದು, ಬಡಿದು, ಆಲ್ದು (=ಆಲಿ), ಬಿಡದೆ, ಎಸೆವ ಎಂಬ ಶಬ್ದಗಳು ಮಾರುತವ ಎಂಬದಕ್ಕೆ ವಿಶೇಷಣವಾಗಿವೆ. 2, ರಾಜಿಸುವ.

ನಿಘಂಟು.

ಅ

ಅನಿತೆ=ಅಷ್ಟೇ 140
ಅನಿಬರು=ಅಷ್ಟು ಜನರು 92
ಅನು=ಸಮಯ 33, 95
ಅನುಚರ=ದೂತ 40
ಅನುಮತಿಸುವದು=ಮೆಚ್ಚುವದು 110
ಅನುಮಾನ=ಬುದ್ಧಿಗನುಸಾರವಾದ ಆಲೋಚನೆ, ಸಂಶಯ 40, 46
ಅಪದ-ಗಾಮಿ=ಕಾಲಿಲ್ಲದೆ ನಡೆಯುವಂಥವ 212
ಅಪರ=ಬೇರೆ, ಅತ್ತಾಗಿರುವ 208
ಅಪ್ಪಳಿಸುವದು=ಹೊಡೆಯುವದು 91
ಅಬ್ಜ=ತಾವರೆ 207
ಅಬ್ಬರ=ಕೂಗು, ಕೂಗುವಿಕೆ, ಬಾಹುಳ್ಯ 178, 235
ಅಬ್ಬರಿಸುವದು=ಕೂಗುವದು, ದೊಡ್ಡ ಶಬ್ದ ಮಾಡುವದು, ಬೊಗಳುವದು 45, 88, 177
ಅಭಿಲಾಷೆ=ಆಶೆಗಾರ 12
ಅಭೇದ್ಯ=ಅಸಾಧ್ಯ, ಕೂಡದಂಥಾದು 118
ಅಭ್ಯುದಯ=ಹುಟ್ಟುವಿಕೆ, ಉದಯ
ಅಭ್ರ=ಆಕಾಶ 221
ಅಮಿತ=ಮಿತಿಯಿಲ್ಲದ, ಮೇರೆಯಿಲ್ಲದ 72
ಅಮಿತ್ರ=ಶತ್ರು 186
ಅಮೃತ=ಹಾಲು, ಬಿಳೇ ಬಣ್ಣ 212
ಅಮೃತಾನ್ನ=ಅಮೃತದ ಅನ್ನ 105
ಅರವಿಂದ=ತಾವರೆ 238
ಅರಸುವದು=ಹುಡುಕುವದು 174, 227
ಅರಳು=ದಾಸಾಳು, ಕೆಂಪು ತಾವರೆ 162
ಅರಿ=ಶತ್ರು 88, 92, 94, 116, 125
ಅರುಣ=ಸೂರ್ಯ 243
ಅರೆ=ಬಂಡೇ ಕಲ್ಲು 124
ಅರ್ಣವ=ಸಮುದ್ರ 29
ಅರ್ಥ=ದ್ರವ್ಯ 65
ಅರ್ಬುದ=ಹತ್ತು ಕೋಟಿ 185
ಅರ್ಭಕ=ಶಿಶು 137
ಅಲರ್, ಅಲರು=ಹೂವು 208, 224, 238, 242
ಅವಕೂರ=ಅನ್ನವಿಲ್ಲದೆ ಹೋಗುವಂಥ 97
ಅವಗಡಿಸುವದು=ಮೇಲ್ಬೀಳುವದು, ಮುತ್ತುವದು 221, 229
ಅವಗಾಹಿಸುವದು=ಹಿಡುಕೊಳ್ಳುವದು 169
ಅವತರಿಸುವದು=ಕೆಳಗಿಳಿಯುವದು 46
ಅವಧಿ=ಅಡ್ಡಿ, ಮೇರೆ 229
ಅವನಿ=ಭೂಮಿ 42, 46, 86, 92, 194
ಅವನಿ-ಪ=ರಾಜ 42, 90
ಅವಯವ=ಶರೀರದ ಅಂಗ
ಅವಲೋಕ=ದೃಷ್ಟಿ 212
ಅಶೋಕ=ಮುಳ್ಳುಮುತ್ತುಗ 162, 215, 224
ಅಶೋಕೆ=ಅಶೋಕ 215, 224
ಅಶ್ವ=ಕುದುರೆ 44
ಅಶ್ವಾವಳಿ (ಅಶ್ವ-ಆವಳಿ) =ಕುದುರೆಗಳ ಆವಳಿ 44
ಅಷ್ಟ=ಎಂಟು 74
ಅಸದಳ=ಅಸಾಧ್ಯ, ಕೂಡದ್ದು 204
ಅಸಿ=ಕತ್ತಿ 189
ಅಸಿತ=ಕಪ್ಪು 200, 224
ಅಸು=ಜೀವ 38, 64, 94, 181
ಅಸುವಳಿಯುವದು (ಅಸುವು ಅಳಿಯುವದು) =ಸಾಯುವದು 64
ಅಸುವಾಸನಾ(-ನೆ)=ಸುವಾಸನೆಯಿಲ್ಲದ್ದು 219
ಅಸೂಯಾ (-ಯೆ) =ಹೊಟ್ಟೆಕಿಚ್ಚು 230
ಅಸ್ತ್ರ=ಹಾರಿಸುವ ಆಯುಧ 51, 87
ಅಸ್ತಾಚಲ (ಅಸ್ತ-ಅಚಲ) =ಅಸ್ತಮಯದ ಪರ್ವತ 56
ಅಹಿ=ಸರ್ಪ 171, 222
ಅಹಿತ=ಶತ್ರು 85, 190
ಅಳವು=ಸಾಮರ್ಥ್ಯ, ತ್ರಾಣ 34
ಅಳಿ=ಭ್ರಮರ, ತುಂಬಿ 180, 200, 209, 238
ಅಳಿ-ಕುಂತಳ=ಭ್ರಮರಕ್ಕಿರುವಂಥ ಕೂದಲು 180
ಅಳಿದುಳಿಯುವದು=ಕೆಟ್ಟರೂ ಜೀವದಿಂದುಳಿಯುವದು, ಅಡಗಿ ಹೋಗಿ ತಿರಿಗಿ ಹುಟ್ಟುವದು 201

ಅಳಿಯಾಶೆ=ವ್ಯರ್ಥವಾದ, ನೆಲೆಯಿಲ್ಲದ ಆಶೆ 41
ಅಳಿಯುವದು=ನಾಶವಾಗುವದು, ಸಾಯುವದು 7, 35
ಅಳುಪುವದು=ಕೇಡು ಮಾಡುವದು 108
ಅಕ್ಷ=ಪಗಡೆ 47
ಅಕ್ಷಯ=ಬರೇದು ಆಗದ 84

ಆ

ಆಕರ=ಗುಂಪು 202
ಆಕೀರ್ಣ=ತುಂಬಿದ್ದು 201
ಆಗತ=ಕೂಗಿ ಬಂದ 155
ಆಗಮನ=ಹತ್ತರ ಬರುವದು 72
ಆಗರ=ಸ್ಥಳ 241
ಆಗಸ=ಆಕಾಶ 209
ಆಜಿ=ಓಟ, ಜಗಳ, ಬೈದಾಟ 193
ಆಣ್ಮ=ರಾಜ 117
ಆತುರ=ಬಹಳ ಆಶೆ 115
ಆತ್ಮ-ಸ್ತೋತ್ರ (-ಸ್ತುತಿ)=ತನ್ನನ್ನೇ ಸ್ತೋತ್ರ ಮಾಡಿ ಕೊಳ್ಳುವದು 113, 141
ಆದರ=ಪ್ರೀತಿ, ದಯೆ 82, 83
ಆನಂದಕರ=ಆನಂದ ಉಂಟು ಮಾಡುವಂಥ [232
ಆನನ=ಮುಖ 173
ಆನುವದು=ಇಡುವದು, ಬಿಗಿದು ಕೊಳ್ಳುವದು, ತಕ್ಕೊಳ್ಳುವದು 172, 209
ಆಪ-ಗ=ನೀರು ಹೋಗುವಂಥಾದ್ದು, ಹೊಳೆ, ಹಳ್ಳ 173
ಆಪ್ತ=ಪ್ರಿಯ 38
ಆಮಂತ್ರ=ಭೇಟಿ, ದರ್ಶನ 152
ಆಯತ=ವಿಸ್ತಾರವಾಗಿ ಹಾಕಿರುವಂಥಾದು, ವಿಸ್ತಾರವಾದಂಥ 123, 168
ಆಯತ್ತ=ಸಿದ್ಧ, ಪ್ರಾಪ್ತ 140
ಆಯಸ=ಆಯಾಸ 38
ಆಯುವದು=ಆರಿಸಿ ಕೊಳ್ಳುವದು 119
ಆಯುಷ್ಯ=ಮನುಷ್ಯನ ಜೀವದ ಕಾಲ 30
ಆರಡಿ=ಆರು ಕಾಲಿನದು, ಭ್ರಮರ 206, 208
ಆರಾಜಿಸುವದು=ತೋರುವದು, ಪ್ರಕಾಶಿಸುವದು 173, 200
ಆರುವದು=ಆಲುವದು, ಕೂಗುವದು 178
ಆರೈಯುವದು=ನೋಡಿ ಹಿಡು ಕೊಳ್ಳುವದು 86
ಆರೈಸುವದು=ಆಶಿಸುವದು 68
ಆರ್, ಆರು=ಯಾರು 117
ಆರ್ಭಟಿ=ದೊಡ್ಡ ಶಬ್ದ 196
ಆರ್ಯನು=ಮಾನಸ್ಥನು, ಆರ್ಯಕುಲದವನು 143
ಆಲಲಿತ=ಚಂದವಾದ 151
ಆಲಾಪ=ಸಂಭಾಷಣೆ, ಹಾಸ್ಯ 201
ಆಲಿಂಗಿಸುವದು=ಕೂಡುವದು, ಹಿಡಿಯುವದು 162
ಆಲಿ-ಕಲ್ಲು=ಆನೆಕಲ್ಲು 235
ಆಲುವದು=ಆರುವದು, ಕೂಗುವದು 249
ಆಲೋಕ=ದೃಷ್ಟಿ, ಪ್ರಕಾಶ 211
ಆಲ್ದಿ=ಆಲಿ, ಕೂಗಿ 249
ಆವರಣ=ಮುಚ್ಚುವಿಕೆ, ಮರುಳು ಮಾಡುವಂಥಾದು 15
ಆವರ್ತ=ಸುಳಿದಾಡುವ ನೀರಿನ ಸ್ಥಳ 123
ಆವಳಿ=ಸಾಲು, ಸಮೂಹ 1, 26
ಆವಾಸ=ವಾಸಸ್ಥಳ 121
ಆವು=ಆಕಳು, ದನ 140
ಆಶ್ರಮ=ಋಷಿಗಳ ವಾಸಸ್ಥಳ 38
ಆಸಕ್ತ=ಮನಸು ಅಂಟುವವ, ಮನಸು ಕೊಟ್ಟವ 7
ಆಸರ=ಆಯಾಸ
ಆಸರು=ಆಯಾಸ 228, 243
ಆಸಾರಕ=ಝಳಪಿಸುವಿಕೆ 88
ಆಸುರ=ಬಹಳ ಘೋರವಾದ ರೀತಿ 93, 170
ಆಸ್ಥಾನ=ರಾಜಸಭೆ 127
ಆಸ್ಪದ=ಸ್ಥಳ, ನೆಲೆಗಟ್ಟು, ಕೆಲಸ 19
ಆಸ್ಪದನು=ಹತ್ತರ ಹೋಗುವವನು, ಪ್ರೀತಿ ಮಾಡುವವನು 8

ಆಹವ=ಯುದ್ಧ 185, 190
ಆಳ್ತನ=ಅರಸುತನ, ದೊಡ್ಡಸ್ತಿಕೆ 190
ಆಳ್ದ=ಅರಸು, ಪತಿ 190

ಇ

ಇಂಗಿತ=ಗುಟ್ಟು, ಗೊತ್ತು 100
ಇಂತ್, ಇಂತು=ಹೀಗೆ 43
ಇಂದು=ಚಂದ್ರ 212
ಇಂದ್ರ-ಗೋಪ=ಮಿಂಚುಹುಳ 233
ಇಂದ್ರ-ಚಾಪ=ಮಳೆಬಿಲ್ಲು 200
ಇಂದ್ರ-ಜಾಲ=ಮಾಯೆ, ಮಾಟ 123
ಇಂಪು=ಚಂದ 217
ಇಕ್ಕಡಿ=ಎರಡು ತುಂಡು 175
ಇಕ್ಕೆ=ಸ್ಥಳ 121, 174, 175
ಇಕ್ಕೆಲ=ಎರಡು ಕಡೆ 203, 244
ಇಕ್ಕೊ=ಇಗೋ 73
ಇಟ್ಟಣಿಸುವದು=ಗುಂಪಾಗಿರುವದು, ಬಹಳ ವಾಗಿರುವದು 166
ಇಡಿಕಿರಿಯುವದು=ಗುಂಪು ಗುಂಪಾಗಿರುವದು 150, 195
ಇಡಿಯುವದು=ಬೀಳುವದು, ಕೂಡಿ ಬರುವದು, ಗುಂಪಾಗಿರುವದು, ತುಂಬುವದು 176, 193, 199, 206, 209, 220, 243
ಇತ್ತಂಡವೂ=ಎರಡು ಕಡೆಯಲ್ಲಿಯೂ 179
ಇತ್ತು=ಕೊಟ್ಟು (ಈವುವದು=ಕೊಡುವದು) 1, 9, 48, 80
ಇದ್ದಲು=ಇದ್ದಲಿ 165
ಇನ=ಸೂರ್ಯ 219
ಇನಿಯ=ಪ್ರಿಯ, ಗಂಡ 181
ಇಪ್ಪ=ಇರುವ 153, 195
ಇರವು=ಇರುವಿಕೆ, ಸ್ಥಿತಿ 128
ಇರಿತಕಾರ=ಹೊಡೆಯುವವ, ತಿವಿಯುವವ 92
ಇರಿಯುವದು=ಹಾಕುವದು, ಹೊಡೆಯುವದು, ತಿವಿಯುವದು 86, 87, 125, 192
ಇರಿಸುವದು=ಇರ ಮಾಡುವದು, ಇಡುವದು 72
ಇರುಬೆ=ಸಮೂಹ 178
ಇಳೆ=ಭೂಮಿ, ನೆಲ 44, 46, 130, 242

ಈ

ಈಡ್, ಈಡು=ಸಮಾನ, ಸರಿ 124, 144
ಈರ್ವರು=ಇಬ್ಬರು 179
ಈವುವದು=ಕೊಡುವದು 1, 9, 136
ಈಶ=ಆಳುವವ, ಕರ್ತ 78
ಈಕ್ಷಿಸುವದು=ನೋಡುವದು 195

ಉ

ಉಗಿಯುವದು=ಹಾರುವದು, ಹರಿಯುವದು, ಹರಿದು ಬಿಡುವದು, ತೆಗೆದು ಬಿಡುವದು 167, 175, 177
ಉಗ್ರ=ಕೋಪವುಳ್ಳ, ಕೆಟ್ಟ 204
ಉಚ್ಚಳಿಸುವದು=ಹೆಚ್ಚಾಗಿ ಬೀಳುವದು, ಪಾರಾಗಿ ಹೋಗುವದು 165, 179
ಉಚ್ಚಾರ=ನುಡಿಯುವಿಕೆ 246
ಉಜ್ಜ್ವಳ=ಬಹಳ ಹೊಳೆಯುವಿಕೆ 200
ಉಡಿಯುವದು=ಶೀಳಾಗುವದು, ತುಂಡಾಗುವದು 193
ಉಡು=ನಕ್ಷತ್ರ 138, 211
ಉಡುಂಬರ=ಒಂದು ಜಾತೀ ಅತ್ತಿಮರ 162
ಉಡು-ಕಾಂತ=ನಕ್ಷತ್ರಗಳ ರಾಜ, ಚಂದ್ರ 211
ಉಡುಗುವದು=ಉಡುಗಿಸಿ ಕೊಳ್ಳುವದು (ಮೈ ಚಿಕ್ಕ ಮಾಡಿ ಕೊಂಡು ಕುಂದ್ರುವದು) 176
ಉಡು-ರಾಜ=ಉಡು-ಕಾಂತ 139
ಉಣುವದು=ಉಣ್ಣುವದು 112, 120
ಉತ್ತಂಗ=ಉದ್ದ 188
ಉತ್ತರಿಸುವದು=ದಾಟುವದು 68
ಉತ್ಫಲ=ನೈದಿಲೆ 206

ಊ

ಋ

ಎ

ಎತ್ತಲೂ=ಎತ್ತಲಾಗೂ 223
ಎದೆ=ಧೈರ್ಯ 23
ಎನುವದು=ಎನ್ನುವದು
ಎಬ್ಬಟ್ಟುವದು=ಓಡಿಸುವದು 72
ಎರಗುವದು=ಮೇಲ್ಬೀಳುವದು 175
ಎರಳೆ=ಜಿಂಕೆ 163
ಎರ್ವಿಸುವದು=ಎಬ್ಬಿಸುವದು 244
ಎಲರು, ಎಲರ್=ಘಾಳಿ 210, 217, 222, 223
ಎಲೆ=ಎಲವೋ 16, 112, 116
ಎಸವುವದು=ಎಸೆಯುವದು
ಎಸಳು=ಎಲೆ 165, 200
ಎಸುಗೆ=ಎಸೆಯುವಿಕೆ, ಹಾರಿಸುವಿಕೆ 91, 94, 181
ಎಸೆಯುವದು=ಹಾಕುವದು, ಹಾರಿಸುವದು, ಹೊಳೆಯುವದು 149, 150, 151, 152, 154, 172, 176

ಏ

ಏಣ್=ಎಂಟು 231
ಏರು=ಬಾವು, ಏರುವಿಕೆ 177
ಏಳಿಗೆ=ಏಳುವಿಕೆ, ಹೆಚ್ಚುವಿಕೆ, ಬಲ, ಪ್ರಕಾಶ 210, 221
ಏಳ್ಗೆ=ಏಳಿಗೆ 149

ಐ

ಐ=ಐಯ್ಯಾನೇ 4, 112, 123
ಐಕಿಲು=ಛಳಿ 219
ಐತರುವದು=ಬರುವದು, ಹೋಗುವದು 69, 149, 195
ಐದುವದು=ಶೇರುವದು, ಮುಟ್ಟುವದು, ಹೋಗುವದು 120, 186
ಐದೆ=ಚನ್ನಾಗಿ 140, 207, 220
ಐಬೊ=ಐಯ್ಯೋ 118

ಒ

ಒಕ್ಕರಿಸುವದು=ವಾಕರಿಸುವದು, ವಾಂತಿ ಮಾಡುವದು 213
ಒಗತನ=ಕೆಲಸ, ವ್ಯವಹಾರ 146
ಒಗು-ಮಿಗೆ=ಹೆಚ್ಚಾದ ರಾಶಿ 217
ಒಗೆಯುವದು=ಹುಟ್ಟುವದು 247
ಒಡರ್ಚುವದು=ಆರಂಭಿಸುವದು, ಕೂಗುವದು 176
ಒಡನೆ=ಸಂಗಡ, ಸಂಗಡಲೇ 88, 155, 192
ಒಡಬಡುವದು=ಒಡಂಬಡುವದು 69
ಒಡಲು=ಹೊಟ್ಟಿ 35
ಒಡ್ಡು=ಗುಂಪಾಗಿ, ಗುಂಪು, ಹಿಂಡು 234
ಒಡೆಯುವದು=ಅಡೆಯುವದು 69
ಒಣಗಿಲು=ಒಣಗಿದ್ದಾದ 166
ಒತ್ತರಿಸುವದು=ಮುಂದಕ್ಕೆ ಹೋಗುವದು, ಗುಂಪಾಗಿ ಬರುವದು 185, 229
ಒತ್ತುವದು=ಬಹಳವಾಗಿರುವದು 121
ಒದಗುವದು=ಬರುವದು 8, 161
ಒದರುವದು=ಕೂಗುವದು 206
ಒದವುವದು=ಒದಗುವದು 231
ಒಪ್ಪು=ಪ್ರಕಾಶ 188
ಒಪ್ಪುವದು=ಪ್ರಕಾಶಿಸುವದು, ಚನ್ನಾಗಿರುವದು 152, 159, 200, 239
ಒಯ್ಯನೊಯ್ಯನೆ=ಮೆಲ್ಲಗೆ 245
ಒರತೆ=ನೀರಿನ ವರ್ತೆ 227
ಒರುಷ=ವರುಷ 30
ಒರೆಯುವದು=ಹೇಳುವದು, ನೀರು ಬಿಡುವದು 147, 211
ಒಲವು=ಮೆಚ್ಚುವಿಕೆ, ಪ್ರೀತಿ 47
ಒಲಿಯುವದು=ಮೆಚ್ಚುವದು 7, 31, 48
ಒಲೆಯುವದು=ಒಲಿಯುವದು; ಅಗಲಾಡುವದು 245
ಒಲ್=ಓಲ್, ಓಲು, ಹಾಗೆ 219
ಒಲ್ಮೆ=ಮೆಚ್ಚುವಿಕೆ 139
ಒಸರುವದು=ಹನಿಹನಿಯಾಗಿ ಬೀಳುವದು 216
ಒಸೆಯುವದು=ಸಂತೋಷ ಪಡುವದು 199
ಒಳ್, ಒಳು, ಒಳ, ಒಳ್=ಒಳಗೆ
ಒಳ್ಳೆ=ಒಂದು ತರದ ಹಾವಾಕೃತಿಯುಳ್ಳ ಜಂತು 144

ಓ

ಓಕರಿಸುವದು=ವಾಕರಿಸುವದು, ವಾಂತಿ ಮಾಡುವದು 19
ಓಗರ=ಅನ್ನ 146
ಓಜಸು=ಜ್ಯೋತಿ, ಪ್ರಕಾಶ 72
ಓತು=ಓಲು ಕೊಟ್ಟು, ಒತ್ತೆ ಇಕ್ಕಿ (ಓಲುವದು) 37
ಓದು=ನುಡಿ, ಸ್ವರ 119
ಓಪ=ಪ್ರಿಯ, ಗಂಡ, ಪತಿ 173
ಓರ್ವ=ಒಬ್ಬ 122, 124
ಓಲಗ=ಸಭೆ 152
ಓಲು, ಓಲ್=ಹಾಗೆ
ಓವುವದು=ಪ್ರೀತಿ ಮಾಡುವದು 140
ಓಳಿ=ಆಳಿ, ಸಾಲು, ಗುಂಪು 199

ಕ

ಕಂಗಳ=ಕುರುಡ 83
ಕಂಟ=ಲೇಖಿನಿ, ಒಂದು ಪಾತ್ರದ ಕಂಠ, ಕೊರಳು 98
ಕಂಟಕ=ಮುಳ್ಳು 205
ಕಂಠ=ಕೊರಳು 146
ಕಂದ=ಮಗ 14, 114
ಕಂದರ=ತಗ್ಗು, ಗುಹೆ 228
ಕಂಪು=ವಾಸನೆ 215
ಕಟಕ=ದಂಡು 235
ಕಟಿ=ನಡುವು, ಸೊಂಟ 84
ಕಟ್ಟ-ಕಡು=ಬಹಳ ದೊಡ್ಡ 129
ಕಟ್ಟು=ಮೇರೆ 129
ಕಠೋರ=ಭಯಂಕರ 187
ಕಡಲು=ಸಮುದ್ರ 126, 149
ಕಡಿಯಾಣ=ಕಡಿವಾಣ 46
ಕಡಿವಡೆಯುವದು=ಕಡಿಯಲ್ಪಡುವದು 192
ಕಡು=ಬಹಳ, ಹೆಚ್ಚು, ದೊಡ್ಡ 14, 23, 26, 42, 129, 138
ಕಡೆ-ಹಾಯಿಸುವದು=ದಾಟಿಸುವದು 69
ಕತ್ತುರಿ=ಕಸ್ತೂರಿ 183
ಕಥಾಂತರ=ಕಥೆ-ಅಂತರ, ನಡುವೆ ಬಂದ ಕಥೆ 46
ಕದಂಬ=ಹೆಬ್ಬಳಸು 162
ಕದನುವದು=ಕೆಸರೆಬ್ಬಿಸುವದು 175
ಕದಳಿ=ಬಾಳೆ 161, 248
ಕನಕ=ಭಂಗಾರ 5
ಕನಕಾಚಲ=ಕನಕದ ಅಚಲ, ಮೇರು ಪರ್ವತ 228
ಕಪಿತ್ಥ=ಬೆಳವಳ 162, 203
ಕಪೋತ=ಪಾರಿವಾಳ 164, 182
ಕಪ್ಪನೆ=ಕಪ್ಪಾದ 172
ಕಬ್ಬ=ಕಪ್ಪ್, ಕಪ್ಪು 166, 170
ಕಮಠ=ಕೂರ್ಮ 149
ಕಮಲ=ತಾವರೆ 198, 215
ಕರ=ಕೈ, ಸೊಂಡಿಲು 90, 92
ಕರಂ=ದೊಡ್ಡದು, ಬಹಳ, ಬಹಳವಾಗಿ 154, 246
ಕರಕು=ಕಪ್ಪು, ಮೈಲಿಗೆಯಾದ 114
ಕರ-ಜಾತ=ಉಗುರು 193
ಕರತರುವದು=ಕರಕೊಂಡು ಬರುವದು 63
ಕರವುವದು=ಎಸೆಯುವದು, ಹಾಕುವದು, ಹಾರಿಸುವದು 191
ಕರ-ಸ್ಥ=ಕೈಯಲ್ಲಿರುವಂಥಾದು 220
ಕರಿ=ಆನೆ 93, 163, 196, 214
ಕರಿ, ಕರಿಯ=ಕಪ್ಪು, ಮೈಲಿಗೆಯಾದ 96, 234
ಕರುಣಾಳು (-ಲು)=ಕರುಣೆಯುವ 103, 128
ಕರುವಿಸುವದು=ಕೆತ್ತುವದು 154
ಕರೆಯುವದು=ಎಸೆಯುವದು, ಹಾಕುವದು, ಹಾರಿಸುವದು, ಸುರಿಸುವದು 191, 235
ಕರ್ಕಟ=ದೊಡ್ಡ ಏಡಿ 149
ಕರ್ಕಶ=ಕೊರಕಲು 204, 205
ಕರ್ಕೊಟ, ಕರ್ಕೋಟ=ಒಂದು ಸರ್ಪದ ಹೆಸರು 38

ಖ

ಖಮ್ಮನೆ=ರುಚಿಯುಳ್ಳ 12
ಖ-ಗ=ಆಕಾಶ-ಗಾಮಿ, ಪಕ್ಷಿ 167
ಖಚಿತ=ಕೂಡಿದ್ದು, ಉಳ್ಳದ್ದು 155
ಖಡುಗ=ಖಡ್ಗ, ಕತ್ತಿ 58, 92
ಖಣಿ-ಕಟಿಲ=ಖಣಿಖಣಿ ಎನ್ನುವ ಕಬ್ಬಿಣದ ಮತ್ತು ಕಟಕಟಿಲ ಎನ್ನುವ ಮರದ ಧ್ವನಿ 190
ಖಳ=ಕೆಟ್ಟವ 58
ಖತಿ=ಶಿಟ್ಟು, ಕೋಪ 224
ಖುರ=ಕುದುರೇ ಕೊಳಗ 207

ಗ

ಗಂತು=ನಾಟ್ಯಾಟ 202
ಗಂಪು=ಕಂಪು, ವಾಸನೆ 199
ಗಂಬ=ಕಂಭ 151
ಗಗನ=ಆಕಾಶ 155, 188, 212
ಗಗನ-ಮಣಿ=ಸೂರ್ಯ 167
ಗಜ=ಆನೆ
ಗಜುಗ=ಒಂದು ತರದ ಕಣ್ಣುಬೇನೆ 95
ಗಟ್ಟುವದು=ಕಟ್ಟುವದು
ಗಡಣ=ಸಮೂಹ 166, 171
ಗಣ=ಸಮೂಹ 204
ಗಣಕ=ಶಾನಭೋಗ 117
ಗಣೆ=ಕಣೆ, ಅಂಬು 179
ಗತಿ=ನಡತೆ 72
ಗತ್ತಲೆ=ಕತ್ತಲೆ
ಗದ=ಕದ 151
ಗದ್ದಿಸುವದು=ಗದರಿಸುವದು 231
ಗಬ್ಬಿ=ಗರ್ವವುಳ್ಳ 177
ಗಮನ=ಹೋಗುವಿಕೆ, ಪ್ರಯಾಣ 236
ಗರಗೊಟ್ಟಗೆ=ಗರಗೊಟ್ಟೆನ್ನುವಿಕೆ 167
ಗರು=ಕರು
ಗರೆಯುವದು=ಕರೆಯುವದು, ಹಾಕುವದು, ಬಿಡುವದು 228, 233
ಗರ್ವು=ಕಬ್ಬು 244
ಗಲಿ=ಕಲಿ, ವೀರ, ಶೂರ 186
ಗವಸಣಿಗೆ=ಚೀಲ 11
ಗಹನ=ವನ, ಕಾಡು 161
ಗಳಿತ=ಬಿದ್ದ 229
ಗಾಢ=ಗಾಢ, ಬೇಗ 69
ಗಾಡು=ಕಾಡು
ಗಾಣಿಸುವದು=ಕಾಣಿಸುವದು
ಗಾತ್ರ=ಶರೀರ 180
ಗಾನ=ಗಾಯನ
ಗಾಯಕ=ಹಾಡುಗಾರ 214
ಗಾಯ್ಪು=ಕಿರಣ 229
ಗಾವಳಿ=ಶಬ್ದ 197
ಗಿಡಿ=ಕಿಡಿ
ಗಿರ್ವಾಣ=ದಿವ್ಯ, ಸಂಸ್ಕೃತ 11
ಗುಂದುವದು=ಕುಂದುವದು, ಕಡಿಮೆಯಾಗುವದು 23, 139
ಗುಡ=ಬೆಲ್ಲ 26, 153
ಗುಣಿಕೆ=ಗುಳಿಗೆ 15
ಗುದಿಯುವದು=ಕುದಿಯುವದು
ಗೂಡಾರ=ಗುಡಾರ
ಗೃಹ=ಮನೆ
ಗೆಂಡ=ಕೆಂಡ
ಗೆಂಪು, ಗೆಂಪ್=ಕೆಂಪು
ಗೆಡಿಸುವದು=ಕೆಡಿಸುವದು
ಗೆಣೆ=ಗೆಳೆಯ 99
ಗೆದರುವದು=ಗಲಿಬಿಲಿಯಾಗುವದು 86
ಗೆಲುವದು=ಗೆಲ್ಲುವದು 106
ಗೆಲವು=ಸಂತೋಷ 121
ಗೆಳಸುವದು=ಕೆಳಸುವದು
ಗೇಯುವದು=ಮಾಡುವದು
ಗೇಸರ=ಕೇಸರ, ಹೂವಿನಲ್ಲಿಯ ಹಳದಿ ಬಣ್ಣದ ಧೂಳಿ 200
ಗೈಯುವದು=ಮಾಡುವದು 66, 78, 107, 115, 121, 140, 141, 175, 206, 246, 248
ಗೊಂದಳ=ಗದ್ದಲ, ಸಮೂಹ 197

ಗೊಡವೆ=ಸಂಗತಿ 19
ಗೊಡ್ಡಿ=ತುಂಡು 141
ಗೊನರು=ಕೊನರು, ತುದಿ, ಹೂ 247
ಗೊನೆ=ಗೊಂಚಲು
ಗೋ=ಕಣ್ಣು, ಆಕಳು 241
ಗೋಗಿಲೆ=ಕೋಗಿಲೆ
ಗೋಚರಿಸುವದು=ತೋರುವದು 226
ಗ್ರಹ=ನಕ್ಷತ್ರಗಳ ರಾಶಿ 5
ಗ್ರಾಸ=ತಿನ್ನುವ ಪದಾರ್ಥ 13
ಗ್ರೀಷ್ಮ=ಬೇಸಿಗೆ 227

ಘ

ಘಟ=ಹರಿವಿ, ಮೈ 86, 90
ಘಟಿ=ಗುಂಪು, ಹಿಂಡು 214, 234
ಘಡಾವಣಿ=ಬಾಹುಳ್ಯ, ಹೆಚ್ಚುವಿಕೆ 93
ಘನ=ಘಡತರ, ಬಹಳ, ಮಹಿಮೆ, ಮೋಡ
ಘಲ್ಲಿಸುವದು=ಹೊಡೆಯುವದು, ಬೆದರಿಸುವದು 227
ಘಳಿಲನೆ=ಬೇಗ, ಫಕ್ಕನೆ 7
ಘಾಟ=ಕುತ್ತಿಗೆ 197
ಘಾತಿ=ಕೊಲ್ಲುವಿಕೆ 192
ಘಾಸಿ=ಕಷ್ಟ, ಉಪದ್ರ 78
ಘೂಕ=ಗೂಗೆ 193
ಘೂರ್ಣಿಸುವದು=ದೊಡ್ಡ ಶಬ್ದ ಮಾಡುವದು 202, 204
ಘೃತ=ತುಪ್ಪ 153
ಘೋಟಕ=ಕುದುರೆ 90
ಘೋರ=ಭಯ 192
ಘೋರತರ=ಬಹಳ ಭಯಂಕರವಾದ 68
ಘೋಷಣ=ಘೋಷಿಸುವಿಕೆ, ಘೋಷ 205

ಜ್ಞ

ಜ್ಞತೆ=ವಿದ್ಯೆ 42
ಜ್ಞನು=ತಿಳಿಯುವಂಥವನು 4

ಚ

ಚಂಡ=ಕ್ರೂರವಾದ, ಘಟ್ಟಿಯಾದ 21
ಚಂದನ=ಗಂಧ 222
ಚಂದಿರ=ಚಂದ್ರ 59
ಚಂದ್ರ-ಕಾಂತ=ಚಂದ್ರ-ಕಲ್ಲು, ಬೆಳುಚುಕಲ್ಲು
ಚಂದ್ರಮ=ಚಂದ್ರ 167
ಚಂದ್ರೋಪಲ=ಚಂದ್ರ-ಉಪಲ, ಚಂದ್ರ-ಕಾಂತವೆಂಬ ಕಲ್ಲು 165
ಚಂಪಕ=ಸಂಪಿಗೆ 162
ಚಕೋರ=ಒಂದು ಜಾತೀ ಕೋಳಿ 164, 211
ಚಕ್ರ=ಕೆಂಪು ಹಂಸ 199
ಚಕ್ರ-ವಾಕ=ಕೆಂಪು ಹಂಸ 164
ಚಟುಳ=ಚಂದ 190 [189
ಚತುರ=ಬುದ್ಧಿಯುಳ್ಳವ, ಬುದ್ಧಿಯುಳ್ಳ 148,
ಚತುರ್-ಅಂಗ=ಚತುರ್-ಬಲ 229
ಚತುರ್-ಬಲ=ಆನೆ, ಕುದುರೆ, ತೇರು, ಕಾಲಾಳುಗಳಿರುವ ದಂಡು 184
ಚದುರು=ಚತುರ, ಚಂದವಾದ 105
ಚನ್ನಗೆ=ಚನ್ನಾಗಿ 77
ಚನ್ನು=ಚಂದ, ಸಂತೋಷ 64
ಚಮರಿ=ಚಾಮರ ಬರುವಂಥ ಮೃಗ 182
ಚಮೂ=ದಂಡು 184
ಚಮತ್ಕೃತಿ=ಚಮತ್ಕಾರ 91
ಚಮ್ಮ=ಚರ್ಮ 12
ಚಯ=ಸಮೂಹ 45, 169, 205, 233
ಚರ=ದೂತ 41
ಚರಣ=ಕಾಲು 92
ಚರಣಾಯುಧ=ಕೋಳಿ, ಹುಂಜ 206
ಚರಿಸುವದು=ತಿರಿಗಾಡುವದು 122
ಚಲಿಸುವದು=ಅಸ್ಥಿರವಾಗಿರುವದು, ಅಲ್ಲಾಡುವದು 61, 196
ಚಲ್ವು, ಚಲ್ವ=ಚಲೋದು, ಚಂದ 154
ಚಳ=ನಿಲ್ಲದ, ಬೇಗವಾದ 91
ಚಳಕ=ಯುಕ್ತಿ 189

ಚಕ್ಷು=ಕಣ್ಣು 231
ಚಾಟಿ=ಚಬುಕು 249
ಚಾಡಿಗ=ಚಾಡಿಗಾರ 101
ಚಾಣ=ಉಳಿ, ಹಾರೆಗೋಲು 124
ಚಾತಕ=ಒಂದು ಜಾತೀ ಕೋಗಿಲೆ 164, 230
ಚಾತುರ=ಗೋಚರವಾದ, ಕೀರ್ತಿಯುಳ್ಳ 214
ಚಾಪ=ಬಿಲ್ಲು 84, 173
ಚಾಪಲ=ಚಂಚಲವಾದ 173
ಚಾರಿ=ಗುರಿಯಿಡುವಿಕೆ 189
ಚಾರು=ಚಂದ 165
ಚಾಳಿ=ಪ್ರಯೋಗ, ಪಳಕಿಸಿದ ಕೆಲಸ 189
ಚಿತ್ಕಾರ=ಚಿತ್ ಚಿತ್ ಎನ್ನುವಿಕೆ 205
ಚಿತ್ತವಿಸುವದು=ಕಿವಿ ಕೊಡುವದು 210
ಚಿತ್ರ=ಆಶ್ಚರ್ಯ, ಬಣ್ಣ ಹಾಕಿ ಬರದ್ದು 179 219
ಚಿತ್ರತರ=ವಿಚಿತ್ರ 154
ಚಿತ್ರ-ಪತ್ರ=ಬಣ್ಣವುಳ್ಳ ರೂಪ 157
ಚಿತ್ರಾಂಗದೆ=ಬಭ್ರುವಾಹನನೆಂಬವನ ತಾಯಿ 186
ಚುಂಬಿಸುವದು=ಮುದ್ದಿಕ್ಕುವದು 160, 169
ಚುದ್ರತನ=ಕ್ಷುದ್ರತನ, ನೀಚತನ 65
ಚೂಣಿ=ಮುಂಭಾಗ, ಬಲ 169, 186, 234
ಚೂತ=ಮಾವು 162, 203
ಚೂತಾಂಕುರ=ಚೂತ-ಅಂಕುರ, ಮಾವಿನ ಎಳೇದಾದ ಎಲೆ, ಅದರ ತಳಿರು ಅಥವಾ ಮೊಗ್ಗ 226
ಚೆಂ=ಕೆಂಪು 242, 243
ಚೆಲ್ವು, ಚೆಲ್ವ್=ಚಲುವು
ಚೆಲ್ವೆ=ಚಂದ 119
ಚೋರ=ಕಳ್ಳ
ಛವಿ=ಪ್ರಕಾಶ 59, 158, 171

ಛ

ಛಟಿಸುವದು=ಛಟಛಟವೆನ್ನುವದು 161
ಛಿಟಿಸುವದು=ಛಿಟಿಛಿಟಿಯೆನ್ನುವದು 166
ಛಿದ್ರ-ಮಾನಸ=ಮನಸು ಒಡೆದವನು 61

ಜ

ಜಂಘಿ=ಕಾಲು 177
ಜಂಬೀರ=ನಿಂಬೆ 203
ಜಂಬು=ಜಂಬುನೇರಲ 162
ಜಗ=ಜಗತ್ತು 56, 62, 157
ಜಗುಳುವದು=ಬಿಚ್ಚುವದು 84
ಜಡ=ಭಾರ, ರೋಗ 142
ಜಡಿಯುವದು=ಬಿಗಿ ಮಾಡುವದು 178
ಜನ-ಪ=ಅರಸು 49, 237
ಜನಪದ=ಜನರಿರುವ ಶೀಮೆ 237
ಜನಾವಲೋಕ=ಜನ-ಅವಲೋಕ, ಜನರ ದೃಷ್ಟಿ 212
ಜನಿತ=ಹುಟ್ಟಿದ 169
ಜನಿಸುವದು=ಹುಟ್ಟುವದು 56, 63
ಜರೆಯುವದು=ಹಾಸ್ಯ ಮಾಡುವದು 153
ಜಲ-ಚರ=ಮೀನು 24, 149
ಜಲಧಿ=ಸಮುದ್ರ 62
ಜವ=ಬೇಗ, ಶಕ್ತಿ
ಜವ-ಗೆಡಿಸುವದು=ಶಕ್ತಿ ಅಲ್ಪವಾಗುವದು 221
ಜವಾದಿ=ಒಂದು ಜಾತೀ ಪರಿಮಳ (ಬೆಕ್ಕಿನದು) 157, 159, 174
ಜಸ=ಕೀರ್ತಿ 224
ಜಳ=ಝಳ, ಕಾವು 228
ಜಾತ=ಜಾತಿಯವ, ಕುಲದವ, ಹುಟ್ಟಿದ 99, 233
ಜಾನು=ಮೊಣಗಾಲು 79
ಜಾರುವದು=ಚಲಿಸುವದು, ಓಡುವದು 45
ಜಾಲ=ಬಲೆ, ಗುಂಪು 94, 161
ಜಿನುಗು=ಜಡಿಮಳೆ 237
ಜೀಮೂತ=ಮಿಂಚು 235
ಜೀವನ=ಜೀವಿಸುವಿಕೆ, ಜೀವ, ಅನ್ನ 33, 236
ಜಿಹ್ವೆ=ನಾಲಿಗೆ 1
ಜೊತ್ತು=ಘಟ್ಟಿ, ಹತ್ತರ 197

ಜೊನ್ನ=ಜ್ಯೋತ್ಸ್ನ, ಚಂದ್ರನ ಪ್ರಕಾಶ 157
ಜೋಧ=ಮಾವಟಿಗ 190
ಜ್ಯಾ=ಬಿಲ್ಲಿನ ಹಗ್ಗ 187
ಜ್ಯೋತಿ=ಬೆಳಕು, ಪ್ರಕಾಶ 2

ಝ

ಝಗೆ=ಪ್ರಕಾಶ 166
ಝಳ=ಕಾವು, ಶೆಖೆ 165, 169
ಝಳಪಿಸುವದು=ಕತ್ತಿಯನ್ನಾಡಿಸುವದು, ಹೊಳಿಸುವದು 215
ಝಾಡಿ=ಝಾಡುವಿಕೆ, ಬಹಳ ಬೀಳುವಿಕೆ 47
ಝೇಂಕಾರ=ಝೇಂಝೇ ಎಂಬ ಧ್ವನಿ 246

ಠ

ಠಳತ್ಕಾರ=ಠಳಠಳವೆನ್ನುವಿಕೆ 168
ಠೀವಿ=ದೊಡ್ಡಸ್ತಿಕೆ 152

ಡ

ಡಾವರಿಸುವದು=ಉಪದ್ರ ಪಡಿಸುವದು 140, 170
ಡೊಂಕಣಿ=ಉದ್ದವಾದ ಈಟಿ 189
ಡೊಣೆ=ಡೊಂಣೆ 52
ಡೊಳ್ಳಾಸ=ವಿಸ್ತಾರ 170

ಢ

ಢಕ್ಕಾ=ಸಣ್ಣ ನಗಾರಿ 187
ಢಾಳ=ಪ್ರಕಾಶ

ತ

ತಂಬೆ=ಬಕ 157
ತಂಬ್=ತಂಪ್, ತಂಪು 210, 245
ತಕಪಕನೆ=ಕುದಿಯುವ ಶಬ್ದ 149
ತಟ=ತೀರ 188, 203
ತಟಿನಿ=ಹೊಳೆ 131
ತಡವುವದು=ತಡಿಸುವದು 234
ತಡಿ=ತೀರ 150, 213
ತಡಿತ=ತಡೆಯುವಿಕೆ, ತಡೆ ಹಾಕುವಿಕೆ 167
ತಡೆಯುವದು=ತಡ ಮಾಡುವದು, ತಡೆ ಪಡುವದು, ತಡಿಸುವದು 45, 145
ತತ್ (ತದ್)=ಆ
ತತಿ=ಗುಂಪು 157, 196
ತತ್ತುವ=ತತ್ತ್ವ, ನಿಜವಾದದ್ದು 80
ತದನು=ತದ್-ಅನು, ಆ ವೇಳೆ, ಆಗ, ಆ ಮೇಲೆ 204
ತದೀಯ=ಆ 47
ತನಯ=ಮಗ 107, 108, 109, 110, 111
ತನಿ=ಬಹಳವಾಗಿ, ಬಹಳ, ಪಕ್ವವಾದ, ಪ್ರಕಾಶವುಳ್ಳ 86, 165, 199, 248, 249
ತನು=ಮೈ, ಹೊಟ್ಟೆ, ಚಿಕ್ಕ 34, 160, 174
ತನು-ಜ=ಮಗ 240, 248
ತನೂ-ಭವ=ಹೊಟ್ಟೆಯಿಂದ ಹುಟ್ಟಿದವ, ಮಗ 186
ತಪ್ಪಲು=ಪರ್ವತಗಳ ಅಡಿಯಲ್ಲಿರುವ ನೆಲ (ಬೈಲು) 172
ತಮ=ಕತ್ತಲೆ 221, 228
ತಮಾಲ=ಹೊಂಗೇ ಮರ 162
ತಮಿಸ್ರ=ಕತ್ತಲೆ 211
ತರ=ಪ್ರಕಾರ, ಸಾಲು 153, 154, 197
ತರಣಿ=ಸೂರ್ಯ 184, 208
ತರಿಸುವದು=ಎಲೆಗಳನ್ನು ಹಿರಿದು ಕೊಂಬೆಗಳನ್ನು ಬರೇದು ಮಾಡುವದು 87
ತರು=ಮರ 122, 137
ತರುಣ=ಎಳೇ, ಹೊಸ 243, 246
ತಲ=ಬುಡ 90
ತಲ್ಲಣಿಸುವದು=ಕಷ್ಟ ಪಡುವದು 227
ತವಿಸುವದು=ಕಡಿಮೆ ಮಾಡುವದು, ಶಾಂತಿ ಪಡಿಸುವದು 221, 230
ತವೆ=ಬಹಳ, ಬಹಳವಾಗಿ 188, 212, 221

ತಳ=ಬುಡ 200
ತಳಿತ=ತಳಿರಾದ (ತಳಿಯುವದು), ಚಿಗಿತ 215, 247
ತಳಿಯುವದು=ಅರುಳುವದು, ಹೊಳೆಯುವದು, ತಳಿರಾಗುವದು, ಚಿಗಿಯುವದು 62, 215, 225, 247
ತಳೆಯುವದು=ಪಡೆಕೊಳ್ಳುವದು, ಹೊಂದುವದು, ಶೇರುವದು, ತಳಿಯುವದು, ಅರುಳುವದು 180, 222, 230, 245
ತಳ್ಕು=ಪ್ರಕಾಶ 242
ತಳ್ಳಂಕ=ಭಯ 86
ತಾಗು=ತಾಗುವಂಥಾದು 36
ತಾಪ=ಉರಿ, ಕಷ್ಟ 217
ತಾಮರಸ=ತಾವರೆ 218
ತಾರಕೆ=ನಕ್ಷತ್ರ 86
ತಾರಾ (-ರೆ)=ನಕ್ಷತ್ರ
ತಿಂತ್ರಿಣಿ=ಹುಣಸೆ 203
ತಿಂಥಿಣಿ=ಹಿಂಡು 247
ತಿತ್ತಿರಿ=ವಿಚಿತ್ರಬಣ್ಣದ ಒಂದು ಹಕ್ಕಿ 182
ತಿಮಿ=ದೊಡ್ಡ ಮೀನು 149
ತಿಮಿಂಗಿಲ=ತಿಮಿಗಿಂತ ದೊಡ್ಡದಾದ ಮೀನು 149
ತಿಮಿರ=ಕತ್ತಲೆ 62
ತಿರ=ಸ್ಥಿರ 71
ತಿರುಗುವದು=ತಿರಿಗಾಡುವದು 239
ತಿರುಳಿನ ಹುಳು=ಕಾಯಿ ಹಣ್ಣುಗಳ ಒಳಗಿರುವ ಹುಳ 15
ತಿಲಕ=(ಎಣ್ಣೆಗಳಲ್ಲಿ ಶ್ರೇಷ್ಠವಾದ) ಎಳ್ಳು, ಹೊನ್ನೆ 39, 44, 47, 162
ತಿಳಿಯುವದು=ತಿಳಿ ಅಂದರೆ ನಿರ್ಮಲ ಆಗುವದು 238
ತಿಳುಹುವದು=ತಿಳಿಸುವದು 1
ತೀಡುವದು=ತಿಕ್ಕುವದು, ಬೀಸುವದು 225
ತೀವುವದು=ತುಂಬಿಸುವದು, ಒಳಹೊಗುವದು, ತುಂಬಾಗುವದು 122, 178, 187, 209
ತುಂತುರು=ಹನಿ 123
ತುಂಬಿ=ಭೃಂಗ, ಭ್ರಮರ 165
ತುಂಬುರು=ಕೊತುಂಬರಿ 162
ತುಕ್ಕುವದು=ಆಡುತ್ತಾ ಬರುವದು 174
ತುಡುಕುವದು=ಹಿಡಿಯುವದು 176, 177
ತುರಂಗ=ಕುದುರೆ 185
ತುರಗ=ಕುದುರೆ 43
ತುರುಗುವದು=ತುಂಬಾಗುವದು, ಬಹಳವಾಗುವದು 211, 249
ತುಷಾರ=ಜಡಿಮಳೆ, ಜಿನುಗುಮಳೆ 216, 246
ತುಹಿನ=ಹಿಮ 200
ತೂಣ=ಮರುಳು 249
ತೂಳುವದು=ಹೊಡೆಯುವದು, ಬಡೆಯುವದು 87, 92
ತೃಣ=ಹುಲ್ಲು 205
ತೆತ್ತು=ಕೊಟ್ಟು (ತೆರುವದು) 213
ತೆರ=ತರ, ರೀತಿ, ಪ್ರಕಾರ 13
ತೆರಳಿಚುವದು=ಓಡಿಸುವದು 167
ತೆರಳುವದು=ಹೊರಡುವದು 192
ತೆರುವದು=ಕೊಡುವದು 213
ತೆಳುವು=ಮೃದು, ಮಂದ 225
ತೇಜಿ=ಕುದುರೆ
ತೇಲುವದು=ಹೆಚ್ಚು ಕಡಿಮೆ ಆಗುವದು, ಬಿಡುವದು 158
ತೈಲ=ಎಣ್ಣೆ 153
ತೊಂಗುವದು=ತೂಗುವದು 203
ತೊಡಗುವದು=ಆರಂಭ ಮಾಡುವದು 20
ತೊಡರುವದು=ತೊಡರಾಗುವದು, ಸುತ್ತಿ ಕೊಳ್ಳುವದು 222
ತೊಪ್ಪನೆ=ಬೇಗವಾಗಿ 172
ತೊರೆ=ಹೊಳೆ 216, 227
ತೊರೆಯುವದು=ಬಿಟ್ಟು ಬಿಡುವದು 83, 125, 181
ತೊಲಗುವದು=ಅಗಲಿ ಹೋಗುವದು 25, 32
ತೊಳಪು=ಪ್ರಕಾಶ 156, 199

ದೆಸೆ=ದಿಕ್ಕು
ದೇರು=ತೇರು 44, 191
ದೇಹಿ=ದೇಹವುಳ್ಳವ 142
ದೊರಕುವದು=ಶಿಕ್ಕುವದು 15, 79
ದೊರೆ=ತೊರೆ, ಹೊಳೆ; ಸಮಾನ, ಸರಿ 144
ದೋರಣ=ತೋರಣ
ದೋರಿಸುವದು=ತೋರಿಸುವದು
ದೋರುವದು=ತೋರಿಸುವದು 135
ದ್ಯೂತ=ಜೂಜಾಟ 37
ದ್ರುಮ=ಮರ 162, 222
ದ್ವಿಪ=ಆನೆ 205, 231
ದ್ವಿರದ=ಆನೆ 183

ಧ

ಧಗ-ಧಗಿಸುವದು=ಹೊಳೆಯುವದು 161
ಧಟ್ಟು=ದಂಡು 186
ಧಣಿ=ಒಡೆಯ 95
ಧನ=ಐಶ್ವರ್ಯ 7, 21
ಧನಿ=ಧ್ವನಿ 86
ಧನು=ಬಿಲ್ಲು 85
ಧರಣಿ=ಭೂಮಿ, ನೆಲ 184, 232
ಧರೆ=ಭೂಮಿ 46, 49, 122, 192
ಧವಳ=ಬಿಳೇದು 212
ಧಳ್ಳ್=ದೊಡ್ಡ ಶಬ್ದದ ಉರಿ 160, 163
ಧಾರಿಣಿ=ಭೂಮಿ 63, 123, 163
ಧಾರೆ=ಖಡ್ಗದ ಹದನವಾದ ಭಾಗ 14
ಧಾರ್ಮಿಕ=ಧರ್ಮದ ಸಂಬಂಧವಾದ, ಧರ್ಮಿಷ್ಠ 143
ಧಾಳಿ=ಲೂಟಿ 34
ಧೀರ=ತಿಳಿದವ, ಬಲ್ಲವ, ಘಟ್ಟಿಗ 51, 193
ಧುರ=ಯುದ್ಧ 116
ಧೂತ=ಹಾರ್ಯಾಡುವ 170
ಧೂಮ=ಹೊಗೆ, ಬೆಂಕಿ 169, 170
ಧ್ವಜ=ಬಾವಟೆ 184

ನ

ನಂದನ=ವನ, ತೋಟ; ಮಗ 22, 160, 232, 246
ನಂದನೆ=ಮಗಳು 48
ನಂದುವದು=ನೊಂದುವದು, ಶಾಂತಿಯಾಗುವದು 221
ನಕರ=ವ್ಯರ್ಥವಾದ ಕೆಲಸ 9
ನಕುಲ=ಮುಂಗಲಿ 205
ನಕ್ರ=ಮೊಸಳೆ 199
ನಗ-ಕುಲ=ಬೆಟ್ಟಗಳ ಸಮೂಹ 40, 86
ನಗದು=ನಕ್ಕ 98
ನಗರಿ=ನಗರ 48, 62
ನಚ್ಚುವದು=ನೆಚ್ಚುವದು, ನಂಬುವದು
ನಡೆ-ತರು=ನಡೆದು ಬರುವದು, ನಡೆಯುವದು 150
ನಭ=ಆಕಾಶ 188, 236, 244
ನಭಿ=ಗಾಲಿ 90
ನಯ=ಚಂದ, ಒಳ್ಳೇ 214
ನಯನ=ಕಣ್ಣು 180
ನರಕಿ=ನರಕದವ 75
ನರ-ನಾಥ=ಮನುಷ್ಯರ ಒಡೆಯ, ರಾಜ 48
ನರನೆ=ಅವಸರದ ಶಬ್ದ 91
ನರ್ತನ=ನಾಟ್ಯಾಟ 152
ನರ್ತಿಸುವದು=ನಾಟ್ಯವಾಡುವದು 247
ನಲುವು=ಸಂತೋಷ 84
ನಲ್ಲ=ಒಳ್ಳೇಯವ, ಸ್ನೇಹಿತ 221
ನವ=ಹೊಸ, ಚಂದ
ನವ-ನವಾಗಮ=ನವ-ನವ-ಆಗಮ, ತಿರಿಗಿ ತಿರಿಗಿ ಬರುವಂಥವ 212
ನವ್ಯ=ನವಿ, ಉತ್ತಮ 225
ನಸಿಯುವದು=ಕುಂದುವದು, ಕಡಿಮೆಯಾಗುವದು 218
ನಸು=ಕಡಿಮೆಯಾದ, ಚಿಕ್ಕ, ಎಳೇ 219
ನಳನಳಿಸುವದು=ಪ್ರಕಾಶಿಸುವದು 244

ಪ

ಪೊಚ್ಚ=ಪಚ್ಚ, ಹೊಸ 224
ಪೊಡಮಡುವದು=ಹೊರಡುವದು 179, 204
ಪೊಡವಿ=ಭೂಮಿ 23
ಪೊಡೆ=ಎದೆ, ಧೈರ್ಯ 192
ಪೊಣೆ=ಹೊಣೆ
ಪೊದಕೆ=ಹೊದಿಕೆ
ಪೊದರು=ಹೊದರು 176, 178
ಪೊದಿಸುವದು=ಹೊದಗಿಸುವದು 220
ಪೊಯ್ಯುವದು=ಹೊಯ್ಯುವದು
ಪೊರಗೆ=ಹೊರಗೆ
ಪೊರಳುವದು=ಹೊರಳುವದು
ಪೊರುವದು=ಹೊರುವದು, ಹೊತ್ತು ಕೊಳ್ಳುವದು 113
ಪೊರೆಯುವದು=ಬೆರೆಯುವದು, ಮಿಶ್ರಿತವಾಗಿರುವದು 154
ಪೊಲ=ಹೊಲ
ಪೊಸ=ಹೊಸ, ಆಶ್ಚರ್ಯವಾದ, ಅದ್ಭುತ 152, 226
ಪೊಸತು=ಹೊಸದು 176
ಪೋಗುವದು=ಹೋಗುವದು
ಪೋಲುವದು=ಹೋಲುವದು 232
ಪೋಷಿಸುವದು=ಬೆಳಿಸುವದು, ಸಾಕುವದು 1
ಪ್ರಕಟ=ವಿಸ್ತಾರವಾದ 205
ಪ್ರಕಟತರ=ಬಹಳ ವಿಸ್ತಾರವಾದ 153
ಪ್ರಕರ=ಗುಂಪು 149, 153, 164
ಪ್ರಜ್ವಲಿಸುವದು=ಬಹಳ ಜ್ವಾಲೆಯಾಗುವದು 210
ಪ್ರತತಿ=ದೊಡ್ಡ ಸಮೂಹ 211, 220
ಪ್ರತಾಪ=ಬಹಳ ಶೆಖೆ,—ಜ್ವಾಲೆ 221
ಪ್ರತಿ-ದನಿ=ಪ್ರತಿಯಾಗಿ ಬರುವ ಧ್ವನಿ 82
ಪ್ರದೀಪ=ಹೊಳಪು, ಹೊಳೆಯುವಿಕೆ 159
ಪ್ರದೇಶ=ಸ್ಥಳ 188
ಪ್ರಬಂಧ=ಎಡೆ ಬಿಡದ ಕೆಲಸ 17
ಪ್ರಬಲ=ಬಹಳ ಬಲ 222
ಪ್ರಭೆ=ಪ್ರಕಾಶ 243
ಪ್ರವಾಳ=ಹವಳ 151
ಪ್ರಹಾರ=ಹೊಡದಾಟ, ಪೆಟ್ಟು 189
ಪ್ರಾಚೀನ=ಮೂಡಲ ದಿಕ್ಕಿನದಾದ 207
ಪ್ರೇಮ=ಪ್ರೀತಿ
ಪ್ರೇರಕ=ನಡಿಸುವವ 138
ಪ್ರೌಘ=ಕೀರ್ತಿಯುಳ್ಳವ 5, 185

ಫ

ಫಣಿ=ಹಾವು 170
ಫಲಿತ=ಫಲವಾದ 215

ಬ

ಬಂಟ=ಭಟ, ದಂಡುಗಾರ 98
ಬಂಡ=ನೀಚ 113
ಬಂಧಿಸುವದು=ಕಟ್ಟುವದು 22
ಬಂಧುರ=ಚಂದ 188, 214
ಬಂಭಾ (-ಭೆ)=ಕೂಗುವಿಕೆ 187
ಬಕುಳ=ಬೊಕುಳೆ ಮರ 162
ಬಗೆ=ಚಿಂತೆ, ರೀತಿ 83
ಬಗೆಯುವದು=ಚಿಂತಿಸುವದು 13
ಬಜ್ಜರ=ವಜ್ರ 156
ಬಟ್ಟು-ಬರಿದು=ಬೈಲಾಗಿ ಬರೇದು 7
ಬಡುವದು=ಪಡುವದು 14, 18
ಬದಿರ=ಕಿವುಡ 105
ಬನ=ವನ, ತೋಟ
ಬನ್ನ=ಭಗ್ನ, ಕಷ್ಟ 18
ಬಯಸುವದು=ಆಶಿಸುವದು 13, 36, 76
ಬರುಹಿ=ನವಿಲು 183
ಬರೆಯುವದು=ಬತ್ತುವದು 227
ಬಲರು=ಬಲವುಳ್ಳವರು 189
ಬಲಾಹಕ=ಮೋಡ 88
ಬಲಿಯುವದು=ಬಲವಾಗುವದು, ದೊಡ್ಡದಾಗುವದು, ಘಟ್ಟಿಯಾಗುವದು 33, 223
ಬಲಿಸುವದು=ಬಲ ಪಡಿಸುವದು 72

ಬಲು, ಬಲ್=ಬಹು, ಬಹಳ 33, 58, 90, 121, 124
ಬಲುಮೆ=ದೊಡ್ಡದು, ಹೆಚ್ಚುವಿಕೆ, ಬಲ 27, 115
ಬಲ್ಮೆ=ಬಲುಮೆ 115
ಬಲ್ಲರು=ತಿಳಿದವರು 121
ಬಲ್ಲವನು=ತಿಳಿದವನು 4
ಬಲ್ಲಿದನು=ದೊಡ್ಡವನು 139
ಬಲ್ಲುದು=ತಿಳಿಯುವದು, ಯುಕ್ತವಾಗಿರುವದು
ಬಳಗ=ಪರಿಚಿತೀ ಜನ, ಗುಂಪು 21, 174, 223, 247
ಬಳಲುವದು=ಆಯಾಸ ಪಡುವದು, ಬಾಡುವದು 122
ಬಳಸು=ಮಾರ್ಗ, ನಡತೆ 96
ಬಳಸುವದು=ಸುತ್ತುವದು, ಸುತ್ತಲ್ಪಟ್ಟಿರುವದು, ಸುತ್ತಾಡುವದು 242, 246
ಬಳಿಯ=ಹತ್ತರ 180
ಬಳಿ-ವಿಡಿಯುವದು=ಬಳಿ ಹಿಡಿಯುವದು, ಹಿಂಬಾಲ ಮಾಡುವದು 173, 242
ಬಳಿಸುವದು=ಎಲ್ಲಿಯೂ ರೂಢಿ ಮಾಡುವದು 42
ಬಾಂದಳ=ಆಕಾಶ 244
ಬಾಗು=ತಾನು ಬಾಗಿ ಕೊಳ್ಳ ಬೇಕಾಗುವಂಥಾದು (ಕಷ್ಟ, ಅಪಮಾನ ಇತ್ಯಾದಿ) 36
ಬಾಚುವದು=ಲೋಭದಿಂದ ಕೂಡಿಸಿ ಕೊಳ್ಳುವದು 148
ಬಾಲ=ಚಿಕ್ಕ ಪ್ರಾಯುದವ 123
ಬಾಲಾತಪ=ಬಾಲ-ಆತಪ, (ಚಂದ್ರನ) ಎಳೇ ಪ್ರಕಾಶ 158
ಬಾಷ್ಪ=ಕಣ್ಣೀರು 101
ಬಾಹಾ (-ಹೆ)=ತೋಳು, ಕೈ 187
ಬಾಹ್ಯ=ಹೊರಗಿನದು, ಹೊರಗಿರುವಂಥಾದು 26
ಬಾಳು=ಕತ್ತಿ; ಬಾಳಿಕೆ 92, 117, 146, 193
ಬಾಳ್ವೆ=ಬಾಳಿಕೆ 142
ಬಿಂನಾಣ=ಚಾತುರ್ಯ 189
ಬಿಂಬ=ರೂಪ, ಪ್ರಕಾಶ 212
ಬಿಂಬಿಸುವದು=ಪ್ರಕಾಶಿಸುವದು 207
ಬಿಗಿಯುವದು=ಬಿಗಿ ಮಾಡುವದು, ಬಿಗಿಯಾಗಿ ಕಟ್ಟುವದು 84
ಬಿಡಯ=ಗುಂಪು, ಹಿಂಡು 174, 242
ಬಿಡಿಯುವದು=ಹಿಡಿಯುವದು 152
ಬಿಣ್ಪು=ಘಡತರ, ಭಾರ 215
ಬಿನದಿಸುವದು=ಧ್ವನಿ (ನಾದ) ಮಾಡುವದು [199
ಬಿನ್ನಣ=ಚಂದ 64
ಬಿರಿಯುವದು=ಬಿರಕಾಗುವದು, ಒಡೆಯುವದು 86
ಬಿರು=ಬೇಗ 181
ಬಿರುದು=ಬಳೆ, ಪೆಂಡೆ, ಘಂಟೆ, ಕತ್ತಿ ಇತ್ಯಾದಿ ಬಹುಮಾನವಾಗಿ ಶಿಕ್ಕಿರುವ ಜಿನಸು
ಬಿರುಬು=ದೊಡ್ಡ ಶಬ್ದ 88
ಬಿಸ=ನೈದಿಲೇ ದಂಟು, ನೀರು 199
ಬಿಸು=ಬಿಸಿ, ಕಾವಾಗಿ 171, 204
ಬಿಸುಟು=ಬಿಟ್ಟು ಬಿಟ್ಟು (ಬಿಸುಡುವದು) 38
ಬಿಸುಟ್ಟು=ಬಿಸುಟು
ಬಿಸುಡುವದು=ಬಿಸಾಡುವದು, ಒಕ್ಕೊಡುವದು, ಬಿಟ್ಟು ಬಿಡುವದು
ಬಿಸು-ಸುಯ್ಯು (-ಸುಯ್‍ಲ)=ಬಿಸಿಯಾದ ಉಸುರು 228
ಬೀಡು=ಬಿಡಾರ, ಗುಂಪು 32, 208
ಬೀಡುವದು=ಬೀಳುವದು 57
ಬೀರುವದು=ವಿಸ್ತಾರವಾಗುವದು 199
ಬುದ್ಬುದ=ನೀರುಗುಳ್ಳೆ 196
ಬುಳು=ಹುಳ 144
ಬೃಂಹಿತ=ಗುಡುಗುವಂಥ ಧ್ವನಿ 93
ಬೆಚ್ಚುವದು=ಭಯ ಪಡುವದು 206
ಬೆಡಗು=ಬೆರಗು, ಆಶ್ಚರ್ಯ 150
ಬೆಮೆ=ಭ್ರಮೆ 72
ಬೆರಸುವದು=ಒಳಗೂಡಿಸುವದು 14
ಬೆರೆಯುವದು=ಒಳಗೂಡುವದು, ಒಂದೇ ಗುಂಪಾಗಿರುವದು 74, 202

ಬೆಳಗುವದು=ಪ್ರಕಾಶಿಸುವದು 110, 206, 238
ಬೆಳತ=ಬೆಳೆದ
ಬೆಳಸು=ಬೆಳೆ 239
ಬೆಳು=ಬಿಳೇ, ಬಿಳೇದಾದ 84
ಬೆಳೆಯುವದು=ಬೆಳ್ಳಗಾಗುವದು, ಪ್ರಕಾಶವಾಗುವದು 238
ಬೆಳ್=ಬಿಳೇ 243
ಬೆಳ್ಪು, ಬೆಳ್ಪ್=ಬಿಳೇದು 239
ಬೆಳ್ಕಾರ-ವಲೆ=ಒಂದು ಜಾತೀ ದೊಡ್ಡ ಬಲೆ 163
ಬೇಗೆ=ಕಾಡ ಕಿಚ್ಚು 207
ಬೇಸತ್ತು=ಬೇಸರಾಗಿ (ಬೇಸರಿಯುವದು) 32
ಬೇಸರಿಯುವದು, ಬೇಸರುವದು=ಬೇಸರ ಪಡುವದು
ಬೇಹುಕಾರ=ಹೊಂಚುಗಾರ, ಕಾವಲಿಗಾರ 62
ಬೊಂಬಾಳ=ದೊಡ್ಡ ದೀವಟಿಗೆ 159
ಬೊಗರು=ಪೊಗರು, ಪ್ರಕಾಶ 247
ಬೊಡ್ಡಿ=ಕೆಟ್ಟ 73
ಬೊಬ್ಬುಳಿ=ನೀರುಗುಳ್ಳೆ 202
ಬೊಬ್ಬೆ=ಕೂಗು
ಬೋದಿಗೆ=ಬೋದುಗೆ
ಬೋದುಗೆ=ಕಂಭದ ಮೇಲ್ಭಾಗ 151

ಭ

ಭಂಗ=ನಷ್ಟ, ಸಮುದ್ರದ ತೆರೆ 83, 149
ಭಕುತಿ=ಭಕ್ತಿ 95
ಭಜಕ=ಭಜನೆ ಮಾಡುವವ 143
ಭಟ=ದಂಡುಗಾರ 51
ಭರ=ಹೆಚ್ಚುವಿಕೆ, ದೊಡ್ಡದಾದ, ಬೇಗ, ಆಶೆ ಮಾಡುವ 16, 87, 180, 207, 230, 231
ಭರದ್ವಾಜ=ಕೆಂಬೋತ 164
ಭರಿತ=ತುಂಬಿದ, ತುಂಬಿದ್ದು 201
ಭವಣೆ=ಕಷ್ಟ 221
ಭವನ=ಮನೆ 241
ಭಕ್ಷ್ಯಣ=ಊಟ 13
ಭಾ, ಭೆ=ಪ್ರಭೆ, ಪ್ರಕಾಶ 118, 138
ಭಾಂಡ=ಮಣ್ಣಿನ ಪಾತ್ರೆ 153
ಭಾರ-ಹರ=ಭಾರಗಳನ್ನು ಪರಿಹರಿಸುವವ 68
ಭಾರಿ=ಬಾಹುಳ್ಯ, ಹೆಚ್ಚುವಿಕೆ 39
ಭಾವಿಸುವದು=ಆಲೋಚಿಸುವದು 24
ಭಿತ್ತಿ=ಗೋಡೆ 151, 154, 156
ಭಿನ್ನ=ತುಂಡು, ಭೇಧ 63
ಭೀಷಣ=ಭೀತಿ ಹುಟ್ಟಿಸುವ ಗುಣವುಳ್ಳ, ಭೀಷ್ಮ 197, 230
ಭುಜ=ತೋಳು, ಕೈ 27, 106
ಭುವನ=ಲೋಕ 221
ಭೂ=ಭೂಮಿ 5
ಭೂ-ಚಕ್ರ=ಭೂಮಿ-ಮಂಡಲ
ಭೂ-ತಳ=ಭೂಮಿ 227, 233
ಭೂ-ನಾಥ=ಭೂ-ಪತಿ
ಭೂ-ಪತಿ=ಅರಸು 38, 41
ಭೂ-ಭುಜ=ಭೂಮಿಯನ್ನು ಉಣ್ಣುವವ, ರಾಜ 41, 230
ಭೂ-ಭೃತ್=ಪರ್ವತ, ರಾಜ 229
ಭೂಮಿ-ಪ=ಭೂ-ಪತಿ 42
ಭೂರಿ=ಬಹಳ 56
ಭೃಂಗ=ಭೃಂಗಹುಳ, ತುಂಬಿ 122
ಭೃತ್ಯ=ಚಾಕರಿಯವ 97, 116
ಭೋಗ=ಅನುಭವಿಸುವಿಕೆ 78
ಭ್ರಷ್ಟ=ಪುಣ್ಯಮಾರ್ಗ ಬಿಟ್ಟವ 74
ಭ್ರೂ=ಹುಬ್ಬು 173
ಭ್ರೂ-ಲತೆ=ಬಳ್ಳಿಯಂತಿರುವ ಹುಬ್ಬು 173

ಮ

ಮಂಗಳ=ಪ್ರಕಾಶವುಳ್ಳ 83
ಮಂಜರಿ=ಗೊಂಚಲು 214
ಮಂಡೆ=ಸ್ಥಳ, ಮನೆ 21
ಮಂದಾಕಿನಿ=ಗಂಗಾನದಿ 204
ಮಕರ=ಸಮುದ್ರದ ಹುಲಿ 149
ಮಕರಂದ=ಜೇನುತುಪ್ಪ 216, 247 [126
ಮಗುಚುವದು=ತಲೆ ಕೆಳಗಾಗಿ ಹಾಕುವದು

ಮಾಯೆ=ಸುಳ್ಳು 76, 81
ಮಾರ=ಮರಣ ಪಡಿಸುವವ, ಕೊಲ್ಲುವವ 192
ಮಾರು, ಮಾರ್=ಎರಡನೇ ಎದುರಾದ 85, 89
ಮಾರುತ=ಘಾಳಿ 60, 161, 249
ಮಿಕ್ಕ=ಉಳಿದ, ಬೇರೆ (ಮಿಗುವದು)
ಮಿಗಿಲು=ಹೆಚ್ಚು 42, 49
ಮಿಗುವದು=ಹೆಚ್ಚಾಗುವದು 47
ಮಿಗೆ=ಹೆಚ್ಚು, ಬಹಳ, ಘಟ್ಟಿಯಾಗಿ 35, 84, 166
ಮಿಡಿ=ಚಿಕ್ಕ ಕಾಯಿ 139
ಮಿತ್ರ=ಸೂರ್ಯ, ಸ್ನೇಹಿತ 186
ಮಿನುಗುವದು=ಹೊಳೆಯುವದು 156, 196
ಮಿರುಗುವದು=ಪ್ರಕಾಶಿಸುವದು 223
ಮಿರುಪು=ಪ್ರಕಾಶ 156, 239
ಮಿಸುಪು=ಪ್ರಕಾಶ 152
ಮೀನ=ಮೀನು
ಮುಂಗುಡಿ=ಮುಂದಗಡೆ 235
ಮುಂಚುವದು=ಮುಂದೆ ಹೋಗುವದು 236
ಮುಂಡ=ತಲೆ ಕತ್ತರಿಸಿದ ಮೈ 193
ಮುಂ-ದಳೆಯುವದು=ಮುಂದಕ್ಕೆ ಹೋಗುವದು 204
ಮುಂ-ಬನಿ=ಮೊದಲಿನ ಹನಿ 237
ಮುಕುಟ=ಕಿರೀಟ 45
ಮುಕುತಿ=ಮುಕ್ತಿ
ಮುಕುರ=ಕನ್ನಡಿ 119
ಮುಕ್ತಾಫಲ=ಮುತ್ತು 183
ಮುಗಿವುವದು=ಮುಚ್ಚಿಕೊಳ್ಳುವದು 209
ಮುಗುರುವದು=ಮೇಲ್ಬೀಳುವದು 244
ಮುಗುಳು=ಮೊಗ್ಗೆ 249
ಮುಗ್ಗುವದು=ಮುಣುಗುವದು, ಒಳಬೀಳುವದು 171
ಮುತ್ತಿಗೆ=ಮೇಲ್ಬೀಳುವಿಕೆ 33
ಮುದ=ಸಂತೋಷ 231
ಮುದ್ಗರ=ಸುತ್ತಿಗೆ 88, 189
ಮುನಿಸು=ಶಿಟ್ಟು 221
ಮುನ್ನ=ಮುಂಚೆ 34, 64
ಮುಸಲ=ವನಿಕೆ 88
ಮುಸುಂಡಿ=ಮೂರು ಧಾರೆಯ ಆಯುಧ 88
ಮುಸುಕುವದು=ಮೇಲ್ಬೀಳುವದು, ಮುಚ್ಚುವದು 94, 184, 188
ಮುಳಿಯುವದು=ಶಿಟ್ಟು ಪಡುವದು 180, 243
ಮೂ=ಮೂರು 142, 219
ಮೂಡಿಕೆ=ಬತ್ತಳಿಕೆ 84
ಮೂರುತಿ=ಮೂರ್ತಿ, ರೂಪ 2
ಮೂಷಕ=ಇಲಿ 205
ಮೃತಿ=ಮರಣ
ಮೃದು=ಮೆತ್ತಣ, ಪ್ರಿಯ 1
ಮೃದುತರ=ಬಹಳ ಮೃದುವಾದ 198
ಮೆರೆಯುವದು=ಡಂಭಾಚಾರವಾಗಿ ತಿರಿಗಾಡುವದು, ಪ್ರಕಾಶಿಸುವದು 75, 153, 155, 191, 238, 239
ಮೇಗೆ=ಮೇಲೆ 155
ಮೇಘ=ಮೋಡ
ಮೇಣ್=ಮೇಲೆ, ಮತ್ತು 140, 170, 219
ಮೇದಿನಿ=ಭೂಮಿ 86
ಮೇರುವೆ=ದಂಡಿಳಿದ ಘಟ್ಟಿ ಮಾಡಿದ ಸ್ಥಳ 94
ಮೇಳ=ಗುಂಪು 183
ಮೊಗ=ಮುಖ, ಬಾಯಿ 228
ಮೊಗಸುವದು=ಸಿದ್ಧ ಮಾಡುವದು 176
ಮೊರಹು=ಸಮುದ್ರದ ತೆರೆಗಳ ಮೊರಮೊರ ಎನ್ನುವ ಶಬ್ದ 196
ಮೊರೆಯುವದು=ಗುಣುಗುಟ್ಟುವದು, ಮೊರಮೊರ ಎನ್ನುವದು 140, 202, 206, 211, 214
ಮೊಳಗುವದು=ಗುಡುಗುವದು 1, 231
ಮೋಟ=ಕೈಯಿಲ್ಲದವ 147
ಮೋದ=ಸುಖ 23
ಮೋಹ=ಮರುಳು, ದಡ್ಡತನ 19, 181
ಮೋಹಿಸುವದು=ಮರುಳುಗೊಳ್ಳುವದು, ಆಶೆಪಡುವದು 19, 85
ಮೌಳ್ಯ=ಕಿರೀಟ 146

ಯ

ಯಾಗ=ಯಜ್ಞ 27
ಯಾಚಕ=ಭಿಕ್ಷೆಗಾರ 226
ಯಾತು=ಪಿಶಾಚ 193
ಯಾತ್ರೆ=ಹೋಗುವಿಕೆ 232
ಯಾನ=ವಾಹನ 116
ಯುಕುತಿ=ಯುಕ್ತಿ 95
ಯುಗ=ನಾಲ್ಕು ಮೊಳ ಉದ್ದ 84
ಯುತ=ಕೂಡಿದವ, ಉಳ್ಳವ, ಕೂಡಿದ್ದು 119, 201
ಯುವ=ಯೌವನ 180
ಯುವತಿ=ಯೌವನದ ಹೆಣ್ಣು 140

ರ

ರಂಗ=(ಯುದ್ಧದ) ಸ್ಥಳ, ಆಟ 190, 238
ರಂಜನ=ಬಣ್ಣ, ಪ್ರಕಾಶ 152
ರಂಜಿಸುವದು=ಪ್ರಕಾಶಿಸುವದು 152, 156, 207
ರಂಧ್ರಿಸುವದು=ಒಳಹೊಗುವದು 170
ರಕುತ=ರಕ್ತ
ರಚಿತ=ಮಾಡಲ್ಪಟ್ಟ 165
ರಜನಿ=ರಾತ್ರಿ 127
ರಣ=ಯುದ್ಧ 103, 187
ರಣೆ=ಕವಣೆ 178
ರತುನ=ರತ್ನ
ರನ್ನ=ರತ್ನ 151
ರಭಸ=ದೊಡ್ಡ ಧ್ವನಿ 190
ರಮಣ=ಗಂಡ, ಒಡೆಯ 181, 240
ರಮಣೀಯ=ರಮ್ಯ, ಬಹಳ ಚಂದ 72
ರವ=ಧ್ವನಿ 93, 119, 168, 187, 190
ರವಿ=ಸೂರ್ಯ 5, 127, 207
ರಸ=ಸಾರ, ನೀರು 196
ರಸ್ಮಿ=ಕಿರಣ 158
ರಾಗ=ಬಣ್ಣ, ಕೆಂಪು, ವ್ಯಸನ 207, 209
ರಾಗ-ಲೋಭ=ವ್ಯಸನವುಳ್ಳ ಲೋಭ 36
ರಾಜಿ=ಸಾಲು, ಸಮೂಹ 60, 93, 193, 211, 233
ರಾಜಿಸುವದು=ಹೊಳೆಯುವದು 249
ರಾಪು=ಬಹಳ ತೀವ್ರವಾದ ಓಟ 181
ರಾವ್ತ=ರಾವುತ, ಕುದುರೆ ಹತ್ತಿದವ 92
ರಿಪು=ವೈರಿ
ರುಂಡ=ತಲೆಬುರುಡೆ 193
ರುಚಿ=ಕಿರಣ 219
ರುಚಿಸುವದು=ಪ್ರೀತಿ ಮಾಡುವದು 146
ರುರು=ಒಂದು ಜಾತೀ ಜಿಂಕೆ 205
ರೂಢಿಸುವದು=ಹುಟ್ಟುವದು, ಇರುವದು, ಪ್ರತ್ಯಕ್ಷವಾಗುವದು 57
ರೇಣು=ಧೂಳು 184
ರೋಚಿ=ಕಿರಣ, ಪ್ರಕಾಶ 150, 200, 243
ರೋಮ=ಕೂದಲು
ರೋಮ-ಕೂಪ=(ತೊಗಲಲ್ಲಿರುವ) ಕೂದಲಿನ ತೂತು 33
ರೋಲಂಬ=ಜೇನುಹುಳ 219

ಲ

ಲಂಪಟ=ಕುಡಿಯುವವ, ಜಿಗಳಿ, ಆಶೆಗಾರ 11
ಲಂಬಿಸುವದು=ಕೆಳಗೆ ಬೀಳುವದು, ಜೋತಾಡುವದು 160, 235
ಲಡ್ಡುಗೆ=ಮಿಠಾಯಿ 234
ಲತೆ=ಬಳ್ಳಿ 153, 235
ಲಲಾಮ=ಶ್ರೇಷ್ಠ 230
ಲಲಿತ=ಪ್ರಿಯವಾದ, ಚಂದಾದ 3, 160
ಲಸತ್, ಲಸದ್=ಪ್ರಕಾಶಿಸುವ 199, 233
ಲಕ್ಷ್ಮಿ=ಐಶ್ವರ್ಯ 37
ಲಾಗು=ಹಾರ್ಯಾಟ 160
ಲಾಘವ=ಲಘುತನ, ಬೇಗತನ 189
ಲಾಭಿಸುವದು=ಲಾಭ ಹೊಂದುವದು 230
ಲಾಲಿಸುವದು=ಕಿವಿ ಕೊಡುವದು 1
ಲೀಲೆ=ಆಟ 202
ಲುಬ್ಧ=ಲೋಭಿ, ಹೆಚ್ಚು ಆಶೆಯವ 9

ಲುಬ್ಧಕ=ಬೇಡ 179
ಲೇಪನ=ಲೇಪ
ಲೇಸು=ಒಳ್ಳೇದು 78
ಲೋಚನ=ಕಣ್ಣು, ದೃಷ್ಟಿ 226
ಲೋವೆ=ಮನೆಯ ಮೇಲಿನ ಭಾಗ 156

ವ

ವಂಗಡ=ಸಮೂಹ 187
ವಕ್ಕಿ=ಹಕ್ಕಿ 157
ವಕ್ತ್ರ=ಬಾಯಿ 114
ವಜ್ಜರ=ವಜ್ರ 188
ವಜ್ರ-ಮುಷ್ಟಿ=ವಜ್ರದ ಮುಷ್ಟಿ, ಘಟ್ಟಿಯಾದ ಗುದ್ದು 249
ವಟ=ಆಲದ ಮರ 162
ವಟ್ಟಿ=ಬಟ್ಟೆ 84
ವಡಗು=ಹಡಗು 150
ವಡಬಾಗ್ನಿ=ವಡಬ-ಅಗ್ನಿ, ಸಮುದ್ರದ ಕೆಳಗದೆಂತ ಭಾವಿಸಿದ ಬೆಂಕಿ 149
ವಡಯುವದು=ಒಳಶಿಕ್ಕುವದು 15
ವಣ್, ವಣ್ಣು=ಹಣ್ಣು 248
ವತ್ಸರ=ವರುಷ 145
ವದನ=ಬಾಯಿ 13
ವಧು=ಸ್ತ್ರೀ 108
ವನ=ತೋಟ, ಕಾಡು
ವನಧಿ=ಸಮುದ್ರ 86
ವನ-ಮಹಿಷ=ಕಾಡುಕೋಣ 175
ವನಿ=ತೋಟ, ಮನೆ; ನೀರುಹನಿ 153, 239
ವನಿತೆ=ಸ್ತ್ರೀ 8, 41, 140
ವಪ್ಪು=ಒಪ್ಪು, ಚೆಲ್ವಿಕೆ, ಮರ್ಯಾದೆ 109
ವರ=ಶ್ರೇಷ್ಠ 5, 43, 159
ವರ-ದ=ವರಗಳನ್ನು ಕೊಡುವವ 68
ವರ-ಸಿಂಧು=ಗಂಗಾನದಿ 188
ವರುಷ=ಮಳೆ 88
ವರುಷಾಗಮ=ವರುಷ-ಆಗಮ, ಮಳೇ ಬರುವಿಕೆ 230

ವರೂಥ=ರಥ 43, 185
ವರ್ಗ=ಸಮೂಹ, ಕುಲ 72
ವಲೆ=ಬಲೆ 163, 164
ವಳಯ=ಬೇಲಿ, ಗತಿ 217
ವಹ್ನಿ=ಅಗ್ನಿ, ಬೆಂಕಿ 161, 162
ವಳ್ಳಿ=ಬಳ್ಳಿ
ವಾಜಿ=ಕುದುರೆ 43, 193, (227, 230, 238, 239ನೇ ಶ್ಲೋಕಗಳಲ್ಲಿಯ ಕುದುರೆಯು ಅಶ್ವಮೇಧಕ್ಕೆ ನೇಮಿಸಲ್ಪಟ್ಟದ್ದು)
ವಾನರ=ಮಂಗ 163
ವಾಯಸ=ಕಾಗೆ 164, 220
ವಾಯು=ಘಾಳಿ 226
ವಾಯುವದು=ಹಾಯುವದು 177
ವಾರಿ=ನೀರು
ವಾರಿ-ಧಿ=ಸಮುದ್ರ 68
ವಾರ್ಧಕ=ಮುಪ್ಪಾಗುವ ಕಾಲ 30
ವರ್ಧನ=ಹೆಚ್ಚಿಸುವಂಥಾದ್ದು (-ಥವನು) 212
ವಾಲ=ಬಾಲ 183
ವಾಸಿತ=ವಾಸನೆಯಾದ ಸ್ಥಿತಿ 159
ವಾಸ್ತು=ಮನೆ 152
ವಿಂಡು=ಹಿಂಡು
ವಿಕಟ=ಹಗೆ, ನೀಚತನ 113
ವಿಕಿರ=ಅಲ್ಲಲ್ಲಿ ಬಿದ್ದಿರುವಿಕೆ 205
ವಿಗಡ=ಕ್ರೂರ, ಕಠಿಣ 33
ವಿಚಿತ್ರ=ಬಹಳ ವರ್ಣನೆ 80
ವಿಜಾತಿ=ಕೆಟ್ಟ ಭಾವ 230
ವಿಡುವದು=ಬಿಡುವದು 176, 177, 223
ವಿಡು-ವಾಯಿ=ಬಿಟ್ಟಂಥ ಬಾಯಿ 177
ವಿತ್ತ=ಐಶ್ವರ್ಯ, ಬದುಕು 23, 220 (ಈ 220ನೇ ಶ್ಲೋಕದ 2ನೇ ಚರಣದಲ್ಲಿ 'ಲಾಭಮಂ' ಎಂಬದಕ್ಕೆ ಬದಲಾಗಿ 'ಲಾಭವೇ' ಎಂತ ಹಾಕ ತಕ್ಕದ್ದಾಗಿದೆ)
ವಿದರ್ಭನು=ವಿದರ್ಭದ ರಾಜನು, ಭೀಷ್ಮಕ 40
ವಿದ್ಯಾರ್ಥ=ವಿದ್ಯೆಯ ಅರ್ಥ 5
ವಿದ್ರುಮ=ಹವಳ 158

ವಿನಿಯೋಗ=ನಡಿಸುವಿಕೆ, ಪಾರುಪತ್ಯ 153
ವಿಪಿನ=ಕಾಡು 38
ವಿಫುಲ್ಲಿತ=ದೊಡ್ಡದಾಗಿ ತೆರೆದ 227
ವಿಭಾಸೆ=ಪ್ರಕಾಶ 79
ವಿಭು=ರಾಜ 122
ವಿಮಲ=ಮಲವಿಲ್ಲದ 201
ವಿಮಲತರ=ಬಹಳ ತಿಳಿಯಾದ 82
ವಿಮೋಚನ=ಬಿಟ್ಟು ಹೋಗುವಿಕೆ 226
ವಿರಚಿತ=(ಚಂದಾಗಿ) ಕಟ್ಟಲ್ಪಟ್ಟ 241
ವಿರಹಿ=ಇಲ್ಲದ 236
ವಿರಾಜಿತ=ಬಹಳವಾಗಿ ಪ್ರಕಾಶಿಸುವ, ಗೋಚರ, ಪ್ರಕಟ 198, 212
ವಿಲಾಸ=ಸುಖ 78
ವಿವಿಧ=ಬಹಳ ವಿಧ 205
ವಿವೇಕ-ಶೂನ್ಯ=ವಿವೇಕ ಅಥವಾ ಬುದ್ಧಿಯಿಲ್ಲದ 17
ವಿಶಾಲ=ವಿಸ್ತಾರ 155
ವಿಶೋಕ=ಚಿಂತೆಯಿಲ್ಲದ ಸ್ಥಿತಿ 80
ವಿಷಮ=ಸಮವಲ್ಲದ್ದು, ತಗ್ಗುಮುಗ್ಗು, ಕಷ್ಟ 205, 237
ವಿಸರ=ಹೆಚ್ಚು, ಗುಂಪು 209
ವಿಸ್ತರ=ವಿಸ್ತಾರ, ಬಹಳ, ಹೆಚ್ಚುವಿಕೆ 141, 159, 240
ವಿಹಾರಿಸುವದು=ತಿರಿಗಾಡುವದು 213
ವೀಚಿ=ಸಮುದ್ರದ ತೆರೆ 118, 150
ವೀಥಿ=ದಾರಿ 237
ವೀಧಿ=ಬೀದಿ, ಮಾರ್ಗ 217
ವೀರ=ಶೂರ
ವೀರ್ಯ=ಶೂರತನ 180
ವೃಂದ=ಹಿಂಡು 222
ವೃಕ=ತೋಳ 205
ವೃತ್ತ=ದುಂಡಾಕಾರವುಳ್ಳದ್ದು 212
ವೃಶ್ಚಿಕ=ಚೇಳು 8
ವೃಷಧ್ವಜ=ಕರ್ಣನ ಮಗ 240
ವೃಷ್ಟಿ=ಮಳೆ 88, 128
ವೆಕ್ಕಸ=ಬಹಳ 10
ವೆಗ್ಗಳ=ಹೆಚ್ಚು, ಶ್ರೇಷ್ಠ 5
ವೆಗ್ಗಳಿಕೆ=ಹೆಚ್ಚುವಿಕೆ, ಬಾಹುಳ್ಯ 215
ವೆಗ್ಗಳಿಸುವದು=ಹೆಚ್ಚಾಗುವದು 239
ವೆಥೆ=ವ್ಯಥೆ, ವ್ಯಸನ 8
ವೆರ್ಥ=ವ್ಯರ್ಥ 6, 66
ವೆವಹಾರ=ವ್ಯವಹಾರ, ವ್ಯಾಪಾರ 65
ವೆಳಗು=ಬೆಳಕು 224
ವೇಗ=ಬೇಗ 45
ವೇದನೆ=ಬೇನೆ, ನೋವು 16
ವೇಳುವದು=ಹೇಳುವದು 172
ವೊಗರು=ಪ್ರಕಾಶ 244
ವೊಡ=ವೊಡಕು ಆದ 96
ವೊನಲು=ಹೊಳೆ 239
ವೊಯ್ಯುವದು=ವೈಯ್ಯುವದು, ತಕ್ಕೊಂಡು ಹೋಗುವದು 82
ವೋಲ್, ವೋಲು=ಹಾಗೆ 29, 244
ವ್ಯಾಘ್ರ=ಹುಲಿ 179
ವ್ಯಾಧ=ಬೇಡ 180
ವ್ರಜ=ಸಮೂಹ, ಹಿಂಡು 184, 241
ವ್ರಾತ=ಗುಂಪು 178

ಶ

ಶಕುನಿ=ಚಾಷ, ಒಂದು ಜಾತೀ ನೀಲ ವರ್ಣದ ಪಕ್ಷಿ 205
ಶಕ್ತಿ=ಕಬ್ಬಿಣದ ಕೋಲು 88, 189
ಶಬರ=ಒಂದು ಜಾತೀ ಕಾಡುಜನ 172
ಶಬರಿ=ಶಬರರ ಸ್ತ್ರೀ 180
ಶಯನ=ಮಲಗುವಿಕೆ 152
ಶರ=ಅಂಬು 94, 172
ಶರಧಿ=ಸಮುದ್ರ 16, 68
ಶರಭ=ಎಂಟು ಕಾಲಿನ ಮೃಗ 163
ಶರಾಸನ=ಶರ ಆಸನ, ಬಿಲ್ಲು 89
ಶರ್ಮ=ಸಂತೋಷ, ಸಮಾಧಾನ 96

ಶಲಭ=ರೆಕ್ಕೆ ಬಂದ ಗೆದ್ದಲೆ 18
ಶಲ-ಮೃಗ=ಮುಳ್ಳುಹಂದಿ 163
ಶಲ್ಯಹ=ಶಲ್ಲೆಹ 189
ಶಲ್ಲೆಹ=ಹಾರಿಸುವ ಕೋಲು 88
ಶಶ=ಮೊಲ 94, 205, 212
ಶಶಿ=ಚಂದ್ರ 58, 219
ಶಶಿ-ಕಾಂತ=ಚಂದ್ರ-ಕಾಂತ 239
ಶಸ್ತ=ಶ್ರೇಷ್ಠ 159
ಶಸ್ತ್ರ=ಹೊಡೆಯುವ, ಶಿವಿಯುವ ಆಯುಧ 87, 249
ಶಾಖೆ=ಮರದ ಕೊಂಬೆ 166
ಶಾದ್ವಲ=ಹುಲ್ಲು 233
ಶಾದ=ಕೆಸರು 82
ಶಾನೆ=ಬಹಳ 79
ಶಾಪ-ಹರ=ಶಾಪ ಪರಿಹರಿಸುವವ 73
ಶಾರ್ದೂಲ=ಹೆಬ್ಬುಲಿ 163
ಶಾಲಿ=ಭತ್ತದ ಪೈರು 244
ಶಾಲೂರ=ಕಪ್ಪೆ 149
ಶಿಂಗರ=ಶೃಂಗಾರ 83
ಶಿಕ್ಕು=ತೊಡಕು 69
ಶಿಕ್ಕು-ಒಡೆಯುವದು=ತೊಡಕು ಹೊಂದುವದು, ತೊಡಕಾಗುವದು 69
ಶಿಖರಿ=ಪರ್ವತ 88
ಶಿಖಿ=ಬೆಂಕಿ, ನವಿಲು 166. 182, 231
ಶಿರ=ತಲೆ 171
ಶಿರಿ=ಶ್ರೀ, ಐಶ್ವರ್ಯ 63, 68, 123
ಶಿಲುಕುವದು=ಶಿಕ್ಕುವದು 62
ಶೀತಳ=ತಂಪು, ಛಳಿ 219, 225
ಶೀರ್ಣ=ಚಿಕ್ಕ, ಹಾಳು 205
ಶುಕ=ಗಿಳಿ 119, 164, 231
ಶುನಕ=ನಾಯಿ 12
ಶೆಗಳಿಕೆ=ಆವಿ 213
ಶೈತ್ಯ=ಛಳಿ
ಶೈಲ=ಪರ್ವತ, ಬೆಟ್ಟ 228, 241
ಶೈಶಿರ=ಶಿಶಿರದ ಸಂಬಂಧವಾದ ಕಾಲ, ಛಳೀಕಾಲದ ಎರಡನೇ ಭಾಗ 218
ಶೋಕ=ಚಿಂತೆ, ದುಃಖ 19, 66
ಶೋಣ=ಕೆಂಪು 188, 207 [188
ಶೋಣಾಚಲ=ಶೋಣ-ಅಚಲ, ಕೆಂಪು ಪರ್ವತ
ಶೋಭಿತ=ಪ್ರಕಾಶಿಸುವ 106, 186
ಶೌರ್ಯ=ಶೂರತನ 103, 169
ಶ್ರವ=ಕಿವಿ, ಕೇಳುವಿಕೆ 5
ಶ್ರೀ=ಐಶ್ವರ್ಯ 97, 212
ಶ್ರೀಕರ=ಚಂದಾದ 198
ಶ್ರೇಣಿ=ಸಾಲು 150
ಶ್ರುತಿ=ಕಿವಿ 109
ಶ್ವಾನ=ನಾಯಿ 6, 79, 102

ಷ

ಷಡ್, ಷಟ್=ಆರು 72, 125

ಸ

ಸಂಕುಲ=ಗುಂಪು 201, 205
ಸಂಕುಳ=ಸಂಕುಲ 168
ಸಂಗ=ಬಳಿಕೆ, ಸಮೂಹ 4, 74, 199
ಸಂಗಡಿಸುವದು=ಆಗುವದು 187
ಸಂಗತನು=ಕೂಡಿದವನು 83
ಸಂಗ್ರಹ=ಕೂಟ, ಸಮೂಹ 16
ಸಂಘ=ಕೂಟ, ಸಮೂಹ 113
ಸಂಚೈಯಿಸುವದು=ಸಂಪಾದಿಸಿ ಕೊಳ್ಳುವದು 81
ಸಂಣಿಗೆ=ಮಳಲು 199
ಸಂತತಂ=ಯಾವಾಗಲೂ 200
ಸಂತಸ=ಸಂತೋಷ 247
ಸಂದಣಿ=ಗುಂಪು 197
ಸಂದಣಿಸುವದು=ಗುಂಪಾಗಿ ಕೂಡುವದು 186, 188
ಸಂಧಿಸುವದು=ಕಲತು ಕೊಳ್ಳುವದು, ಶೇರುವದು 38

ಸಂಧ್ಯಾ (-ಧ್ಯೆ)=ಸಂಜೀ ಹೊತ್ತು 207
ಸಂಪತ್ತು=ಬದುಕು 8, 68
ಸಂಪದ=ಸಂಪತ್ತು 48
ಸಂಭಾವಿಸುವದು=ಮಾನ ತೋರಿಸುವದು 140
ಸಂಭ್ರಮ=ಬಹಳ ಭ್ರಮ, ಬಹಳ ಮರುಳು 7
ಸಂಸಾರ=ಲೋಕದ ಕೆಲಸ, ಲೋಕ 15, 68
ಸಂಸೃತಿ=ಸಂಸಾರ 7, 16
ಸಂಹೃತಿ=ಸಂಹಾರ 169
ಸಗ್ಗ=ಸ್ವರ್ಗ 9
ಸಜ್-ಜನ=ಸತ್ಯವುಳ್ಳ ಜನ 4
ಸಡಿಲುವದು=ಸಡ್ಲಾಗುವದು 20, 193
ಸತಿ=ಹೆಂಡತಿ 37, 63, 113, 127
ಸತ್ (ಸದ್, ಸಜ್)=ನಿಜ, ಸತ್ಯವಾದ
ಸತ್ತಿಗೆ=ಛತ್ರ, ಕೊಡೆ 214
ಸತ್ವ (ಸತ್ತ್ವ)=ತ್ರಾಣ 124
ಸದಾ=ಯಾವಾಗಲೂ 114
ಸದ್-ಧಾರ್ಮಿಕ=ನಿಜ ಧರ್ಮವುಳ್ಳ 112
ಸನ್ನಾಹ=ಸೌರಣೆ, ಸಿದ್ಧ ಮಾಡುವಿಕೆ 185
ಸನ್ನೆ=ಸನ್ನೆಗೋಲು 124
ಸಬಳ=ಈಟಿ 196
ಸಮರ=ಯುದ್ಧ 93, 186
ಸಮರ್ಪಿಸುವದು=ಕೊಡುವದು 248
ಸಮಾಗಮ=ಐಕ್ಯ, ಬರುವಿಕೆ 36
ಸಮಾನನು=ಸರಿಯಾದವನು 2
ಸಮುನ್ಮೀಳಿತ=ತುಂಬಿದ್ದಾದ 196
ಸರ=ಸ್ವರ; ಕೆರೆ 214, 241, 249
ಸರಣಿ=ಮಾರ್ಗ 184
ಸರಸ=ಚಂದ, ಬೇಗ 207
ಸರಸಿ=ಕೆರೆ 127, 201
ಸರಸಿಜ=ತಾವರೆ 222
ಸರಳು=ಅಂಬು 88, 89, 176, 192
ಸರಿ=ಜಡಿಮಳೆ 88
ಸರಿಸ=ಹತ್ತರ 179
ಸರೀಸೃಪ=ಹಾವು 205
ಸರ್ಬ=ಸರ್ವ 185
ಸರ್ವ-ಜ್ಞ=ಎಲ್ಲಾ ತಿಳಿದವ 4
ಸರ್ವಥಾ=ಎಲ್ಲಾ ವಿಷಯದಲ್ಲಿ 5
ಸರ್ವೋತ್ತಮ=ಸರ್ವ-ಉತ್ತಮ, ಸರ್ವರಲ್ಲಿಯೂ ಸರ್ವದಲ್ಲಿಯೂ ಉತ್ತಮನಾದ 70
ಸಲೆ=ಬಹಳ, ಬಹಳವಾಗಿ 121, 156, 248
ಸಲ್ಲಲಿತ=ಚಂದ 227
ಸಲ್ಲಾಪ=ಸಂಭಾಷಣೆ 173, 246
ಸವ=ಸವು, ನುಣುಪು 151
ಸವಿಯುವದು=ಉಣ್ಣುವದು 105
ಸವ್ವಳಿ=ಉಬ್ಬುವಿಕೆ 149
ಸಹಕಾರ=ಪರಿಮಳವುಳ್ಳ ಮಾವು 246
ಸಾಕಾರ=ಆಕಾರವುಳ್ಳದ್ದು 66
ಸಾಧನ=ಬದುಕು, ಉಪಾಯ 40, 82
ಸಾಧಿಸುವದು=ಉಂಟು ಮಾಡುವದು, ಪಡಕೊಳ್ಳುವದು, ಉಪಾಯ ಮಾಡುವದು, ಮನಗೊಟ್ಟು ನಡಿಸುವದು 13, 118, 141
ಸಾಮ್ರಾಜ್ಯ=ದೊಡ್ಡ ರಾಜ್ಯ 37
ಸಾರ=ಬಲ, ಸಮೂಹ 192
ಸಾರಸ=ಬಕಪಕ್ಷಿ 164, 216
ಸಾರಿಸುವದು=ಶಬ್ದ ಮಾಡಿಸುವದು 223
ಸಾರುವದು=ಶೇರುವದು, ಹತ್ತರ ಹೋಗುವದು, ಕೂಗುವದು, ಪ್ರಸಂಗ ಮಾಡುವದು 38, 39, 40, 47, 56, 73, 225
ಸಾರ್ಚುವದು=ಶೇರುವದು, ಹತ್ತರ ಹೋಗುವದು 176
ಸಾಲ=ತೇಗುಮರ 162
ಸಾವು=ಮರಣ 140
ಸಿಂಗ=ಸಿಂಹ 175, 180
ಸಿಂಗರಿಸುವದು=ಶೃಂಗರಿಸುವದು 84
ಸಿಂಜಿನಿ=ಬಿಲ್ಲಿನ ಹಗ್ಗ 86
ಸಿಂಧ=ಒಂದು ತರದ ಬಾವಟೆ 188
ಸಿಗುರಿ=ಸಿಗುರು, ಕಬ್ಬಿನ ಹೊರಗಡೆ 3
ಸಿಮಿಸುವದು=ಸಿಮಿಸಿಮಿ ಎಂದು ಬೀಳುವದು 161

ಸಿರಿ=ಶ್ರೀ, ಐಶ್ವರ್ಯ 75, 224
ಸೀಕರ=ಶಿಡಿಯುವಿಕೆ 202
ಸೀಗುರಿ=ಒಂದು ತರದ ಛತ್ರ,—ಕೊಡೆ 188
ಸೀಯುವದು=ಕಮರುವದು 165
ಸೀವರಿಸುವದು=ಸೀಸೀ ಎಂದು ಮೈಯ ಮೇಲೆ ಬೀಳುವದು 140
ಸು=ಒಳ್ಳೇ
ಸುಕ=ಸುಖ
ಸುಕರ=ಒಳ್ಳೇ 153
ಸು-ಕೃತ=ಒಳ್ಳೇದಾದ 140
ಸು-ಜ್ಞಾನ=ಒಳ್ಳೇ ಜ್ಞಾನ 2, 4
ಸುತ=ಮಗ
ಸು-ನಿವೇಶ=ಹಗುರಾದ ಪ್ರವೇಶ 95
ಸುಪ್ತ=ನಿದ್ರೆಯುಳ್ಳವ 57
ಸು-ಪ್ರಖ್ಯಾತ=ಒಳ್ಳೇ ಕೀರ್ತಿ ಪಟ್ಟ 37
ಸು-ಭಾ-ಗತಿ=ಒಳ್ಳೇ ಪ್ರಕಾಶದ ಗತಿ 118
ಸು-ಭಾನು=ಬಹಳ ಚೆಲ್ವಿಕೆ 79
ಸುಮನಸ್ಸು=ಪುಷ್ಪ 88
ಸುಯ್ಯುವದು=ನಿಟ್ಟುಸುರು ಕಳೆಯುವದು, ಉಸುರು ಕಳೆಯುವದು 42, 171, 204
ಸು-ರಂಚಿ=ಚಂದಾಗಿ ರಚಿಸಿದವನು (ದೇವರು) 157
ಸುರಗಿ=ಕಠಾರಿ 189
ಸುರ-ಚಾಪ=ಮಳೇ ಬಿಲ್ಲು 123
ಸುರಕ್ಷಿಸುವದು=ಚಂದಾಗಿ ರಕ್ಷಿಸುವದು 137
ಸು-ಲಭ=ಚಂದಾಗಿ ಲಾಭಿಸುವ (ಲಾಭವಾಗುವ), ಹಗುರಾದ 3
ಸುಲಲಿತ=ಚಂದ 209
ಸುಲಿಯುವದು=ಸಿಪ್ಪೆ ತೆಗೆಯುವದು 3
ಸುವಾರಿ=ವರ್ತೆ, ಒರ್ತೆ, ನೀರುಬುಗ್ಗೆ 233
ಸುವಿಧಾನ=ಕಾಪಾಡುವಿಕೆ 220
ಸು-ಹೃದಯ=ಒಳ್ಳೇ ಹೃದಯುದವ, ಸ್ನೇಹಿತ 68
ಸುಳಿ=ಸುಳಿದಾಟ, ತಿರಿಗಾಟ 196, 202
ಸುಳಿವು=ತಿರಿಗಾಟ, ಚಂಚಲವಾದ ಪ್ರಕಾಶ 62
ಸೂಕರ=ಹಂದಿ 6, 163
ಸೂತ=ರಥ ನಡಿಸುವವ 43
ಸೂಪ=ಅಡಿಗೆ 152
ಸೂಯಮಾನ=ಹೆಚ್ಚಿನವ, ಮುಖ್ಯವಾದವ 9
ಸೂರೆ=ಲೂಟಿ 223
ಸೂಸಕ=ಹೂವುಳ್ಳ ಶೃಂಗಾರ 156
ಸೃಜಿಸುವದು=ಸೃಷ್ಟಿಸುವದು 41
ಸೆಡೆ=ಸೊಟ್ಟಾಗಿರುವಂಥಾದ್ದು 145
ಸೆಳೆದ=ಸೊಟ್ಟಾಗಿ ಹಿಡಿದ (ಅಥವಾ ಉದ್ದಕ್ಕೆ ಹಿಡಿದ) 177
ಸೇವಿಸುವದು=ತಿನ್ನುವದು 78
ಸೈರಿಸುವದು=ಹೊರುವದು, ತಾಳುವದು 230
ಸೊಂಪಗೆ=ಚಂದಾಗಿ 82
ಸೊಂಪು=ಚಂದ, ಚೆಲ್ವಿಕೆ 156, 215, 233
ಸೊಗಡು=ವಾಸನೆ, ನಾತ 174, 219
ಸೊಗಯಿಸುವದು=ಸೊಗಸುವದು, ರಮ್ಯವಾಗುವದು 247
ಸೊಗಸು=ಚೆಲೋ, ರಮ್ಯ, ಪಸಂದು 44
ಸೊಗಸುವದು=ಒಪ್ಪುವದು, ಚೆಲೋದಾಗುವದು 79, 80, 83, 213
ಸೊಡರು=ದೀಪ 62, 123
ಸೊಸ್ಥ=ಸ್ವಸ್ಥ 67
ಸೊಯಂವರ=ಸ್ವಯಂವರ, ಮದುವೆಗೆ ಒಬ್ಬ ಪುರುಷನನ್ನು ಆದು ಕೊಳ್ಳುವದು 41
ಸೋಕುವದು=ಸೊಂಕುವದು, ಹತ್ತುವದು 42
ಸೋಗೆ=ಉದ್ದ ಎಲೆ, ನಾಲು 244, 247
ಸೋದು, ಸೋದ್=ಸವಿ 102
ಸೋನೆ=ಒಂದು ತರದ ಮಳೆ 88
ಸೋಪಾನ=ಮೆಟ್ಟುಗಳು 165, 199
ಸೋವುವದು=ಓಡಿಸುವದು, ಬಡಿದು ನೋಡುವದು 172, 178, 228, 245
ಸೋಸುವದು=ಶೋಧಿಸುವದು 118
ಸೌಕ್ಯ=ಸೌಖ್ಯ
ಸ್ತೋಮ=ಗುಂಪು 159, 169
ಸ್ವಚ್ಛ=ಶುದ್ಧತೆ, ಶುದ್ಧವಾಗಿರುವಿಕೆ 114

ಸ್ವನ=ಶಬ್ದ 198, 243
ಸ್ವರ=ಧ್ವನಿ
ಸ್ವಾದಿಸುವದು=ಸವಿಯಾಗುವದು 26
ಸ್ವೈರ=ಸ್ವೇಚ್ಛೆ, ಸಂತೋಷ 246

ಹ

ಹಂಗಿಗನು=ಹಂಗಿನವನು 35
ಹತ=ಹೊಡೆಯಲ್ಪಟ್ಟ 184
ಹತಿ=ಪೆಟ್ಟು 248
ಹಬ್ಬುಗೆ=ಹಬ್ಬುವಿಕೆ, ದೊಡ್ಡ ಭಾವ 167, 177
ಹಮ್ಮು=ಗರ್ವ 12
ಹಯ=ಕುದುರೆ 42, 44, 45, 93, 187
ಹಯ-ಜ್ಞತೆ=ಕುದುರೆಗಳ ವಿಷಯವಾದ ವಿದ್ಯೆ 42
ಹರಣ=ತೆಗೆಯುವಿಕೆ 232
ಹರದು=ಹರಿದು, ಹರೆದು (ಹರಿಯುವದು)
ಹರಿ=ಸಿಂಹ 173
ಹರಿಗೆ=ಹಲಿಗೆ, ಡಾಲು 92
ಹರಿಣ=ಜಿಂಕೆ, ಎರಳೆ 173
ಹರಿಣಿ=ಹೆಣ್ಣು ಹರಿಣ 101
ಹರಿದ್ರ=ಅರಿಸಿನ 239
ಹರಿಯುವದು=ಅಗಲಿ ಹೋಗುವದು, ಹರಿದು (=ಕೆಟ್ಟು) ಹೋಗುವದು 48, 213
ಹರೆ=ಗಿಡಗಳ ಟೊಂಗೆ,—ಕೊಂಬೆ 87
ಹಲವು=ಅನೇಕ 27, 89
ಹವಣು=ಉಪಾಯ, ತಕ್ಕ ರೀತಿ 46
ಹವಿ=ತುಪ್ಪ 127
ಹಳಚುವದು=ಕಡಿಯುವದು, ಹೊಡೆಯುವದು 91
ಹಳುವ=ವನ, ಕಾಡು 40, 180, 204
ಹಾನಿ=ನಾಶನ, ಕೇಡು 17, 128
ಹಾರ=ಹಿಡುಕೊಳ್ಳುವವ 192
ಹಾಸು=ಕೊರಳಿನ ಕಟ್ಟು, ಕೊರಳಿನ ಹಗ್ಗ 172, 177
ಹಿಂಗುವದು=ಬಿಟ್ಟು ಬಿಡುವದು 83
ಹಿಂಡಿ=ಪಿಂಡಿ, ದೇಹ 32
ಹಿಮಕರ=ಛಳಿ ಮಾಡುವವ, ಚಂದ್ರ 199
ಹಿರಿದು=ದೊಡ್ಡದು, ದೊಡ್ಡದಾಗಿ, ಬಹಳವಾಗಿ 15
ಹಿಳಿಯುವದು=ರಸ ಕಾದು ಒಡೆಯುವದು 165, 168
ಹೀನತೆ=ಇಲ್ಲದ ಭಾವ 96, 97
ಹುಲ್ಲೆ=ಪುಲ್ಲೆ, ಜಿಂಕೆ 182
ಹುಳು=ಹುಳ 15
ಹೂಂಕೃತಿ=ಹೂಂಹೂಂ ಎನ್ನುವಿಕೆ 85
ಹೂಡುವದು=ಸಿದ್ಧ ಮಾಡುವದು 85
ಹೂಳುವದು=ಹೂಣುವದು, ಒಳ ಹೊಗುವದು 87
ಹೆಂ=ದೊಡ್ಡ
ಹೆಬ್=ಹೆಂ 168, 177
ಹೆಬ್ಬಲ್ಲು=ಹೆಬ್-ಹಲ್ಲು, ದೊಡ್ಡ ಹಲ್ಲು 177
ಹೆಮ್ಮಾರಿ=ಬಹಳ ಕ್ರೂರವಾದವಳು 98
ಹೇತಿ=ಆಯುಧ
ಹೇಮ=ಭಂಗಾರ 155
ಹೇಮಂತ=ಛಳೀ ಕಾಲದ ಮೊದಲಿನ ಭಾಗ 218
ಹೇವ=ನಾಚಿಕೆ 95
ಹೇಷಿತ=ಹೇಷಿಸಿದ (ಕುದುರೆಯ ಶಬ್ದದ್ದು) 93
ಹೊಂ=ಹೊನ್ನು 44
ಹೊಡ-ಕರಿಸುವದು=ಹೊಡೆಯಲಿಕ್ಕೆ (ಹೊಡೆಯುವ ಹಾಗೆ) ಕರಿಸುವದು (ಸುರಿಸುವದು) 135
ಹೊದರು=ಪೊದೆ, ಗಿಡಗಳ ಗುಂಪು 161, 166
ಹೊಯ್ಲು=ಹೊಯಿದಾಟ, ಹೊಡದಾಟ 87, 235
ಹೊರ=ಹೊರಗೆ, ಹೊರಗಿನ
ಹೊರವಡುವದು=ಹೊರಡುವದು 69

ಕ್ಷ

FINIS



Minor
CANARESE POETICAL
Anthology

SECOND EDITION

ಸಣ್ಣ ಕರ್ನಾಟಕ

ಕಾವ್ಯಮಾಲೆ

MANGALORE
PRINTED BY PLEBST & STOLZ, BASEL MISSION PRESS
1868